# ಆಧುನಿಕ ಭಾರತದ ಇತಿಹಾಸ

# Modern Indian History

## ಯುರೋಪಿಯನ್ನರ ಆಗಮನ

ಭಾರತ & ಯೂರೋಪ್ ರಾಷ್ಟ್ರಗಳ ನಡುವೆ ವ್ಯಾಪಾರ ಸಂಬಂಧ ಬಹಳ ಪ್ರಾಚೀನ ಕಾಲದಿಂದಲೂ ಇದ್ದಿದ್ದು, ಅಲೆಗ್ಸಾಂಡರ್ ಆಗಮನದಿಂದ ಈ ಸಂಪರ್ಕ ಇನ್ನಷ್ಟು ಹೆಚ್ಚಿತು.

- ಏಷ್ಯಾ ಮೈನರ್‌ನ್ನು ಅಟ್ಟೋಮನ್ ಗೆದ್ದು 1453 ರಲ್ಲಿ ಕಾನ್‌ಸ್ಟಾಂಟಿನೋಪಲ್‌ನ್ನು ವಶಪಡಿಸಿಕೊಂಡನು. ಪೂರ್ವ & ಪಶ್ಚಿಮಗಳ ನಡುವಿನ ವ್ಯಾಪಾರ ನಿಯಂತ್ರಣ ತುರ್ಕಿಗಳ ನಿಯಂತ್ರಣಕ್ಕೆ ಬಂದಿತು.
  - ಎ) ಅಫಘಾನಿಸ್ತಾನ ಮಧ್ಯ ಏಷ್ಯಾ & ಕ್ಯಾಸ್ಪಿಯನ್ ಸಮುದ್ರ ಮಾರ್ಗವಾಗಿ ರಷ್ಯ ಸಮುದ್ರ ತೀರದವರೆಗೆ,
  - ಬಿ) ಪರ್ಷಿಯಾ & ಸಿರಿಯಾ ಮಾರ್ಗವಾಗಿ ಮೆಡಿಟರೇನಿಯನ್ ಪ್ರದೇಶದಲ್ಲಿರುವ ಅಲೆಗ್ಸಾಂಡ್ರಿಯವರೆಗೆ,
  - ಸಿ) ಅರಬ್ಬಿ ಸಮುದ್ರ ಪರ್ಷಿಯನ್ ಕೊಲ್ಲಿ & ಕೆಂಪು ಸಮುದ್ರ ಮೊದಲಾದ ಮೂರು ಜಲಮಾರ್ಗಗಳ ಮೂಲಕ ವ್ಯಾಪಾರ ನಡೆಯುತ್ತಿತ್ತು.
- ಕಾನ್‌ಸ್ಟಾಂಟಿನೋಪಲ್ ನಗರ ವಶಪಡಿಸಿಕೊಂಡಿದ್ದರಿಂದ 'ಅಫಘಾನಿಸ್ತಾನದ' ಮಾರ್ಗವಾಗಿ ನಡೆಯುತ್ತಿದ್ದ ವ್ಯಾಪಾರಕ್ಕೂ ತಡೆ ಉಂಟಾಯಿತು.
- ಅರೇಬಿಯನ್ನರ ದಂಡಯಾತ್ರೆ ಪರಿಣಾಮವಾಗಿ ಇತರ 02 ಮಾರ್ಗಗಳನ್ನು 08ನೇ ಶತಮಾನದಲ್ಲಿ ತಡೆ ಹಿಡಿಯಲಾಯಿತು.
- ಇದರಿಂದ ಯುರೋಪಿಯನ್ನರು ಭಾರತದ ವಸ್ತುಗಳಲ್ಲದೇ ತೊಂದರೆಗೆ ಒಳಗಾಗಿ ಹೇಗಾದರೂ ಭಾರತದ ವಸ್ತುಗಳನ್ನು ಪಡೆದುಕೊಳ್ಳಬೇಕೆಂಬ ಪ್ರಯತ್ನದಲ್ಲಿ ಹೊಸ ಜಲಮಾರ್ಗ ಕಂಡು ಹಿಡಿಯುವುದು ಅನಿವಾರ್ಯವಾಯಿತು.
- ಇದರ ಜೊತೆಗೆ 'ವೆನಿಸ್ & ಜಿನೇವಾ ನಗರಗಳ ವರ್ತಕರು ಯೂರೋಪ & ಏಷ್ಯಾ ನಡುವಿನ ವ್ಯಾಪಾರವನ್ನು ಏಕಸ್ವಾಮ್ಯ ಮಾಡಿಕೊಂಡು ಪಶ್ಚಿಮ ಯೂರೋಪಿನ ಹೊಸ ರಾಷ್ಟ್ರಗಳು ವಿಶೇಷವಾಗಿ 'ಸ್ಪೈನ್ & ಪೋರ್ಚುಗಲ್ ಹಳೆಯ ವ್ಯಾಪಾರ ಮಾರ್ಗದಲ್ಲಿ ಯಾವುದೇ ಪಾಲನ್ನು ಹೊಂದಲು ನಿರಾಕರಿಸಿದರು. ಹಾಗಾಗಿ ಈ ದೇಶಗಳು ಭಾರತ & ಈಸ್ಟ್ ಇಂಡೀಸ್ ಎಂದು ಕರೆಯಲಾಗುತ್ತಿದ್ದ 'ಇಂಡೋ ನೇಷ್ಯಾ'ಗಳ ಸಾಂಬಾರ ಪದಾರ್ಥಗಳಿಗೆ ಹೊಸ ಸಮುದ್ರ ಮಾರ್ಗಗಳ ಹುಡುಕಾಟಕ್ಕೆ ತೊಡಗಿದ್ದರು.
- ಯೂರೋಪಿನಲ್ಲಿಯ ಪುನರುತ್ಥಾನವು ಆ ಜನರಲ್ಲಿ ಒಳ್ಳೆಯ ಉತ್ತೇಜನ ನೀಡಿತು.
- ಯೂರೋಪಿನಲ್ಲಿ ನೌಕಾಯಾನಕ್ಕೆ ಬೇಕಾದ ದಿಕ್ಸೂಚಿ ಗ್ರಹೋನ್ನತಿ (ಸೂರ್ಯ, ಚಂದ್ರ & ಗ್ರಹಗಳ ಉನ್ನತಿ ಅಳೆಯುವುದು) ಮಾಪಕಗಳನ್ನು ಕಂಡು ಹಿಡಿದರು.
- ಇದರಲ್ಲಿ ಮೊದಲ ಹೆಜ್ಜೆಯನ್ನು ಇಟ್ಟವರು 'ಸರ್ಕಾರದ ಪ್ರೋತ್ಸಾಹ & ನಿಯಂತ್ರಣದಲ್ಲಿದ್ದ 'ಪೋರ್ಚುಗಲ್ & ಸ್ಪೇನ್' ನಾವಿಕರು.
- 1492 ರಲ್ಲಿ 'ಸ್ಪೇನ್‌ನ ಕೊಲಂಬಸ್' ಭಾರತವನ್ನು ತಲುಪಲು ಹೊರಟು, ಬದಲಿಗೆ ಅಮೇರಿಕಾದ ಅನ್ವೇಷಣೆ ಮಾಡಿದ.
- ಭಾರತಕ್ಕೆ ಹೊಸ ಜಲಮಾರ್ಗ ಕಂಡು ಹಿಡಿಯುವ ಪ್ರಯತ್ನದಲ್ಲಿ ಪೋರ್ಚುಗೀಸ್‌ರು ಮೊದಲಿಗರು ಪೋರ್ಚುಗೀಸ್ ಅರಸನಾದ 'ಯುವರಾಜ ಹೆನ್ರಿ' ನಾವಿಕರಿಗೆ ತರಬೇತಿ ನೀಡಲು ಶಾಲೆಯೊಂದನ್ನು ತೆರೆದನು. ಇವನಿಗೆ ಸಮುದ್ರಯಾನದಲ್ಲಿ ಆಸಕ್ತಿ ಇದ್ದ ಕಾರಣ 'ಹಡಗು ನಡೆಸುವ ನಾವಿಕ' ಎನ್ನುತ್ತಿದ್ದರು.

### ಬಾರ್ತ್‌ಲೋಮಿಯಾ ಡಯಾಜ್

ಪೋರ್ಚುಗಲ್ ದೇಶದವ ಕ್ರಿ.ಶ. 1487 ರಲ್ಲಿ ಪ್ರಥಮವಾಗಿ ಸಮುದ್ರಯಾನವನ್ನು ಪ್ರಾರಂಭಿಸಿದ. "ದಕ್ಷಿಣ ಆಫ್ರಿಕಾದ ಭೂಶಿರ ತಲುಪಿದನು. ಆ ಸಮಯದಲ್ಲಿ ಅಲ್ಲಿ ಭಯಂಕರವಾದ ಬಿರುಗಾಳಿಯಿದ್ದುದರಿಂದ 'ಬಿರುಗಾಳಿಯ ಭೂಶಿರ' (ನಂಬಿಕೆಯ ಭೂಶಿರ) ಎಂದು ಕರೆದನು.

**ವಾಸ್ಕೋಡ–ಗಾಮ:–** ಪೋರ್ಚುಗಲ್ ರಾಜ ಎಮ್ಯಾನ್ಯುವೆಲ್ ನೆರವು ನೀಡಿದ ಪೋರ್ಚುಗೀಸ್ ನಾವಿಕ. ಈತ ನಂಬಿಕೆಯ ಭೂಶಿಖರವನ್ನು ದಾಟಿ ಮೇ 27, 1498 ರಂದು ಕಲ್ಲಿಕೋಟೆಯನ್ನು ತಲುಪಿದ. (ಭಾರತೀಯ ನಾಯಕ ಗುಜರಾತಿನ ಇಬ್ನಮಜೀದ ನೆರವಿನಿಂದ ಭಾರತಕ್ಕೆ ತಲುಪಿದ)(ಕಲ್ಲಿಕೋಟೆಯ 'ಕಾಪಾಡ್' ತಲುಪಿದ).

- ಕಲ್ಲಿಕೋಟೆ ಅರಸ ಜಾಮೋರಿನ್ ಸ್ವಾಗತಿಸಿ ಈತನಿಗೆ ವ್ಯಾಪಾರಕ್ಕೆ ಅನುಮತಿ ನೀಡಿದನು.
- ಭಾರತದ ಪಶ್ಚಿಮ ಕರಾವಳಿಯಲ್ಲಿರುವ ಕಲ್ಲಿಕೋಟೆ, ಕೊಚ್ಚಿನ್, ಕಣ್ಣಾನೂರು ಮೊದಲಾದ ಸ್ಥಳಗಳಲ್ಲಿ ವ್ಯಾಪಾರ ಕೇಂದ್ರಗಳನ್ನು ಸ್ಥಾಪಿಸಿ ವ್ಯಾಪಾರದಲ್ಲಿ ತೊಡಗಿದನು.
- ಭಾರತಕ್ಕೆ 03 ಬಾರಿ ಬಂದನು. ಈತನನ್ನು ಕೊಚ್ಚಿಯ ಕೋಟೆಯಲ್ಲಿ ಸಮಾಧಿ ಮಾಡಲಾಯಿತು.
- ಸರಕು ಸಹಿತ ಸ್ವದೇಶಕ್ಕೆ ಹಿಂದಿರುಗಿದ ಈತ ತನ್ನ ಸಮುದ್ರಯಾನದ ವೆಚ್ಚದ 60 ಪಟ್ಟು ಹೆಚ್ಚು ಮೊತ್ತಕ್ಕೆ ಮಾರಾಟ ಮಾಡಿದನು.
- 1501 ರಲ್ಲಿ ಭಾರತಕ್ಕೆ 2ನೇ ಬಾರಿಗೆ ಬಂದು, ತನ್ನೊಡನೆ ಬಲಿಷ್ಠ ನೌಕಾಪಡೆ ತಂದನು(20 ನೌಕೆ). ಜಾಮೋರಿನ್‌ನನ್ನು ಅರಬ್ಬರಿಗೆ ಆಶ್ರಯ ಕೊಡದಂತೆ ಹೆದರಿಸಿ 'ಕೊಚ್ಚಿನ್'ನಲ್ಲಿ ಕೋಟೆ ಕಟ್ಟಿ ನೌಕಾಪಡೆಯನ್ನಿಟ್ಟು ಹಿಂದಿರುಗಿದ. ಅರಬ್ಬರನ್ನು ಕ್ರೂರವಾಗಿ ದಂಡಿಸಿದನು. ಜಾಮೋರಿನ್‌ನ ಕೊಚ್ಚಿ ದಾಳಿಯನ್ನು ಅಲ್ಬುಕರ್ಕ್ ಅಡಗಿಸಿದನು.
- ಯುರೋಪಿನ ದೇಶದ ಶೀಘ್ರ ಬಂಡವಾಳ ಸಂಗ್ರಹಣೆ / ಶ್ರೀಮಂತಿಕೆಗೆ ಅವರು ಹದಿನೈದನೇ ಶತಮಾನದ ಮಧ್ಯಭಾಗದಲ್ಲಿ 'ಆಫ್ರಿಕಾ'ವನ್ನು ಪ್ರವೇಶಿಸದೇ ಕಾರಣವಾಯಿತು.
- ಆರಂಭದಲ್ಲಿ ಚಿನ್ನ & ದಂತವು ಆಫ್ರಿಕಾಕ್ಕೆ ಯುರೋಪಿಯನ್ನರನ್ನು ಆಕರ್ಷಿಸಿತು. ಆದರೆ ಬಹಳ ಬೇಗ ಆಫ್ರಿಕಾದೊಂದಿಗಿನ ಅವರ ವ್ಯಾಪಾರವು ಗುಲಾಮ ವ್ಯಾಪಾರದಲ್ಲಿ ಕೇಂದ್ರೀಕೃತವಾಯಿತು. 16ನೇ ಶತಮಾನದಲ್ಲಿ ಈ ವ್ಯಾಪಾರವು ಸ್ಪೈನ್ & ಪೋರ್ಚುಗಲ್‌ರವರ ಕೈಯಲ್ಲಿತ್ತು. ನಂತರ ಡಚ್ಚರು, ಬ್ರಿಟೀಷರು, & ಫ್ರೆಂಚರ ಕೈಗೂ ಬಂತು.

### ಫ್ರಾನ್ಸಿಸ್ಕೋ–ಡಿ–ಅಲ್ಮೇಡಿಯಾ (1505–1509)

- ಭಾರತದಲ್ಲಿ ಪೋರ್ಚುಗೀಸರ ವ್ಯಾಪಾರದ ಮೇಲ್ವಿಚಾರಣೆಗೆ ಪ್ರಥಮ ಗೌರ್ನರಾಗಿ ನೇಮಿಸಲಾಯಿತು.
- ಅರಬ್ಬರನ್ನು ಅರಬ್ಬಿಸಮುದ್ರದಿಂದ ದೂರವಿಡಲು ಒಂದು ಶಕ್ತಿಯುತವಾದ ನೌಕಾಬಲವನ್ನು ಸ್ಥಾಪಿಸಿದನು. 'ನೀಲಿ ಕಡಲ ನೀತಿ' ಎಂದು ಹೆಸರಾಗಿದೆ. ಇದರ ಸಹಾಯದಿಂದ 1509 ರಲ್ಲಿ ದಿಯುನ ಹತ್ತಿರ ಈಜಿಪ್ಟ್, ಗುಜರಾತ್ & ಜಾಮೋರ್‌ನ ನೌಕಾಶಕ್ತಿಯನ್ನು ಸೋಲಿಸಿದನು. ಇದರಿಂದ ಸುಮಾರು ಒಂದು ಶತಮಾನದವರೆಗೆ ಹಿಂದೂಮಹಾಸಾಗರವು ಇವರ ಅಧೀನದಲ್ಲಿತ್ತು. ವಿಜಯನಗರ ರಾಜರೊಂದಿಗೆ ಸ್ನೇಹಸಂಬಂಧ ಹೊಂದಿದ್ದನು.
- 1509 ರಲ್ಲಿ ಈಜಿಪ್ಟಿಯನ್ನರಿಂದ ಕೊಲ್ಲಲ್ಪಟ್ಟನು.
- ಜಾಮೋರಿನ ಗುಜರಾತಿನ ರಾಜ & ಈಜಿಪ್ಟಿನ ಸುಲ್ತಾನರನ್ನು ಡಿಯು ಬಳಿ ನೌಕಾಕದನದಲ್ಲಿ ಸೋಲಿಸಿದನು.

INSTA KAS



Note : For reference purpose only, not for commercial purpose

## ಅಲ್ಫಾನ್ಸೋ–ಡಿ–ಅಲ್ಬುಕರ್ಕ್(1509–1515)

- ಪೋರ್ಚುಗೀಸ್‌ರ 2ನೇ ಗೌರ್ನರ್. ಶ್ರೇಷ್ಠ ಆಕ್ರಮಣಕಾರಿ ಯಾಗಿದ್ದನು. ಭಾರತದ ನಿಜವಾದ ಪೋರ್ಚುಗೀಸ್ ಸಾಮ್ರಾಜ್ಯದ ನಿರ್ಮಾಪಕ.
- ಬಿಜಾಪುರದ ಸುಲ್ತಾನ್‌ನಿಂದ 'ಗೋವಾ'ವನ್ನು(1510 ರಲ್ಲಿ) ವಶಪಡಿಸಿಕೊಂಡು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡನು. & 1961 ರವರೆಗೂ ಇದು ಇವರ ಅಧೀನದಲ್ಲಿತ್ತು. ಮಲಯ, ಪರ್ಷಿಯಾ ಕೊಲ್ಲಿ, ಸಾಂಬಾರ್ ದ್ವೀಪಗಳನ್ನು ವಶಪಡಿಸಿಕೊಂಡನು.
- ವಿಜಯನಗರ ಅರಸರೊಂದಿಗೆ ಉತ್ತಮ ಸಂಬಂಧ ಹೊಂದಿದನು. ಪ್ರಾಚ್ಯ ದೇಶದ 'ಮಲಕ್ಕಾ' ದ್ವೀಪವನ್ನು ವಶಪಡಿಸಿಕೊಂಡನು.
- ಸತಿ–ಪದ್ಧತಿ ನಿಷೇಧ ಈತನ ಗಮನಾರ್ಹ ಸಾಧನೆ.
- ಪರ್ಷಿಯನ್ ಕೊಲ್ಲಿಯ 'ಓರ್ಮಾಜ್' ಎಂಬಲ್ಲಿ ಬಂದರನ್ನು ಕಟ್ಟಿದನು.
- 'ಭಾರತದಲ್ಲಿ ಪೋರ್ಚುಗೀಸರ ಅಧಿಕಾರಕ್ಕೆ ಭದ್ರಬುನಾದಿ ಹಾಕಿದವ' ಎಂದು ಕರೆಯಲಾಗುತ್ತದೆ.
- 1515 ರಲ್ಲಿ ಗೋವಾದಲ್ಲಿ ಮರಣ ಹೊಂದಿದ್ದನು.
- ಆಡಳಿತದಲ್ಲಿ ಹಿಂದೂಗಳನ್ನು ನೇಮಿಸಿಕೊಂಡನು. ಗ್ರಾಮ ಪಂಚಾಯ್ತಿಗಳನ್ನು ಸುಧಾರಿಸಿದನು. ಸತಿ ಪದ್ಧತಿ, ಪರದಾ ಪದ್ಧತಿ, ಬಾಲ್ಯವಿವಾಹಗಳನ್ನು ನಿಷೇಧಿಸಿದನು. ಮುಸ್ಲೀಂರನ್ನು ಬಹಳವಾಗಿ ಹಿಂಸಿಸಿದನು.
- ಸ್ಥಳೀಯರೊಂದಿಗೆ ಪೋರ್ಚುಗೀಸರ ವಿವಾಹ ಸಂಪರ್ಕ ಏರ್ಪಡಿಸಿದನು.

### ಪೋರ್ಚುಗೀಸರ ಅವನತಿ:–

ಎ) ಅಲ್ಬುಕರ್ಕ್‌ನ ನಂತರ ಬಂದವರು ಅಸಮರ್ಥರು.
ಬಿ) 1580 ರಲ್ಲಿ ಪೋರ್ಚುಗಲ್ ತನ್ನ ಸ್ವಾತಂತ್ರ್ಯ ಕಳೆದುಕೊಂಡು 'ಸ್ಪೇನ್'ನ ಆಡಳಿಕ್ಕೊಳಪಟ್ಟಿತು. (2ನೇ ಫಿಲಿಪ್)
ಸಿ) ಮರಾಠರು ಬೆಸ್ಸಿನ್‌ನಿಂದ, ಮೊಘಲರು 'ಹೂಗ್ಲಿ'ಗಳಿಂದ ಹೊರದೂಡಿದರು.

### ಪರಿಣಾಮಗಳು:–

ಎ) ಐರೋಪ್ಯರ ಸಂಪರ್ಕ ವಿಶೇಷವಾಗಿ ಇವರ ಆಗಮನದಿಂದ ಹೆಚ್ಚಾಯಿತು.
ಬಿ) ಭಾರತದ ಅಕ್ಕಿ, ಬಟ್ಟೆ, ಸಾಂಬಾರ ಪದಾರ್ಥಗಳಿಗೆ ಬೇಡಿಕೆ.
ಸಿ) ಅಮೇರಿಕಾದ ಬೆಳೆಗಳಾದ ತಂಬಾಕು, ನೆಲಗಡಲೆ, ಈರುಳ್ಳಿ, ಮೆಣಸಿನಕಾಯಿ, ಮೆಕ್ಕೆಜೋಳ, ಗೋಡಂಬಿ & ಆಲೂಗಡ್ಡೆಗಳು ಭಾರತಕ್ಕೆ ಬಂದು ಕೃಷಿಯಲ್ಲಿ ತೀವ್ರ ಬದಲಾವಣೆಗಳಾದವು.
ಡಿ) ಭಾರತಕ್ಕೆ ಮೊದಲ ಮುದ್ರಣಯಂತ್ರ ಇವರಿಂದಾಗಿ 'ಗೋವೆ'ಗೆ ಬಂದಿತು.

# ಡಚ್ಚರು (ರಾಜಧಾನಿ ಪುಲಿಕಾಟ್) (1596–1792)

ಹಾಲೆಂಡ್‌ನಲ್ಲಿ 1602 ರಲ್ಲಿ ಡಚ್–ಈಸ್ಟ್–ಇಂಡಿಯಾ ಕಂಪೆನಿಯ ಸ್ಥಾಪಿತವಾಯಿತು.

- ಇದಕ್ಕೆ ಡಚ್ಚ್ ರಾಜ್ಯಾಧಿಕಾರ, ಡಚ್ಚ್ ಶಾಸನಸಭೆಗಳು, ಯುದ್ಧ ಮಾಡಲು, ಕಾಲುಗಳನ್ನು ಅಂತಿಮಗೊಳಿಸಲು ಪ್ರದೇಶಗಳನ್ನು ಸೇರಿಸಿಕೊಳ್ಳಲು & ಕೋಟೆಗಳನ್ನು ಕಟ್ಟಿಕೊಳ್ಳಲು ಅಧಿಕಾರ ನೀಡಿ ಸನ್ನದು ಪತ್ರಕೊಟ್ಟರು.
- ಡಚ್ಚರ ಆಸಕ್ತಿಯು ಭಾರತದ ಬದಲಿಗೆ ದಕ್ಷಿಣ ಪೂರ್ವ ಏಷ್ಯಾದ ದೇಶಗಳಾದ ಜಾವಾ, ಸುಮಾತ್ರ, ಇಂಡೋನೇಷ್ಯಾಗಳು ಸಾಂಬಾರ ಪದಾರ್ಥಗಳು ಯಥೇಚ್ಛವಾಗಿ ದೊರೆಯುತ್ತಿದ್ದರಿಂದ ಇವುಗಳ ಕಡೆ ಹೆಚ್ಚಾಗಿತ್ತು.
- 1596 ರಲ್ಲಿ 'ಕಾರ್ಲೆನಿಯಸ್ ಹೌಟ್ ಮನ್' ಎಂಬ ಡಚ್ ವರ್ತಕ ಭಾರತಕ್ಕೆ ಬಂದು ಅಮೂಲ್ಯ ವಸ್ತುಗಳೊಂದಿಗೆ ಹಿಂದಿರುಗಿದನು. 1602 ರಲ್ಲಿ ಜಾನ್‌ಹ್ಯೂಜನ್‌ನ್ನು ಡಚ್ಚ್ ಕಂಪೆನಿಯ ನಿಜವಾದ ಸ್ಥಾಪಕ. ಆದ್ದರಿಂದ ಡಚ್ಚ್ ಕಂಪೆನಿಯನ್ನು 'ಜಾನ್/ವಾನ್ ಕಂಪೆನಿ' ಎಂದು ಕರೆಯುವರು.
- ಮಲಯ ಹಾಗೂ ಇಂಡೋನೇಷ್ಯಾ ದ್ವೀಪಗಳಿಂದ ಪೋರ್ಚುಗೀಸರನ್ನು ಹೊರದೂಡಿದರು.
- ಭಾರತದಲ್ಲಿ 1605 ರಲ್ಲಿ ಮಚಲೀಪಟ್ಟಣದಲ್ಲಿ ತಮ್ಮ ಮಳಿಗೆಯನ್ನು ಸ್ಥಾಪಿಸಿದರು. ಪುಲಿಕಾಟ್(1606) ಇದು ಇವರ ಭಾರತದ ರಾಜಧಾನಿಯಾಗಿತ್ತು. ಸೂರತ್(1616) ಕೊಚ್ಚಿ, ಕುಂದಾಪುರ, ಬಸ್ರೂರಗಳಲ್ಲಿ ಮಳಿಗೆ ಸ್ಥಾಪಿಸಿದ.
- 1610 ರಲ್ಲಿ 'ಪುಲಿಕಾಟ್' ಎಂದು ಕರೆಯಲ್ಪಡುವ 'ಪಳವೇರ್' ಕಾಡಲ್ಲಿ ವಾಣಿಜ್ಯಕೇಂದ್ರವನ್ನು ಸ್ಥಾಪಿಸಿದರು. ಇದು ಡಚ್ಚರ ವ್ಯಾಪಾರ ಕೇಂದ್ರವಾಯಿತು.

### ಅಂಬೋಯಿನಾ ಕಗ್ಗೊಲೆ:–

ಬ್ರಿಟೀಷರು ಇಂಡೋನೇಷ್ಯಾದಲ್ಲಿ ವ್ಯಾಪಾರ ಮಾಡಲು ವರ್ತಕರನ್ನು ಕಳಿಸಿದರು. ಇದನ್ನು ಡಚ್ಚರು ಸಮ್ಮತಿಸದೇ 1623 ರಲ್ಲಿ 'ಅಂಬಾಯಿನ' ಎಂಬಲ್ಲಿ ಆಂಗ್ಲ ವರ್ತಕರನ್ನು ಕೊಲೆಗೈದರು. ಇದನ್ನು 'ಅಂಬಾಯಿನ ಕಗ್ಗೊಲೆ' ಎಂದು ಕರೆಯಲಾಗುತ್ತದೆ.

ಬ್ರಿಟಿಷ & ಡಚ್ಚರ ನಡುವೆ ಇದರಿಂದ ವಿರೋಧಗಳು ಉಂಟಾದವು. ಬ್ರಿಟೀಷರು ಆಗ್ನೇ ಏಷ್ಯಾ ದ್ವೀಪಗಳಿಂದ ಹೊರಬಂದು ಭಾರತದ ಮೇಲೆ ತಮ್ಮ ಪೂರ್ಣ ಗಮನವನ್ನು ಹರಿಸಿದರು.

ಡಚ್ಚರು ಬ್ರಿಟಿಷ್‌ರೊಡನೆ ಭಾರತದಲ್ಲಿ ವ್ಯಾಪಾರದ ಪೈಪೋಟಿ ನೀಡಲಾಗದೇ ತಮ್ಮ ವಾಣಿಜ್ಯಕೇಂದ್ರಗಳನ್ನು ಬ್ರಿಟಿಷರಿಗೆ ಮಾರಾಟ ಮಾಡಿ ಭಾರತ ಬಿಟ್ಟು ಹೋದರು.

INSTA KAS

# ಬ್ರಿಟೀಷರು (1600 AD)

- ಭಾರತದಲ್ಲಿ ಈಸ್ಟ್ ಇಂಡಿಯಾ ಕಂಪೆನಿ ಪ್ರಾರಂಭವಾಗುವ ಮುನ್ನ ಕ್ರಿ.ಶ. 1599 ರಲ್ಲಿ ಇಂಗ್ಲೀಷ್ ವರ್ತಕನಾದ 'ಜಾನ್ ಮಿಲ್ಡನ್ ಹಾಲ್' ಎಂಬುವವನು ಸಮುದ್ರಯಾನದ ಮೂಲಕ ಭಾರತ ತಲುಪಿ, ಭಾರತೀಯ ವರ್ತಕರೊಂದಿಗೆ ವ್ಯಾಪಾರ ಮಾಡಲು ಬಂದ.
- "ಈಸ್ಟ್ ಇಂಡಿಯಾ ಕಂಪೆನಿಯು Join Stock ಕಂಪೆನಿಯಾಗಿದ್ದು 'ಜಾನ್ ಕಂಪೆನಿ' ಸಹ ಎನ್ನುವರು.
- ಪೆಡ್ರೋ ಅಲ್ವಾರಿಸ್ ಕೆಬ್ರಾಲ್‌ನು ಕ್ರಿ.ಶ. 1500 ರಲ್ಲಿ ಮಾರ್ಚ್ 09 ರಲ್ಲಿ 13 ನೌಕೆಗಳ ನೇತೃತ್ವ ವಹಿಸಿ ಭಾರತಕ್ಕೆ 2ನೇ ನೌಕಾಯಾನ ಆರಂಭಿಸಿದನು. ಈತ ಕಲ್ಲಿಕೋಟೆ ತಲುಪಿ ಒಂದು ವ್ಯಾಪಾರ ಕೋಠಿಯನ್ನು ಸ್ಥಾಪಿಸಿದನು.

- ಕಂಪೆನಿ ಹೆಸರು: 1698 ರಲ್ಲಿ The English company of trading to East India" ಎಂದು ಸ್ಥಾಪನೆಯಾಯಿತು. ನಂತರ ಅಂದರೆ 1702 ರಲ್ಲಿ The United company of Merchant's of England Trading to the East' ಎಂದಾಯಿತು.

1588 ರಲ್ಲಿ ಪ್ರಪಂಚದಲ್ಲೇ ದೊಡ್ಡದಾದ ನೌಕೆ 'ಸ್ಪಾನಿಯ ಆರ್ಮಡಾ' ಎಂಬ ನೌಕೆಯನ್ನು ಬ್ರಿಟೀಷರು ಸೋಲಿಸಿ ಜಗತ್ತಿನ ಶಕ್ತಿಶಾಲಿ ನೌಕಾಬಲ ಹೊಂದಿದ ರಾಷ್ಟ್ರವಾಯಿತು.

- 1578 ರಲ್ಲಿ ನಾವಿಕ 'ಡ್ರೇಕ್'ನು ವಿಶ್ವ ಪರ್ಯಟನೆ ಮಾಡಿದ್ದು ಇವರೆಡು ಘಟನೆಗಳು ಆಂಗ್ಲರ ಗಮನವನ್ನು ಭಾರತದತ್ತ ಸೆಳೆದವು.
- ಪೂರ್ವ ದೇಶಗಳೊಡನೆ ವ್ಯಾಪಾರ ಮಾಡಲು 'ಸಾಹಸಿ ವರ್ತಕರು' ಎಂಬ ಹೆಸರಿನಲ್ಲಿ ಇಂಗ್ಲೀಷ ವರ್ತಕರ 100 ಜನರ ಗುಂಪೊಂದು ಒಂದಾಗಿ ಸೇರಿ 'ಬ್ರಿಟೀಷ್ ಈಸ್ಟ್ ಇಂಡಿಯಾ ಕಂಪೆನಿ' ಸ್ಥಾಪಿಸಿ, 'Dec 31, 1600 ರಲ್ಲಿ ರಾಣಿ ಎಲಿಜೆಬತ್‌ಳಿಂದ' ರಾಜಸನೆಂದು ಪಡೆದುಕೊಂಡರು. 1599 ರಲ್ಲಿ ಭಾರತಕ್ಕೆ ಬಂದು ತಲುಪಿದ ಆಂಗ್ಲ ವರ್ತಕ 'ಜಾನ್ ಮಿಲ್‌ಡನ್‌ಹಾಲ್'.
- 1608 ರಲ್ಲಿ ಇಂಗ್ಲೇಂಡಿನ ಅರಸ ಮೊದಲನೇ 'ಜೇಮ್ಸ್' ಭಾರತದ ಪಶ್ಚಿಮ ಸಮುದ್ರ ತೀರದ 'ಸೂರತ್'ನಲ್ಲಿ ವ್ಯಾಪಾರ ನಡೆಸಲು 'ಕಾರ್ಖಾನೆ' ಎಂಬ ಸಂಸ್ಥೆಯನ್ನು ಆರಂಭಿಸಲು ನಿರ್ಧರಿಸಿ ರಾಜನಾದ 'ಜಹಾಂಗೀರನ' ಅನುಮತಿ ಪಡೆಯಲು ಕ್ಯಾಪ್ಟನ್ ಹಾಕಿನ್ಸ್' ಎಂಬ ನೌಕಾಧಿಪತಿಯನ್ನು ಕಳಿಸಿದನು. ಪರಿಣಾಮವಾಗಿ ಪಶ್ಚಿಮ ಕರಾವಳಿಯಲ್ಲಿ ಹಲವು ಸ್ಥಳಗಳಲ್ಲಿ ಕಾರ್ಖಾನೆ ಸ್ಥಾಪಿಸಲು ಇಂಗ್ಲೀಷ್ ಕಂಪೆನಿಗೆ ಅನುಮತಿ ದೊರಕಿತು(ಸೂರತ್, ಆಗ್ರಾ, ಬ್ರೋಚ್, ಅಹ್ಮದಾಬಾದ್).
- 1612 ರಲ್ಲಿ ಕ್ಯಾಪ್ಟನ್ ಬೆಸ್ಟ್‌ನು ಪೋರ್ಚುಗೀಸ್‌ರನ್ನು 'ಸ್ವಾಲಿ' ಕದನದಲ್ಲಿ ಸೋಲಿಸಿದನು.
- 1613 ರಲ್ಲಿ ಆಲ್ಡ್‌ವರ್ತ್‌ನು ಸೂರತ್‌ನಲ್ಲಿ ಜಹಾಂಗೀರ್‌ನಿಂದ ಅನುಮತಿ ಪಡೆದು ಪ್ರಥಮ ಬ್ರಿಟಿಷ್ ವ್ಯಾಪಾರ ಕೋಟೆಯನ್ನು ತೆರೆದನು. ಸೂರತ್ 'ಭಾರತದ ವ್ಯಾಪಾರ ಮಾರ್ಗ ತೆರೆಯುವ ಬೀಗದ ಕೈ' ಎಂದು ಹೇಳಿದನು.
- ಈ ಅನುಮತಿಯಿಂದ ಇಂಗ್ಲೀಷರು ತೃಪ್ತಿ ಪಡದೇ 1ನೇ ಇಂಗ್ಲೇಂಡಿನ ದೊರೆ 1ನೇ ಜೇವರ್ಸ್‌ನು 1615 ರಲ್ಲಿ ಸರ್ ಥಾಮಸ್ ರೋ' ರನ್ನು ಮೊಘಲ್ ಆಸ್ಥಾನಕ್ಕೆ ಕಳಿಸಿದರು. ಮೊಘಲ ಸಾಮ್ರಾಜ್ಯದ ಎಲ್ಲಾ ಭಾಗಗಳಲ್ಲೂ ಕಾರ್ಖಾನೆ ಸ್ಥಾಪಿಸಲು & ವ್ಯಾಪಾರ ನಡೆಸಲು ರಾಜಾಜ್ಞೆ ಪಡೆಯುವಲ್ಲಿ ಯಶಸ್ವಿಯಾದ.

- ಥಾಮಸ್ ರೋನು ಜಹಾಂಗೀರ್‌ನು ಪ್ರೀತಿ, ವಿಶ್ವಾಸ ಗಳಿಸಿದ. ಹೀಗಾಗಿ ಆಗ್ರಾ, ಅಹ್ಮದಾಬಾದ್, ಬರೋಡ, ಬ್ರೋಚ್‌ಗಳಲ್ಲಿ ವ್ಯಾಪಾರ ಕೋಠಿಗಳನ್ನು & ನೀಲಿ ಬೆಳೆ ಬೆಳೆಯುವ ಬಿಯಾನದಲ್ಲಿ (1619) ಒಂದು ಕೋಠಿಯನ್ನು ತೆರೆದರು. ಇವನ್ನೆಲ್ಲಾ ಸೂರತ್‌ನ ಅಧ್ಯಕ್ಷ & ಕೌನ್ಸಿಲ್‌ನ ಅಧಿಕಾರಕ್ಕೆ ವಹಿಸಲಾಯಿತು.
- 1611 ರಲ್ಲಿ ಕ್ಯಾಪ್ಟನ್ ಹಿಪ್ಪಾನ್ ಎಂಬ ಬ್ರಿಟಿಷ್ ವರ್ತಕ ಗಿರಣಿ ಬಟ್ಟೆಯನ್ನು ಕೊಳ್ಳುವ ದೃಷ್ಟಿಯಿಂದ ಮಚಲೀಪಟ್ಟಣಂ (ಆರಂಭ ರಾಜಧಾನಿ) ವ್ಯಾಪಾರ ಕೋಠಿ ತೆರೆದನು.
- 1632 ರಲ್ಲಿ ಗೋಲ್ಕಂಡ ಸುಲ್ತಾನನು ಸುವರ್ಣ ರಹದಾರಿ ಪತ್ರ ನೀಡಿದ(ಬಂದರು ವ್ಯಾಪಾರಕ್ಕೆ).
- ಕಾರ್ಟ್‌ರೈಟ್‌ನು ಓರಿಸ್ಸಾದ ಹರಿಹರಪುರ & ಬಾಲಸೂರ್‌ಗಳಲ್ಲಿ ಕೋಠಿ ತೆರೆದನು.

- 1639 ರಲ್ಲಿ 'ಫ್ರಾನ್ಸಿಸ್ ಡೇ' ಎಂಬ ಆಂಗ್ಲ ಅಧಿಕಾರಿ ಚಂದ್ರಗಿರಿ ರಾಜನಿಂದ ಸ್ವಲ್ಪ ಭೂಭಾಗ ಬೆಲೆಗೆ ತೆಗೆದುಕೊಂಡು ಈಗಿನ 'ಚೆನ್ನೈ' ನಗರ ನಿರ್ಮಿಸಿ, 1640 ರಲ್ಲಿ 'ಸೆಂಟ್ ಜಾರ್ಜ್ ಕೋಟೆ'ಯನ್ನು ನಿರ್ಮಿಸಲಾಯಿತು.
- ಭಾರತದಲ್ಲಿ ಪ್ರಥಮ ಬಾರಿಗೆ ಕಂಪೆನಿ ಆಡಳಿತಕ್ಕೆ ಒಳಪಟ್ಟ ಭೂಮಿ, ಇದು ಆರಂಭದಲ್ಲಿ ಕರಿಯರು & ಬಿಳಿಯರು ಎಂಬೆರಡು ವಸಾಹತುಗಳಿಂದ ಕೂಡಿತ್ತು. ಕಡಲೂರಿನಲ್ಲಿ 'ಸೆಂಟ್ ಡೇವಿಡ್ ಕೋಟೆ' ಕಟ್ಟಲಾಯಿತು.
- 1662 ರಲ್ಲಿ ಇಂಗ್ಲೇಂಡಿನ ರಾಜ 2ನೇ ಚಾರ್ಲ್ಸ್ ಪೋರ್ಚುಗಲ್ ರಾಜಕುಮಾರಿ "ಕ್ಯಾತರಿನ್" ಎಂಬುವವಳನ್ನು ಮದುವೆಯಾಗಿದ್ದಕ್ಕಾಗಿ 'ಮುಂಬೈ'ಯನ್ನು ವರದಕ್ಷಿಣೆಯಾಗಿ ನೀಡಲಾಯಿತು. ಹೀಗೆ ಪೋರ್ಚುಗೀಸ್‌ರು ಗೋವಾ, ದಿಯು, ದಮನ್ ಬಿಟ್ಟು ಉಳಿದೆಲ್ಲಾ ಪ್ರದೇಶಗಳ ಮೇಲೆ ತಮ್ಮ ಹತೋಟಿ ಕಳೆದುಕೊಂಡರು.
- ಸರ್ ಜೋಶಿಯಾ ಚೈಲ್ಡ್' ರಾಜ್ಯಪಾಲತ್ವದಲ್ಲಿ ಬಾಂಬೆ ಭರದಿಂದ ಬೆಳೆಯಿತು.
- ಕ್ರಿ.ಶ. 1699 ರಲ್ಲಿ 'ಔರಂಗಜೇಬ'ನಿಂದ ಅನುಮತಿ ಪಡೆದುಕೊಂಡು ಕಲ್ಕತ್ತಾದಲ್ಲಿ ಮತ್ತೊಂದು ವಾಣಿಜ್ಯಕೇಂದ್ರ ಸ್ಥಾಪಿಸಿ', ಇಂಗ್ಲೇಂಡಿನ ಅರಸ '3ನೇ ವಿಲಿಯಂ' ನೆನಪಿಗಾಗಿ 'ವಿಲಿಯಂ ಕೋಟೆ' ನಿರ್ಮಿಸಲಾಯಿತು.
- ಸರ್ ಚಾರ್ಲ್ಸ್ ಐರ್ ಈ ಕೋಟೆಯ ಪ್ರಥಮ ಅಧ್ಯಕ್ಷನಾಗಿದ್ದನು.
- ಇಂಗ್ಲೀಷರು ದಕ್ಷಿಣದಲ್ಲಿ ತಮ್ಮ ಮೊದಲ ಕಾರ್ಖಾನೆಯನ್ನು ಮಸೂಲಿಪಟ್ಟಣದಲ್ಲಿ 1611 ರಲ್ಲಿ ಸ್ಥಾಪಿಸಿದರು. ಆದರೆ ಬಹುಬೇಗ ತಮ್ಮ ಕಾರ್ಯಸ್ಥಾನವನ್ನು 'ಮದ್ರಾಸಿಗೆ' ವರ್ಗಾಯಿಸಿಕೊಂಡರು. ಸ್ಥಳೀಯ ರಾಜ ಇದನ್ನು 1629 ರಲ್ಲಿ ಗುತ್ತಿಗೆಗೆ ನೀಡಿದನು. ಅಲ್ಲದೇ ನಾಣ್ಯವನ್ನು ಟಂಕಿಸಿಕೊಳ್ಳುವ & ಕೋಟೆ ಕಟ್ಟಿಕೊಳ್ಳಲು, ಅದರ ಆಡಳಿತ ನಡೆಸಲು ಅಧಿಕಾರ ಕೊಟ್ಟನು. ಇಲ್ಲಿ ಇಂಗ್ಲೀಷರು ತಮ್ಮ ಕಾರ್ಖಾನೆಯ ಸುತ್ತ ಸಣ್ಣ ಕೋಟೆ ಕಟ್ಟಿಕೊಂಡು 'ಸೆಂಟ್ ಜಾರ್ಜ್ ಪೋರ್ಟ್' ಎಂದು ನಾಮಕರಣ ಮಾಡಿದರು.
- ಪೂರ್ವ ಭಾರತದಲ್ಲಿ ಮೊದಲು ತನ್ನ ಮೊದಲ ಕಾರ್ಖಾನೆಯನ್ನು 1633 ರಲ್ಲಿ 'ಓರಿಸ್ಸಾ'ದಲ್ಲಿ 1651 ರಲ್ಲಿ ಬಂಗಾಳದ ಹೂಗ್ಲಿಯಲ್ಲಿ ಸ್ಥಾಪಿಸಿದ. ನಂತರ ಕಾಸಿಂಬಜಾರ್, ಢಾಕಾ, ಪಾಟ್ನಾ, ರಾಜಮಹಲ್, ಕಲ್ಕತ್ತಾಗಳಲ್ಲಿ ಕೋಠಿಗಳನ್ನು ಸ್ಥಾಪಿಸಲಾಯಿತು,
- 1698 ರಲ್ಲಿ ಕಂಪೆನಿಯು 'ಸುತನಾತಿ, ಕಲಿಕಟ, & ಗೊವಿಂದಪುರ' ಎಂಬ 03 ಗ್ರಾಮಗಳನ್ನು ಜಮೀನ್ದಾರಿ ಪಡೆದು ಅಲ್ಲಿ (ಕಾಜ್ ಚೌರ್ ನಾಕ್ ಎಂಬುವವನು 'ಪೋರ್ಟ್ ವಿಲಿಯಂ ಕೋಟೆ' ಕಟ್ಟಿದರು.)


Note : For reference purpose only, not for commercial purpose
INSTA KAS

- ಈ 03 ನಗರಗಳೇ ಮುಂದೆ 'ಕಲ್ಕತ್ತಾ' ಆಗಿದ್ದು. 1911 ರವರೆಗೆ ರಾಜಧಾನಿಯಾಯಿತು.

- ಔರಂಗಜೇಬನ & ತನ್ನ ಬಂಗಾಳದದ ಗೌರ್ನರ್ ಷಹಿಸ್ತಾಖಾನ್ ಬಂಗಾಳದಲ್ಲಿ ಬ್ರಿಟೀಷರ ಚಟುವಟಿಕೆಗಳನ್ನು ವಿರೋಧಿಸಿದರು. ಹೀಗಾಗಿ ಬಾಂಬೆ ಗೌರ್ನರ್ 'ಜೋಶಿಯಾ ಚೈಲ್ಡ್' ಇಂಗ್ಲೇಂಡಿನ ದೊರೆ 2ನೇ ಜೇಮ್ಸ್ ಅನುಮತಿ ಪಡೆದು ಯುದ್ಧ ಸಾರಿ ಚಿತ್ತಗಾಂಗ್ ಆಕ್ರಮಿಸಿದರು. ಆದರೆ 1688 ರಲ್ಲಿ ಕಲ್ಕತ್ತಾ ಸೇನೆ ಸೋತಿತು. ಔರಂಗಜೇಬ 17,000 ಪೌಂಡ್ ದಂಡ ಪಡೆದು ಸದ್ವರ್ತನೆ ಷರತ್ತಿನೊಂದಿಗೆ ಬ್ರಿಟಿಷರ ನೌಕೆ ಬಿಡುಗಡೆ ಮಾಡಿದನು. ವಾರ್ಷಿಕ 1½ ಲಕ್ಷ ಪಡೆದು ಬಂಗಾಳದಲ್ಲಿ ಮುಕ್ತ ವ್ಯಾಪಾರಕ್ಕೆ ಅನುಮತಿ ನೀಡಿದ.
- ಜಾರ್ಜ್ ಹಸರ್ಮನ್ ಆಯೋಗ: 1711 ರಲ್ಲಿ ಸರ್ಮನ್ ನಿಯೋಗವು ಕಲ್ಕತ್ತಾದಿಂದ ದೆಹಲಿಗೆ ತೆರಳಿ ಮೊಗಲ ಚಕ್ರವರ್ತಿಯಿಂದ ವ್ಯಾಪಾರ ರಿಯಾಯಿತಿ ಪಡೆಯಲು ಹೊರಟಿತು. ನಿಯೋಗದೊಂದಿಗೆ ಬಂದಿದ್ದ ವೈದ್ಯ 'ವಿಲಿಯಂ ಹ್ಯಾಮಿಲ್ಟನು' ಚಕ್ರವರ್ತಿ 'ಫರುಕ್ಸಿಯಾರ್'ನ ರೋಗ ಗುಣಪಡಿಸಿದ, ಕೃತಜ್ಞನಾದ ರಾಜ 03 ಫರ್ಮಾನುಗಳನ್ನು ನೀಡಿದ. ಅವುಗಳೆಂದರೆ 1) ಬಂಗಾಳ, ಸೂರತ್‌ನಲ್ಲಿ ಸುಂಕ ರಹಿತ ವ್ಯಾಪಾರ, ಕಂಪೆನಿ ನೌಕರರು ಭಾರತದ ಯಾವುದೇ ಭಾಗದಲ್ಲಿ ನೆಲೆಸುವ ಹಕ್ಕು. 2) ಮುಂಬೈ ಟಂಕಸಾಲೆಯಲ್ಲಿ ನಾಣ್ಯ ಟಂಕಿಸುವವರು, 3) ರಕ್ಷಣೆಗೆ ಸೇನೆ ಹೊಂದುವ ಹಕ್ಕು, 4) ಈ ಫರ್ಮಾನುಗಳನ್ನು 'ಓರ್ಮೆರು' ಕಂಪೆನಿಯ ಮ್ಯಾಗ್ನಕಾರ್ಟ್' ಎಂದು ಕರೆದಿದ್ದಾರೆ.

## ಡೇನರು

- ಡೆನ್ಮಾರ್ಕ್ ದೇಶಕ್ಕೆ ಸೇರಿದ ಪ್ರಜೆಗಳನ್ನು 'ಡೇನ್'ರೆಂದು ಕರೆಯಲಾಗುತ್ತದೆ. 1616 ರಲ್ಲಿ ಭಾರತಕ್ಕೆ ಬಂದರು.
- ಕ್ರಿ.ಶ. 1620 ರಲ್ಲಿ (ತಿರುವಾಂಕೂರಿನಲ್ಲಿ) ತರಂಗಪಾಡಿಯಲ್ಲೂ, 1676 ಬಂಗಾಳದಲ್ಲಿರುವ 'ಸಿರಂಬೂರ್' ಎಂಬ ಸ್ಥಳಗಳಲ್ಲಿ ವಾಣಿಜ್ಯಕೇಂದ್ರಗಳನ್ನು ಸ್ಥಾಪಿಸಿದರು. ಆದರೆ ಬ್ರಿಟೀಷರಿಗೆ ಮಾರಿ ಹೊರಟು ಹೋದರು.

INSTA KAS



Note : For reference purpose only, not for commercial purpose

## ಫ್ರೆಂಚರು(1664) ರಾಜಧಾನಿ : ಪಾಂಡಿಚೇರಿ

- ಫ್ರೆಂಚ್ ಮಂತ್ರಿ 'ರಿಚೆಲ್ಯೂ' ಪೌರ್ವಾತ್ಯ ವ್ಯಾಪಾರದಲ್ಲಿ ಆಸಕ್ತಿ ಹೊಂದಿದ್ದು ಮಡಗಾಸ್ಕರ್ ನೌಕಾಯಾನ ಕಳಿಸಿದನು.
- 1664 ರಲ್ಲಿ ಫ್ರೆಂಚ್ ಈಸ್ಟ್ ಇಂಡಿಯಾ ಕಂಪೆನಿ ಸ್ಥಾಪಿಸಿದನು.
- ಫ್ರೆಂಚರ ಫ್ರಾಂಕೋಯಿನ್ ಮಾರ್ಟಿನ್‌ನು ಭಾರತದಲ್ಲಿ ನಿಜವಾದ ಫ್ರೆಂಚ್ ವಸಾಹತುಗಳ ನಿರ್ಮಾಪಕನಾಗಿದ್ದಾನೆ. ಈತ ಬೆಲಿಂಜರ್‌ನೊಡನೆ 1674 ರಲ್ಲಿ ಬಿಜಾಪುರದ ಸುಲ್ತಾನ ಷೇರ್‌ಖಾನ್ ಲೂಧಿಯ ವಾಲಿಕೊಂಡಪುರಾ ಬಳಿ ಭೂಭಾಗ ಪಡೆದು ಪಾಂಡಿಚೇರಿಯನ್ನು ನಿರ್ಮಿಸಿದ. ಫ್ರೆಂಚ್ ಸರಕಾರ ಇವನಿಗೆ ಸಹಕಾರ ನೀಡದಿದ್ದರೂ ಪಾಂಡಿಚೇರಿಯನ್ನು ಸುಂದರವಾಗಿ ನಿರ್ಮಿಸಿದ. ಮುಂದೆ ಇದೇ ಫ್ರೆಂಚರ ರಾಜಧಾನಿಯಾಯಿತು.
- ಫ್ರಾನ್ಸ್‌ನ 14ನೇ ಲೂಯಿಯ ಮಂತ್ರಿಯಾದ 'ಕಾಲ್ಬರ್ಟ್' ಎಂಬುವವರ ಪ್ರಯತ್ನದಿಂದ ಈ ಕಂಪೆನಿ ಸ್ಥಾಪನೆಯಾಯಿತು.
- ಕೊಲ್ಬರ್ಟ್‌ನು ಔರಂಗಜೇಬ್‌ನಿಂದ ಸಾಲ್ವಿ ಬಳಿ ವ್ಯಾಪಾರಕೋಠಿ ತೆರೆಯಲು ಅನುಮತಿ ಪಡೆದನು.
- 1668 ರಲ್ಲಿ ಸೂರತ್, 1669 ಮಚಲೀಪಟ್ಟಣ, 1674 ರಲ್ಲಿ ತಂಜಾವೂರು ಅರಸನಿಂದ ಭೂಭಾಗ ಬಾಡಿಗೆ ಪಡೆದುಕೊಂಡು 'ಪಾಂಡಿಚೇರಿ' ಕಟ್ಟಿದರು. ಇದು ಭಾರತದಲ್ಲಿ ಫ್ರೆಂಚರ ಕೇಂದ್ರಸ್ಥಳವಾಗಿ ಮಾರ್ಪಾಡಾಯಿತು.
- 1690 ರಲ್ಲಿ ಚಂದ್ರನಾಗೂರ್, 1725 ಮಾಹೆ, 1739 ಕಾರೈಕಲ್ ಮುಂತಾದ ಸ್ಥಳಗಳಲ್ಲಿ ಪ್ರಭುತ್ವ ಸಾಧಿಸಿದರು.
- 1667 ರಲ್ಲಿ ಭಾರತಕ್ಕೆ ಬಂದ ಫ್ರಾಂಕೊಯಿನ್ ಕೆರಾನ್‌ನು ಪ್ರಪ್ರಥಮ ಫ್ರೆಂಚ್ ವ್ಯಾಪಾರ ಕೋಠಿಯನ್ನು ಸೂರತ್‌ನಲ್ಲಿ ತೆರೆದು, ಇವನೇ ಅದರ ಡೈರೆಕ್ಟರ್ ಜನರಲ್ ಆದನು. ಗೋಲ್ಕಂಡ ಸುಲ್ತಾನನಿಂದ ಮಚಲೀಪಟ್ಟಣದಲ್ಲಿ ಕೋಠಿ ತೆರೆದನು.
- 1742 ರಲ್ಲಿ ಡೂಪ್ಲೆಯು ಫ್ರೆಂಚರ ಗವರ್ನರಾಗಿ ಭಾರತಕ್ಕೆ ಬಂದನು. ಇವನ ಕಾಲದಲ್ಲಿ ಫ್ರೆಂಚರು ಪ್ರಭುತ್ವ ಸಾಧಿಸಿದ್ದು, ಬ್ರಿಟಿಷ್ & ಫ್ರೆಂಚರಿಗೂ ಅಧಿಕಾರ ಪೈಪೋಟಿ ಸಂಭವಿಸಿ 'ಕರ್ನಾಟಿಕ್ ಯುದ್ಧಗಳಾಗಿ' ಮಾರ್ಪಟ್ಟವು.
- ಕ್ರಿ.ಶ. 1740–63 ರವರೆಗೆ 03 ಕರ್ನಾಟಿಕ್ ಯುದ್ಧಗಳ ಬ್ರಿಟೀಷ & ಫ್ರೆಂಚರ ನಡುವೆ ನಡೆದವು. ಈ ಯುದ್ಧಗಳು ಕರ್ನಾಟಕದಲ್ಲಿ ನಡೆದುದರಿಂದ 'ಕರ್ನಾಟಿಕ್ ಯುದ್ಧಗಳೆಂದು' ಕರೆಯಲಾಗುತ್ತದೆ. ಈ ಭಾಗವು ಮೊಗಲರ ಆಳ್ವಿಕೆಗೆ ಒಳಪಟ್ಟಿದ್ದರಿಂದ 'ನಿಜಾಂ'ನ ಹಿಡಿತದಲ್ಲಿತ್ತು.
- ಪಾಂಡಿಚೇರಿ ಗೌರ್‍ನರ್ ಡೂಮನು 1739 ರಲ್ಲಿ 'ಕಾರೈಕಲ್'ನಲ್ಲಿ ವ್ಯಾಪಾರ ಕೋಠಿ ತೆರೆದು, ಮೊಗಲರಿಂದ ನಾಣ್ಯ ಟಂಕಿಸುವ ಅನುಮತಿ ಪಡೆದನು.
- ಮರಾಠರು 1740 ರಲ್ಲಿ ಕರ್ನಾಟಕದ ಮೇಲೆ ದಾಳಿ ಮಾಡಿ 'ನವಾಬ ದೋಸ್ತ್ ಅಲಿಯನ್ನು ಕೊಂದು ಅವನ ಅಳಿಯ ಚಂದಾ ಸಾಹೇಬನನ್ನು ಸೆರೆಯಾಳಾಗಿ ಒಯ್ದರು. ನಂತರ ದೋಸ್ತ ಅಲಿಯ ಮಗ 'ಸಪ್ದರ್ ಅಲಿಯ ಕೊಲೆಯಾಯಿತು.
- ಈ ಪರಿಸ್ಥಿತಿಯಲ್ಲಿ ಹೈದ್ರಾಬಾದ್ ನಿಜಾಂನು ಕರ್ನಾಟಕದ ಮೇಲೆ ದಾಳಿ ಮಾಡಿ ಸಪ್ದರ್ ಅಲಿಯ ಅಪ್ರಾಪ್ತ ವಯಸ್ಸಿನ ಮಗನಾದ 'ಸೈಯದ್ ಮಹ್ಮದ್‌ನನ್ನು ಸಿಂಹಾಸನದಲ್ಲಿ ಕೂಡಿಸಿ 'ಅನ್ವರುದ್ದಿನ್'ನನ್ನು ಪ್ರತಿನಿಧಿಯಾಗಿ ನೇಮಿಸಿದನು. ಸ್ವಲ್ಪ ಸಮಯದಲ್ಲೇ ಸೈಯದ್ ಮಹ್ಮದ್ ಕೊಲೆಯಾಗಿ 'ಅನ್ವರುದ್ದಿನ್' ಕರ್ನಾಟಕದ ನವಾಬನಾದನು.
- ದೋಸ್ತ್ ಅಲಿ ಕುಟುಂಬದವರ ವಿರೋಧದಿಂದ ಅನ್ವರುದ್ದೀನ್ ಸ್ಥಾನ ಕೂಡ ಭದ್ರವಾಗಿರಲಿಲ್ಲ.
- ಪೂರ್ವದ ಕೋರಮಂಡಲದ ಕರಾವಳಿ ತೀರಪ್ರದೇಶವನ್ನು ಹಾಗೂ ಅದರ ಹಿನ್ನಾಡನ್ನು ಬ್ರಿಟೀಷರು 'ಕರ್ನಾಟಿಕ್' ಎಂದು ಕರೆದರು. 'ಆರ್ಕಾಟ್' ಅದರ ರಾಜಧಾನಿಯಾಗಿತ್ತು. ಹೈದ್ರಾಬಾದ್ ನಿಜಾಂ ಹತೋಟಿಯಲ್ಲಿತ್ತು. ಇವನಿಂದ ನೇಮಕವಾದ ನವಾಬನಿಂದ ಆಳಲ್ಪಡುತ್ತಿತ್ತು.

### ಕರ್ನಾಟಿಕ್ ಯುದ್ಧಗಳು:

#### ಮೊದಲನೇ ಕರ್ನಾಟಿಕ್ ಯುದ್ಧ (1746–1748)

- ಯೂರೋಪ್‌ನಲ್ಲಿ ಫ್ರೆಂಚರು & ಬ್ರಿಟೀಷರಿಗೂ ನಡೆದ ಆಸ್ಟ್ರೀಯಾದ ಉತ್ತರಾಧಿಕಾರ ಸಮಸ್ಯೆಯೂ ಇಲ್ಲಿ ಪ್ರತಿಫಲಿಸಿತು. ಇಂಗ್ಲೀಷರು(ಸೇನಾಪತಿ ಬರ್ನೆಟ್) ಫ್ರೆಂಚರ ಹಡುಗುಗಳನ್ನು ಸೆರೆಹಿಡಿದರು. ಆಗ ಡೂಪ್ಲೆಯು ಚೆನ್ನೈ(ಮದ್ರಾಸ್)ನ್ನು ವಶಪಡಿಸಿಕೊಂಡನು. ಇಂಗ್ಲೀಷರು ನವಾಬನ ಸಹಾಯ ಕೋರಿದರು. ಆದರೆ ಡೂಪ್ಲೆಯು ನವಾಬನ ಆಜ್ಞೆ ತಿರಸ್ಕರಿಸಿದನು.ಡೂಪ್ಲೆಯ ಮಾರಿಷನ್ ಗವರ್ನರಾದ 'ಲಾಬೂರ್ ಚುನಾಯ್ಸ್' ಜೊತೆಗೂಡಿ ಚೆನ್ನೈಯನ್ನು ಮುತ್ತಿದರು. ಆದ್ದರಿಂದ ನವಾಬನು ತನ್ನ ಸೈನ್ಯದೊಡನೆ ಮದ್ರಾಸ್‌ಗೆ ಮುತ್ತಿಗೆ ಹಾಕಿದನು. ಆದರೆ ಫ್ರೆಂಚರಿಂದ ಸೋಲಲ್ಪಟ್ಟನು (ಸೆಂಟ್‌ಥೋಮ್‌ನಲ್ಲಿ ಅಥವಾ ಅಡಿಯಾರ ಕಾಳಗದಲ್ಲಿ).
- ಯೂರೋಪಿನಲ್ಲಿ ಯುದ್ಧಗಳು ಕೊನೆಗೊಂಡು 'ಪ್ಯಾರಿಸ್ ಒಪ್ಪಂದ'ವಾಯಿತು. (ಡೂಪ್ಲೆಯು ಮುಂದುವರೆದು ಕಡಲೂರಿನ ಸೆಂಟ್ ಡೇವಿಡ್' ಕೋಟೆ ವಶಪಡಿಸಿಕೊಳ್ಳಲು ಪ್ರಯತ್ನಿಸಿದನು). ಇದರಂತೆ ಭಾರತದಲ್ಲೂ ಇಂಗ್ಲೀಷ್ & ಫ್ರೆಂಚರ ನಡುವೆ ಶಾಂತಿ ಮೂಡಿ 'ಮದ್ರಾಸ್' ಇಂಗ್ಲೀಷರ ಕೈ ಸೇರಿತು(ಐ–ಲಾ–ಚಾಪೆಲ್ ಒಪ್ಪಂದ).

#### 2ನೇ ಕರ್ನಾಟಿಕ್ ಯುದ್ಧ(1748–54)

- ತಂಜಾವೂರಿನ ರಾಜನಾದ ಪ್ರತಾಪಸಿಂಗನ ವಿರುದ್ಧ ಪಿತೂರಿ ನಡೆಸಲು 'ಷಾಹಾಜೀ' ಇಂಗ್ಲೀಷರ ಸಹಾಯ ಕೇಳಿದ. ಇದಕ್ಕೆ ಬದಲಾಗಿ 'ದೇವಿಕೊಟ್ಟೆ' ಪ್ರದೇಶ ಕೊಡಲು ಒಪ್ಪಿದ. ಆದರೆ ಪ್ರತಾಪಸಿಂಗಾನು ಇಂಗ್ಲೀಷ್‌ರೊಂದಿಗೆ ಶಾಂತಿ ಒಪ್ಪಂದ ಮಾಡಿಕೊಂಡು 'ದೇವಿಕೊಟ್ಟೆ' ಬಿಟ್ಟುಕೊಟ್ಟನು.
- ಆರ್ಕಾಟಿನಲ್ಲಿ ಚಂದಾಸಾಹೇಬ & ಅನ್ವರುದ್ದೀನನ ನಡುವೆ, ಹೈದ್ರಾಬಾದ್‌ನಲ್ಲಿ ನಾಸಿರ್‌ಜಂಗ್ & ಮುಜಾಫರ್‌ಜಂಗ್‌ರ ನಡುವೆ ಉತ್ತರಾಧಿಕಾರಕ್ಕಾಗಿ ಅಂತ:ಕಲಹ ಏರ್ಪಟ್ಟಿತು.
- ಡೂಪ್ಲೆಯು ಚಂದಾಸಾಹೇಬ & ಮುಜಾಫರ್ ಜಂಗ್‌ನನ್ನು ಬೆಂಬಲಿಸಿದರೆ, ಬ್ರಿಟೀಷರು ಅನ್ವರುದ್ದೀನ್ & ನಾಸಿರ್‌ಜಂಗ್‌ನು ಬೆಂಬಲಿಸಿದ್ದರು(ಡೂಪ್ಲೆಯು ಮರಾಠರಿಗೆ ಹಣಕೊಟ್ಟು ಚಂದಾಸಾಹೇಬನನ್ನು ಬಿಡಿಸಿದ).
- ಚಂದಾಸಾಹೇನು ಅಂಬೂರ ಕಾಳಗದಲ್ಲಿ (1749) ಅನ್ವರುದ್ದೀನನ್ನು ಕೊಂದು ನವಾಬನಾದನು. ಅನ್ವರುದ್ದೀನನ ಮಗ ಮಹ್ಮದ್ ಅಲಿಯು ತಿರುಚನಾಪಲ್ಲಿ ಕೋಟೆಗೆ ಹೋದನು.
- ನಾಸಿರ್‌ಜಂಗ್‌ನ ಹತ್ಯೆಯಾದ್ದರಿಂದ ಮುಹಾಫರ್ ಜಂಗ್ ಹೈದ್ರಾಬಾದ್ ನವಾಬನಾದನು. ಚಂದಾಸಾಬ ತಿರುಚನಾಪಲ್ಲಿಗೆ ಮಹ್ಮದ್ ಅಲಿಯನ್ನು ಕೊಲ್ಲಲು ಮುತ್ತಿಗೆ ಹಾಕಿದ. ಆದರೆ ರಾಬರ್ಟ್ ಕ್ಲೈವ್‌ನು ಅರ್ಕಾಟ್ ವಶಪಡಿಸಿಕೊಂಡನು. & ಮಹ್ಮದ್ ಅಲಿಯನ್ನು ಆರ್ಕಾಟಿನ ನವಾಬನಾಗಿ ಮಾಡಿದನು. ಆದ್ದರಿಂದ ಕ್ಲೈವ್‌ನನ್ನು ಆರ್ಕಾಟಿನ ವೀರ ಎನ್ನುತ್ತಾರೆ. ಚಂದಾಸಾಹೇಬ ತಂಜಾವೂರಿಗೆ ಓಡಿ ಹೋದನು. ಅಲ್ಲಿ ಅವನ ಹತ್ಯೆಯಾಯಿತು.
- ಈ ಸೋಲಿನಿಂದಾಗಿ 1754 ರಲ್ಲಿ ಫ್ರಾನ್ಸ್ ಸರಕಾರ ಡೂಪ್ಲೆಯನ್ನು ವಾಪಸ್ಸು ಕರೆದುಕೊಂಡಿತು. 'ಗೊಡೆಹೊನನ್ನು' ಡೂಪ್ಲೆ ಸ್ಥಾನಕ್ಕೆ ಕಳಿಸಲಾಯಿತು. '1754 ರ ಪಾಂಡಿಚೇರಿ ಒಪ್ಪಂದದೊಂದಿಗೆ' ಯುದ್ಧ ಕೊನೆಗೊಂಡಿತು.

INSTA KAS



Note : For reference purpose only, not for commercial purpose

- ಮುಜಾಫರ್ ಜಂಗ ಹತ್ಯೆ ನಂತರ ಫ್ರೆಂಚ ಗವರ್ನರ್ ಬುಸ್ಸಿಯು ಸಲಬತ್ ಜಂಗ್'ನನ್ನು ಹೈದ್ರಾಬಾದ್‌ನ ನಿಜಾಂನನ್ನಾಗಿ ಮಾಡಿದನು.
- ಒಪ್ಪಂದದಂತೆ, ದೇಶೀಯ ರಾಜರುಗಳ ಆಂತರಿಕ ವ್ಯವಹಾರದ ಇಬ್ಬರೂ ತಲೆಹಾಕದಂತೆ ಒಪ್ಪಿಕೊಂಡವು & ಮಹ್ಮದ್ ಅಲಿಯು ಆರ್ಕಾಟಿನ ನವಾಬನೆಂದು ಇಬ್ಬರೂ ಒಪ್ಪಿಕೊಂಡಿತು.

### 3ನೇ ಕರ್ನಾಟಿಕ್ ಯುದ್ಧ (1756–1763)

- 1756 ರಲ್ಲಿ ಯೂರೋಪಿನಲ್ಲಿನ ಸಪ್ತವಾರ್ಷಿಕ ಯುದ್ಧವೇ ಈ ಯುದ್ಧಕ್ಕೆ ಕಾರಣ.
- ಫ್ರೆಂಚ್ ಸರಕಾರ ಭಾರತದಿಂದ ಇಂಗ್ಲೀಷರನ್ನು ಹೊರದೂಡಲು 'ಕಾಂಟ್–ಡಿ–ಲ್ಯಾಲಿ'ಯನ್ನು ಗವರ್ನರಾಗಿ ಕಳಿಸಿತು.
- ಫ್ರೆಂಚ್‌ರ ವಸಾಹತು ಚಂದ್ರಾನಾಗೂರನ್ನು ಕ್ಲೈವ್ ವಶಪಡಿಸಿಕೊಂಡನು. ಲ್ಯಾಲಿಯು ಸೆಂಟ್ ಜಾರ್ಜ್‌ಕೋಟೆ ವಶಪಡಿಸಿಕೊಂಡು ಚೆನ್ನೈ ಮುತ್ತಿಕ್ಕಲು ಆದೇಶಿಸಿದನು. ಅಲ್ಲದೇ 'ಬುಸ್ಸಿಯನ್ನು' ಹೈದ್ರಾಬಾದ್‌ನಿಂದ ಕರೆಸಿದನು. ಆದರೆ ಬ್ರಿಟೀಷರು ಹೈದ್ರಾಬಾದ್ ವಶಪಡಿಸಿಕೊಂಡರು.
- 'ಬುಸ್ಸಿ ಹಾಗೂ ಐರ್‌ಕೂಟ್‌ನಿಗೂ' 1760 ರಲ್ಲಿ ಪಾಂಡಿಚೇರಿ ಸಮೀಪದ 'ವಾಂಡಿವಾಷ್' ಎಂಬಲ್ಲಿ ಯುದ್ಧ ನಡೆದು ಫ್ರೆಂಚರು ಸೋಲಲ್ಪಟ್ಟರು.
- 1763 ರಲ್ಲಿ ಪ್ಯಾರಿಸ್ ಶಾಂತಿ ಒಪ್ಪಂದದಂತೆ ಯುದ್ಧ ಕೊನೆಗೊಂಡಿತು. ಫ್ರೆಂಚರು ದುರ್ಬಲರಾದರು.
- ಡೂಪ್ಲೆಯನ್ನು 'ರಾಬರ್ಟ್‌ಕ್ಲೈವ್‌ನನ್ನು ಮುನ್ಸೂಚಕ'ನೆಂದು ಕರೆಯಲಾಗಿದೆ.

**ಬಂಗಾಳ:–** (ಮುರ್ಷಿದಾಬಾದ್ ರಾಜಧಾನಿ) 1707 ಔರಂಗಜೇಬನ ಮರಣಾನಂತರ 'ಸುಬೇದಾರ'ನಾಗಿದ್ದ. ಮುರ್ಷಿದ್ ಖಾನ್ ಸ್ವತಂತ್ರಗೊಂಡು ನವಾಬ್ ಸಂತತಿಯನ್ನು ಸ್ಥಾಪಿಸಿದ.

- ಸಿರಾಜ್–ಉದ್–ದೌಲ್‌ನಿಗೆ ಅಲಿವರ್ಧ್‌ಖಾನ್‌ನ ಇನ್ನೊಬ್ಬ ಮೊಮ್ಮಗ "ಶೌಕತ್ ಜಂಗನು' ಘಾಸಿಟಿಬೇಗಂ(ಅಲಿಖಾನ್ 1ನೇ ಮಗಳು) ಬೆಂಬಲದೊಂದಿಗೆ ದಂಗೆ ಎದ್ದನು. ಇವರಿಗೆ ದಿವಾನ್ 'ರಾಜವಲ್ಲಭ್‌ನ' ಬೆಂಬಲವಿತ್ತು.

### ಬಂಗಾಳದಲ್ಲಿ ಬ್ರಿಟೀಷರ ಅಧಿಪತ್ಯ ಸ್ಥಾಪನೆ

- ಬಂಗಾಳದಲ್ಲಿ ಬ್ರಿಟೀಷರು ವ್ಯಾಪಾರ ಮುಂದುವರೆಸಲು 1717 ರಲ್ಲಿ ಮೊಘಲರಿಂದ ಫರುಕ್ಸಿಯಾರನಿಂದ ಒಂದು ಸನ್ನದು (ಪರವಾನಗಿ) ಪಡೆದಿದ್ದರು. ಆದರೆ ಇಂಗ್ಲೀಷರು ತಮ್ಮ ಸಾಮಗ್ರಿಗಳನ್ನು ಸಮುದ್ರ ಮಾರ್ಗವಾಗಿ ಸಾಗಿಸಲು 'ದಸ್ತಕ'ಗಳನ್ನು ನೀಡುವ ಹಕ್ಕನ್ನು ಹೊಂದಿದ್ದರು. ಆದರೆ ಕ್ರಮೇಣ ಇವುಗಳ (ಆಂತರಿಕ ವ್ಯಾಪಾರಕ್ಕೆ) ದುರ್ಬಳಕೆ ಮಾಡತೊಡಗಿದರು. ಇದರಿಂದ ಬಂಗಾಳದ ನವಾಬನಾದ ಅಲಿವರ್ಧಿಖಾನನ ಮೊಮ್ಮಗ ಸಿರಾಜ್–ಉದ್–ದೌಲ(ರಾಜ್ಯದ ಸೂರ್ಯ)ನನ್ನು ವಿರೋಧಿಸಿದನು. ಅಲ್ಲದೇ ನವಾಬನು ಫ್ರೆಂಚ್ & ಇಂಗ್ಲೀಷರಿಗೆ, ಚಂದ್ರನಾಗೂರ & ಕಲ್ಕತ್ತಾದಲ್ಲಿಯ ಕೋಟೆಗಳನ್ನು ಒಡೆದು ಹಾಕಲು ಆದೇಶಿಸಿದ. ಫ್ರೆಂಚರು ಒಪ್ಪಿದರೆ, ಇಂಗ್ಲೀಷರು ಇದನ್ನು ವಿರೋಧಿಸಿದರು. ಅಲ್ಲದೇ ತನ್ನ ಆಸ್ಥಾನದಿಂದ ಹೊರಹಾಕಿದ ರಾಜವಲ್ಲಭನ ಮಗ ಕೃಷ್ಣದಾಸ್, ಶೌಕತ್ ಜಂಗ್ & ಘಾಸಿಟ ಬೇಗ್‌ನನ್ನು ತನಗೆ ಒಪ್ಪಿಸುವಂತೆ ಆಜ್ಞಾಪಿಸಿದ. ಬ್ರಿಟೀಷರು ಇದನ್ನು ಧಿಕ್ಕರಿಸಿದರು.
- ಇದರಿಂದ ಕೋಪಗೊಂಡ ನವಾಬನು 'ಖಾಸಿಂಬಜಾರ್ & 1756 ಜೂನ್ 20 ರಂದು ಕಲ್ಕತ್ತಾದ ಪೋರ್ಟ್ ವಿಲಿಯಂ ಕೋಟೆಯನ್ನು ಮುತ್ತಿಗೆ ಹಾಕಿದನು. ಇಂಗ್ಲೀಷ್ ಅಧಿಕಾರಿಗಳು ಸಮುದ್ರದ ಸಮೀಪ 'ಪುಲ್ವಾ'ದಲ್ಲಿ ಆಶ್ರಯ ಪಡೆದರು.
- ಮುರ್ಷಿದಾಬಾದ್ ಸಿರಾಜ್–ಉದ್–ದೌಲ್‌ನ(ಬಂಗಾಳ) ರಾಜಧಾನಿಯಾಗಿತ್ತು.
- ಬಂಗಾಳದ ಪ್ರಮುಖರಾದ ಮೀರ್‌ಜಾಫರ್, ಮೀರ್‌ಭಕ್ಷಿ, ಮಾಣಿಕ್‌ಚಂದ್, ಅಮೀಚಂದ, ವ್ಯಾಪಾರಿ ಜಗತ್ ಸೇಠ್, ನವಾಬನ ಹೆಚ್ಚು ಪಾಲು ಪಡೆದು ಅಧಿಕಾರ ಹೊಂದಿದ. ಖಾದಿಂಖಾನ್‌ರೊಡನೆ ರಾಬರ್ಟ್‌ಕ್ಲೈವ್ ಒಳ ಒಪ್ಪಂದ ಮಾಡಿಕೊಂಡರು.
- ಮದ್ರಾಸ್‌ನಿಂದ ಅಡ್ಮಿರಲ್ ವಾಟ್ಸನ್ & ಕರ್ನಲ್‌ಕ್ಲೈವ್‌ನ ನೇತೃತ್ವದಲ್ಲಿ ಬಲವಾದ ನೌಕಾಬಲ ಸೈನ್ಯ ಆಗಮಿಸಿ 1757 ರಲ್ಲಿ ಕಲ್ಕತ್ತಾ ಕೋಟೆಯನ್ನು ಪುನ: ಗೆದ್ದು ನವಾಬನಿಗೆ ತಮ್ಮ ಎಲ್ಲಾ ಬೇಡಿಕೆಗಳನ್ನು ಒಪ್ಪಿಕೊಳ್ಳಲು ಒತ್ತಾಯಿಸಿದರು.
- ಇಂಗ್ಲೀಷರ ಸೇನೆ ಮುರ್ಷಿದಾಬಾದ್‌ನಿಂದ 30 ಕಿ.ಮೀ. ದೂರದಲ್ಲಿಯ ಪ್ಲಾಸಿ ಎಂಬಲ್ಲಿ 1757 ಜೂನ್ 23 ರಂದು ಯುದ್ಧ ಹೂಡಿತು. 'ಮೀರ್‌ಜಾಫರ್' & ರಾಯದುರ್ಲಭ್‌ನ ಪಕ್ಷದಲ್ಲಿದ್ದ ನವಾಬನ ಸೇನೆ ಯುದ್ಧದಲ್ಲಿ ಪಾಲ್ಗೊಳ್ಳಲಿಲ್ಲ. ಆದರೆ ಮೀರ್ ಮದನ & ಮೋಹನ್ ಲಾಲ್ ನೇತೃತ್ವದ ನವಾಬನ ಸೇನೆ ಧೈರ್ಯದಿಂದ ಹೋರಾಡಿದರು. ಅನಿವಾರ್ಯವಾಗಿ ತಪ್ಪಿಸಿಕೊಂಡು ಓಡಿ ಹೋದ ನವಾಬನು ಬಂಧಿತನಾಗಿ ಮೀರ್‌ಜಾಫರ್‌ನ ಮಗ 'ಮಿರಾನ್'ನಿಂದ ಕೊಲೆಯಾದನು.
- ಮೀರ್‌ಜಾಫರ್‌ನು ಬಂಗಾಳದ ನವಾಬನಾದನು. ಮೀರ್‌ಜಾಫರ್‌ನು 24 ಪರಗಣ ಪ್ರದೇಶಗಳನ್ನು ಬ್ರಿಟೀಷರಿಗೆ ನೀಡಿದನು.
- ಈ ಕದನವು ಇಂಗ್ಲೀಷರಿಗೆ ಭಾರತದಲ್ಲಿ ಭದ್ರವಾಗಿ ನೆಲೆಯೂರಲು ಅವಕಾಶ ಮಾಡಿಕೊಟ್ಟಿತು.

**ಕಪ್ಪು ಕೋಣೆ ದುರಂತ:–** ಸಿರಾಜ್–ಉದ್–ದೌಲ್‌ನು ಕಲ್ಕತ್ತಾ ಕೋಟೆ ವಶಪಡಿಸಿಕೊಂಡು 146 (123) ಬ್ರಿಟೀಷ್ ಸೈನಿಕರೊಡನೆ ಯುದ್ಧ ಖೈದಿಗಳಾಗಿ ಸೆರೆಹಿಡಿದು ಚಿಕ್ಕದಾದ ಕೋಣೆಯಲ್ಲಿ ಅಡಗಿಸಿಟ್ಟನು. ಇದರಲ್ಲಿ ಕೇವಲ 23 ಜನ ಮಾತ್ರ ಬದುಕುಳಿದಿದ್ದರು. ಇದು ಇತಿಹಾಸದಲ್ಲಿ 'ಕಪ್ಪು ಕೋಣೆ ದುರಂತ' ಎಂದು ಹೆಸರಾಗಿದೆ.

- ಮೀರ್‌ಜಾಫರ್‌ನು ಬ್ರಿಟೀಷರ ಕೈಗೊಂಬೆಯಾಗಿದ್ದ. ಬ್ರಿಟೀಷರ ಬೇಡಿಕೆಗಳು ಮಿತಿಮೀರತೊಡಗಿದ್ದು, ಅವುಗಳನ್ನು ಈಡೇರಿಸುವಲ್ಲಿ ವಿಫಲನಾಗಿ ಬ್ರಿಟೀಷರ ವಿರೋಧ ಕಟ್ಟಿಕೊಂಡ.
- 'ದಿವಾನ್ ರಾಯ ದುರ್ಲಭ್ & ನಾಯಿಬ್ ದಿವಾನ್ ರಾಮನಾರಾಯಣ' ಅವರನ್ನು ಪದಚ್ಯುತಿಗೊಳಿಸಲು ಮೀರ್‌ಜಾಫರ್‌ನಿಗೆ ಆಗಲಿಲ್ಲ.
- ರಾಬರ್ಟ್‌ಕ್ಲೈವ್ ಇಂಗ್ಲೇಂಡಿಗೆ ಹಿಂದಿರುಗಿದ. 1760 ರಲ್ಲಿ ಬ್ರಿಟೀಷರು ಮೀರ್ ಜಾಫರ್‌ನನ್ನು ಕೆಳಗಿಳಿಸಿ 'ಮೀರ್‌ಖಾಸಿಂ' ನನ್ನು ನವಾಬನನ್ನಾಗಿ ಮಾಡಿದರು. ಈ ಖುಷಿಗೆ ಮೀರ್‌ಖಾಸಿಂನು ಬ್ರಿಟೀಷರಿಗೆ ಮಿಡ್ನಾಪುರ, ಚಿತ್ತಗಾಂಗ್, & ಬರ್ದ್‌ವಾನ್ ಪ್ರದೇಶಗಳನ್ನು ಕಾಣಿಕೆಯಾಗಿ ನೀಡಿದನು.
- ಮೀರ್‌ಖಾಸಿಂನು ಬ್ರಿಟೀಷರು 1717 ರ ಫರ್ಮಾನಿನ ತೆರಿಗೆ ಕೊಡದೇ ವ್ಯಾಪಾರ ಮಾಡುವುದನ್ನು ಖಂಡಿಸಿದ. ಅಲ್ಲದೇ ಭಾರತೀಯ ವ್ಯಾಪಾರಸ್ಥರಿಗೆ ಅನುಕೂಲವಾಗುವಂತೆ ಇವರು ಕಟ್ಟಡ ತೆರಿಗೆಯನ್ನು ರದ್ದುಮಾಡಿದನು. ಹೀಗಾಗಿ ಇಂಗ್ಲೀಷರು ಈತನನ್ನು ಕೆಳಗಿಳಿಸಿ ಪುನ: ಮೀರ್‌ಜಾಫರ್‌ನನ್ನು ಬಂಗಾಳದ ನವಾಬನನ್ನಾಗಿ ಮಾಡಿದರು.
- ಮೀರ್‌ಖಾಸಿಂ ಒಬ್ಬ ದಕ್ಷ ಆಡಳಿತಗಾರ ಹಾಗೂ ಸಮರ್ಥ ಸೇನಾನಿಯಾಗಿದ್ದ. ಈತ 1763 ರಲ್ಲಿ ನಡೆದ ಸರಣಿ ಯುದ್ಧಗಳಲ್ಲಿ ಸೋತು ಅವಧ್‌ಗೆ ಓಡಿ ಹೋಗಿ ಅವಧ್ ನವಾಬ ಶೂಜ್‌ದೌಲ, & ದೇಶಭ್ರಷ್ಟ ಮೊಗಲ ದೊರೆ 2ನೇ ಷಾ ಅಲಂನೊಂದಿಗೆ ಮೈತ್ರಿ ಬೆಳೆಸಿ, ಈ 03 ಜನರ ಮೈತ್ರಿ ಒಕ್ಕೂಟವು

INSTA KAS



Note : For reference purpose only, not for commercial purpose

1764 July 22 ರಂದು ಬಕ್ಸಾರ್ ಎಂಬಲ್ಲಿ ಹೋರಾಡಿ ಸೋತರು.

- (ರಾಬರ್ಟ್ ಕ್ಲೈವ್) 1765 ರ ಅಲಹಬಾದ್ ಒಪ್ಪಂದದಂತೆ ಪ್ಲಾಸಿ ಯುದ್ಧ ಕೊನೆಗೊಂಡಿತು. 2ನೇ ಷಾ ಅಲಂ & ಷೂಜ್‌ದೌಲ ನಡುವೆ ಈ ಸಿತಾಬ್‌ರಾಯ್ ರಾಜನ ಮಧ್ಯಸ್ಥಿಕೆಯಲ್ಲಿ ಅಲಹಾಬಾದ್ ಒಪ್ಪಂದಕ್ಕೆ ಸಹಿ ಹಾಕಿದರು.
- ಈ ಯುದ್ಧದ ನಂತರ ಈಸ್ಟ್ ಇಂಡಿಯಾ ಕಂಪೆನಿ ಭಾರತದಲ್ಲಿ ಪರಮಾಧಿಕಾರ ಪಡೆದುಕೊಂಡಿತು.
- "ಬಕ್ಸಾರ್" ಯುದ್ಧದ ನಂತರ ರಾಬರ್ಟ್‌ಕ್ಲೈವ್ ಕ್ರಿ.ಶ. 1765 ರಲ್ಲಿ ಬಂಗಾಳದ ಗೌರ್ನರ್ (ಪ್ರಥಮ ಗೌರ್ನರ್) ಆಗಿ ನೇಮಿಸಲ್ಪಟ್ಟನು. ಬಂಗಾಳದಲ್ಲಿ ದ್ವಿಮುಖ ಸರ್ಕಾರ ಪದ್ಧತಿ ಜಾರಿಗೆ ತಂದನು.
  (ಇಂಗ್ಲೀಷ್ ಕಮಾಂಡರ ಹೆಕ್ಟರ್ ಮನ್ರೊ ಈ ಒಕ್ಕೂಟ ಸೈನ್ಯ ಸೋಲಿಸಿದನು. ಇದರ ಪರಿಣಾಮವಾಗಿ ಬಿಹಾರ ಓರಿಸ್ಸಾ, ಬಂಗಾಳ, ಪ್ರಾಂತ್ಯಗಳು ಬ್ರಿಟೀಷರಿಗೆ ದೊರೆತವು).
- ಕಪ್ಪು ಕೋಣೆ ದುರಂತದಿಂದ ಕೆರಳಿದ ಬ್ರಿಟೀಷರು ಮನ: ಕೋಟೆ ಮೇಲೆ ದಾಳಿ ಮಾಡಿ ವಶಪಡಿಸಿಕೊಂಡರು. ಸಿರಾಜ್–ಉದ್–ದೌಲ್ ಮತ್ತು ಬ್ರಿಟೀಷರೊಡನೆ(ಕ್ಲೈವ್) 1757 Feb ಅಲಿನಗರ್ ಶಾಂತಿ ಒಪ್ಪಂದ ಮಾಡಿಕೊಂಡರು. ಇದು ತಾತ್ಕಾಲಿಕ ಒಪ್ಪಂದವಾಗಿತ್ತು. ಉಭಯ ಪಕ್ಷಗಳು ಸಮಯಾವಕಾಶ ಬಯಸಿ ಕದನ ವಿರಾಮಕ್ಕಾಗಿ ಶಾಂತಿ ಒಪ್ಪಂದ ಮಾಡಿಕೊಂಡವು.
- ಬಕ್ಸಾರ್ ಕದನದ ನಂತರ ಬ್ರಿಟೀಷರು & ಮೀರ್ ಖಾಸೀಂರು 'ಅಲಹಾಬಾದ್ ಒಪ್ಪಂದ' ಮಾಡಿಕೊಂಡರು.

## ಭಾರತದಲ್ಲಿ ಬ್ರಿಟೀಷ್ ಈಸ್ಟ್ ಇಂಡಿಯಾ ಕಂಪೆನಿಯ ಆಳ್ವಿಕೆ (1773–1857)

**ಲಾರ್ಡ್ ವಾರನ್ ಹೇಸ್ಟಿಂಗ್ಸ್:– (1772–1785)**

- ತಂದೆ: ಪೈನಾಸಿನ್, ತಾಯಿ– ಹೆಸ್ಟರ್ ವಾರನ್, ಮೀರ್ ಜಾಫರ್ ಆಸ್ಥಾನದಲ್ಲಿ ರೆಸಿಡೆಂಟ್ ಆಗಿದ್ದರು.
- ಕ್ರಿ.ಶ. 1772 ರಲ್ಲಿ ಬಂಗಾಳದ ಗವರ್ನರ್ ಆಗಿ ನಂತರ ಗವರ್ನರ್ ಜನರಲ್ ಹುದ್ದೆಗೆ ಏರಿದನು.
- 1772 ರಲ್ಲಿ ಬಂಗಾಳದಲ್ಲಿ ಭೀಕರ ಕ್ಷಾಮ ಉಂಟಾಯಿತು.
- ಬಂಗಾಳದಲ್ಲಿ ದ್ವಿಮುಖ ಸರಕಾರ ನೀತಿಯಿಂದಾಗಿ ಆರ್ಥಿಕ ದಿವಾಳಿತನ ಉಂಟಾಯಿತು.
- ಈ ಪರಿಸ್ಥಿತಿಯಲ್ಲಿ ಕಂಪೆನಿಯವರು ಬ್ರಿಟೀಷ್ ಸರಕಾರದಿಂದ ದೊಡ್ಡ ಮೊತ್ತದ ಸಾಲ ಕೇಳಿದರು. ಈ ಸಂದರ್ಭದಲ್ಲಿ ಬ್ರಿಟೀಷ ಸರಕಾರ ಮಧ್ಯ ಪ್ರವೇಶಿಸುವಂತಾಯಿತು.
- ಬ್ರಿಟೀಷ್ ಪಾರ್ಲಿಮೆಂಟ್ 1773 ರಲ್ಲಿ ರೆಗ್ಯುಲೇಟಿಂಗ್ ಕಾಯ್ದೆ ಜಾರಿಗೆ ತಂದಿತು.
- ಸರ್ವೋಚ್ಚ ನ್ಯಾಯಾಲಯ ಕಲ್ಕತ್ತಾದಲ್ಲಿ ಸ್ಥಾಪನೆ. 'ಸರ್ ಎಲಿಜಾ ಇಂಫೆ' ಪ್ರಥಮ ಮುಖ್ಯ ನ್ಯಾಯಾಧೀಶರಾಗಿದ್ದು, ಇತರೆ 03 ನ್ಯಾಯಾಧೀಶರನ್ನಾಗಿ ನೇಮಕ ಮಾಡಲಾಯಿತು.

**ಸುಧಾರಣೆಗಳು:** ರಾಬರ್ಟ್ ಕ್ಲೈವ್ ಜಾರಿಗೆ ತಂದ ದ್ವಿಮುಖ ಸರಕಾರ ಪದ್ಧತಿಯನ್ನು ಬಂಗಾಳದಲ್ಲಿ ರದ್ದುಪಡಿಸಿದನು.

- ಪ್ರಾಂತ್ಯಾಡಳಿತ ಬ್ರಿಟೀಷ್ ಈಸ್ಟ್ ಇಂಡಿಯಾ ಕಂಪೆನಿ ವಹಿಸಿಕೊಂಡಿತು.
- ಖಜಾನೆಯನ್ನು(ರಾಜಧಾನಿ) ಮುರ್ಷಿದಾಬಾದ್‌ನಿಂದ ಕಲ್ಕತ್ತಾಗೆ ವರ್ಗಾಯಿಸಲಾಯಿತು.

**ನ್ಯಾಯಾಂಗ ಸುಧಾರಣೆಗಳು:–** ಮೇಲ್ಮನವಿ ಸಲ್ಲಿಸಲು ಅವಕಾಶ ನೀಡಿದನು.

- ಕಲ್ಕತ್ತಾದಲ್ಲಿ ಸದರ್ ದಿವಾನಿ ಅದಾಲತ್(ನಾಗರಿಕ) & ಸದರ್ ನಿಜಾಮತ್ ಅದಾಲತ್(ಅಪರಾಧ) ಎಂಬ 02 ನ್ಯಾಯಾಲಯಗಳನ್ನು ಸ್ಥಾಪಿಸಲಾಯಿತು.

**ವಾಣಿಜ್ಯ ಸುಧಾರಣೆಗಳು:** ಕಂಪೆನಿ ನೌಕರರಿಗೆ ನೀಡಿದ ದಸ್ತತ್ ರದ್ದುಪಡಿಸಿದನು.

- ಕಂಪೆನಿಯು ಒಂದು ವಾಣಿಜ್ಯಮಂಡಳಿಯನ್ನು ರಚಿಸಿತು. ಕಲ್ಕತ್ತಾದಲ್ಲಿ ಒಂದು ಬ್ಯಾಂಕನ್ನು ಸ್ಥಾಪಿಸಿದನು. ಏಕರೂಪ ಟಪಾಲು ವ್ಯವಸ್ಥೆ ಜಾರಿಗೆ ತಂದನು. ಭಾರತೀಯರು & ಇಂಗ್ಲೀಷರ ಮೇಲೆ ಸಮಾನ ತೆರಿಗೆಯನ್ನು ಹೇರಿದನು.
- ಕಲ್ಕತ್ತಾ, ಢಾಕಾ, ಹೂಗ್ಲಿ, ಪಾಟ್ನಾ & ಮುರ್ಷಿದಾಬಾದ್ ಸೇರಿದಂತೆ 5 ಕಡೆ ಸುಂಕದ ಕಟ್ಟೆಗಳನ್ನು ಸ್ಥಾಪಿಸಲಾಯಿತು.

**ಕಂದಾಯ ಸುಧಾರಣೆ:–** ಕಲೆಕ್ಟರುಗಳನ್ನು ನೇಮಿಸಿದನು.

- ಕಲ್ಕತ್ತಾದಲ್ಲಿ ಕಂದಾಯ ಇಲಾಖಾ ಸಂಸ್ಥೆ ಸ್ಥಾಪಿಸಲ್ಪಟ್ಟನು.
- ಕಂದಾಯ ದಾಖಲೆ ಕ್ರೋಢೀಕರಿಸಲು 'ರಾಮರಾಯನ್' ಎಂಬ ಭಾರತೀಯ ಅಧಿಕಾರಿಯನ್ನು ನೇಮಿಸಿದನು.

INSTA KAS



Note : For reference purpose only, not for commercial purpose

**ಶಿಕ್ಷಣ ಸುಧಾರಣೆ:–** ಹೇಸ್ಟಿಂಗ್ಸ್‌ನು ಮುಸ್ಲಿಂರ ಶಿಕ್ಷಣ ಬೆಳವಣಿಗೆಗಾಗಿ 1781 ರಲ್ಲಿ ಮದರಸಾ ಕಟ್ಟಿಸಿದನು.

- 'ಬನಿಯಾ ಬ್ಯಾಂಕರ್ಸ್' ಹಾವಳಿಯಿಂದ ರೈತರನ್ನು ರಕ್ಷಿಸಿದನು.

**ರೋಹಿಲ್ಲರೊಂದಿಗೆ ಯುದ್ಧ:–**

- ರೋಹಿಲರು ಅಫಘನ್ ಜನರಾಗಿದ್ದು, ಮರಾಠರ ವಿರುದ್ಧವಾಗಿ ನವಾಬ ಶೂಜ್‌ದೌಲನ ಸಹಾಯ ಕೇಳಿದರು. ಮರಾಠರು ಯುದ್ಧ ಮಾಡದೇ ಹಿಂದಿರುಗಿದರು. ಆದ್ದರಿಂದ ರೋಹಿಲರು ಒಪ್ಪಂದದಂತೆ 40 ಲಕ್ಷ ರೂ. ನವಾಬನಿಗೆ ಕೊಡಲು ನಿರಾಕರಿಸಿದರು.
- ಆಗ ನವಾಬನು ಇಂಗ್ಲೀಷರ ನೆರವಿನಿಂದ 40 ಲಕ್ಷ ರೂ.ಗಳನ್ನು ಪಡೆದುಕೊಂಡನು. ವಾರನ್ ಹೇಸ್ಟಿಂಗ್ಸ್‌ನು ತನ್ನ ಸೈನ್ಯವನ್ನು ರೋಹಿಲರ ವಿರುದ್ಧ ಕಳಿಸಿ ಸೋಲಿಸಲಾಯಿತು & ರೋಹಿಲ್ ಖಂಡ ಅಯೋಧ್ಯೆಯೊಂದಿಗೆ ವಿಲೀನವಾಯಿತು.
- ವಾರನ್ ಹೇಸ್ಟಿಂಗ್ಸ್ ಕಾಲದಲ್ಲಿ 2ನೇ ಆಂಗ್ಲೋ–ಮೈಸೂರು ಯುದ್ಧ & ಮೊದಲನೇ(1775–82) ಆಂಗ್ಲೋ–ಮರಾಠರ ಯುದ್ಧ ನಡೆದವು. ಮೊದಲನೇ ಆಂಗ್ಲೋ ಮರಾಠರ ಯುದ್ಧವು ಬ್ರಿಟೀಷರಲ್ಲಿ ಆರ್ಥಿಕ ಮುಗ್ಗಟ್ಟಿಗೆ ಒಳಪಡಿಸಿತು. ಹೀಗಾಗಿ ಈತ ಬನಾರಸನ ರಾಜ 'ಜೈತ್ ಸಿಂಗ್‌ನಿಗೆ' ಅಧಿಕ ತೆರಿಗೆ ಕೊಡುವಂತೆ ಒತ್ತಾಯಿಸಿದ. ಈತ ನಿರಾಕರಿಸಿದನು. ಪದಚ್ಯುತಿಗೊಳಿಸಿದನು. ಅಲ್ಲದೇ ಅಯೋಧ್ಯೆಯ ಬೇಗಂ'ರ ಖಜಾನೆ ವಶಪಡಿಸಿಕೊಂಡನು.
- ನಕಲಿ ಸಹಿ ಮಾಡಿದ ಆರೋಪದ ಮೇಲೆ 'ನಂದಕುಮಾರನನ್ನು' ಕೊಲೆ ಮಾಡಲಾಯಿತು.
- ವಾರನ್ ಹೇಸ್ಟಿಂಗ್ಸ್‌ರನ್ನು ವಿಚಾರಣೆಗೊಳಪಡಿಸಲಾಯಿತು. ಭಾರತದಲ್ಲಿ ಬ್ರಿಟೀಷ್ ಆಡಳಿತದ ಬೆಳವಣಿಗೆ ಸೇವೆಯನ್ನು ಪರಿಗಣಿಸಿ ಮುಕ್ತಗೊಳಿಸಲಾಯಿತು.
- ಇವನ ಕಾಲದಲ್ಲಿ ಹಿಂದೂ ಕಾನೂನುಗಳನ್ನು ಕ್ರೋಢೀಕರಿಸಲಾಯಿತು. ಮುಸ್ಲೀಂ ಕಾನೂನಾದ ಫತ್ವಾ–ಇ–ಅಲಂಗೀರ್' ಮಹಾಭಾರತ, ಭಗವದ್ಗೀತೆ ಸಂಸ್ಕೃತ ಗ್ರಂಥಗಳನ್ನು ಇಂಗ್ಲೀಷ್‌ಗೆ ಅನುವಾದಿಸಲಾಯಿತು.
- ಇವನ ಆಶ್ರಯದಲ್ಲಿ ಸರ್ ವಿಲಿಯಂ ಜೋನ್ಸ್‌ನು 'ಕಲ್ಕತ್ತಾ ಏಷ್ಯಾಟಿಕ್ ಸೊಸೈಟಿ'ಯನ್ನು ಸ್ಥಾಪಿಸಿದನು.
- **ಚೈತ್ ಸಿಂಗ್ ಪ್ರಕರಣ:** ಬನಾರಸ್‌ನ ರಾಜ ಹೇಸ್ಟಿಂಗ್ಸ್‌ನ ಹಣದಾಹಕ್ಕೆ ಬಲಿಯಾದವ. ಹೇಸ್ಟಿಂಗ್ಸ್ ವಿರುದ್ಧ ಚೈತ್ ಸಿಂಗ್ ಸೈನ್ಯ ದಂಗೆ ಎದ್ದಿತು. ಚುನಾರ್ ಕೋಟೆಯಲ್ಲಿ ರಕ್ಷಣೆ ಪಡೆದ. ನಂತರ ಹೆಚ್ಚಿನ ಸೈನ್ಯ ಕೂಡಿಸಿ ಚೈತ್‌ಸಿಂಗ್‌ನನ್ನು ಗಡಿಪಾರು ಮಾಡಿದ. ಅವನ ಸ್ಥಾನದಲ್ಲಿ ಮಹಿಪ್ ನಾರಾಯಣನನ್ನು ಕೂರಿಸಿದ.
- **ಔಧನ ಬೇಗಂ ಪ್ರಕರಣ:** ಔಧ್ನ ನವಾಬ ಅಸಾಫ್ ಉದ್ ದೌಲನು ಕಂಪೆನಿಗೆ ಕೊಡಬೇಕಾದ ಪೊಗದಿ ಬಾಕಿ ಉಳಿಸಿಕೊಂಡಿದ್ದ. ಇದಕ್ಕೆ ನವಾಬನು ಔಧನ ಬೇಗಂರು ಎಂದೇ ಹೆಸರಾದ ತಾಯಿ 'ಬಾಹುಬೇಗಂ', ಅಜ್ಜಿ 'ಬುರ್ರಾಬೇಗಂ'ರ ಬಳಿ ವಿಶಾಲ ಜಹಗೀರುಗಳು ವಶಪಡಿಸಿಕೊಳ್ಳುವಂತೆ ಹೇಳಿದ. ಹೇಸ್ಟಿಂಗ್ಸ್‌ನ ಕಣ್ಣು ಇವರ ಅಪಾರ ಸಂಪತ್ತಿನ ಮೇಲೆ ಬಿದ್ದು ಹಣಕ್ಕಾಗಿ ಪೀಡಿಸತೊಡಗಿದ. ಬೇಗಂರು ನವಾಬನ ಬೇಡಿಕೆಯಂತೆ 5,60,000 ಪೌಂಡನ್ನು ರೆಸಿಡೆಂಟ್ ಮಧ್ಯಸ್ಥಿಕೆಯಲ್ಲಿ ನೀಡಿ, ಇನ್ನು ಮುಂದೆ ಕಂಪೆನಿ ಹಣ ಕೇಳಬಾರದೆಂಬ ವಚನವನ್ನು ಬೇಗಂರು ಪಡೆದರು. ಆದರೆ ಹೇಸ್ಟಿಂಗ್ಸ್‌ನು ಮರಾಠ ಹೈದರ್‌ನೊಂದಿಗೆ ಯುದ್ಧ ಮಾಡಿದರಿಂದ ಆರ್ಥಿಕ ಮುಗ್ಗಟ್ಟಿಗೆ ಸಿಲುಕಿಕೊಂಡಿದ್ದ. ಹೀಗೆ ಮತ್ತೆ ಹಣಕ್ಕಾಗಿ ಪೀಡಿಸಿ ಬೇಗಂರನ್ನು ಬಂಧಿಸುವಂತೆ ಫೈಜಾಬದಿಗೆ ಸೈನ್ಯ ಕಳಿಸಿದನು.

**ಲಾರ್ಡ್ ಕಾರ್ನ್‌ವಾಲಿಸ್ (1786–1793)**

- ಭ್ರಷ್ಟಾಚಾರ ರಹಿತ & ಪ್ರಾಮಾಣಿಕ ಆಡಳಿತ ನೀಡಿದ ಭಾರತದ ಮೊದಲ ಗೌರ್ನರ್ ಜನರಲ್‌ನಾಗಿದ್ದಾನೆ.
- 1786ರಲ್ಲಿ ಭಾರತದ ಗವರ್ನರ್ ಜನರಲ್.
- ಸ್ಥಳೀಯ ಆಡಳಿತದಲ್ಲಿ ತಲೆ ಹಾಕದಿರುವ ನೀತಿ ಅನುಸರಿಸಿದನು,
- 1793 ರಲ್ಲಿ 'ಶಾಶ್ವತ ಭೂ ಕಂದಾಯ' ಪದ್ಧತಿಯನ್ನು ಬಂಗಾಳದಲ್ಲಿ ಜಾರಿಗೆ ತಂದನು. ಈ ಪದ್ಧತಿಯಿಂದ ಜಮೀನ್ದಾರರು ಅಧಿಕ ಲಾಭ ಗಳಿಸಿದರು.
- ಈತ ಸೈನ್ಯದಲ್ಲಿ ಲೆಫ್ಟಿನೆಂಟ್ ಗೌರ್‍ನರಾಗಿ ಸಪ್ತವಾರ್ಷಿಕ ಯುದ್ಧಗಳು ಮತ್ತು ಅಮೇರಿಕಾ ಸ್ವಾತಂತ್ರ್ಯ ಸಂಗ್ರಾಮದಲ್ಲಿ 'ಯಾರ್ಕ್‌ಟೌನ್' ಕದನದಲ್ಲಿ ಅಮೇರಿಕಾದ ದಂಡನಾಯಕ ಜಾರ್ಜ್ ವಾಷಿಂಗ್ಟನ್‌ಗೆ ಶರಣಾದನು.

**ಆಡಳಿತ ಸುಧಾರಣೆಗಳು(ಭಾರತದ ಸಿವಿಲ್ ಸರ್ವೀಸ್ ಪಿತಾಮಹ)**

- 'ಭಾರತೀಯ ನಾಗರೀಕ ಸೇವೆಯ ಪಿತಾಮಹ'
- ಕಂಪೆನಿ ನೌಕರರಿಗೆ ನೀತಿ ಸಂಹಿತೆ ಜಾರಿ ತಂದನು.
- ICS ಮೂಲಕ ಬ್ರಿಟೀಷ್ ಆಡಳಿತಕ್ಕೊಳಪಟ್ಟ ಪ್ರದೇಶಗಳಿಂದ ಆಳ್ವಿಕೆ ನಡೆಸುವ ಪದ್ಧತಿ ಜಾರಿಗೆ ತಂದನು.
- ಆಡಳಿತ ಯೂರೋಪೀಕರಣ(ಉನ್ನತ ಹುದ್ದೆಗಳನ್ನು ಇಂಗ್ಲೀಷರಿಗೆ) ಮಾಡಿದ. ಕಂಪನಿ ನೌಕರರು ಭಾರತವನ್ನು ಬಿಟ್ಟು ಹೊರಡಬೇಕಾದಾಗ ತಮ್ಮ ಆಸ್ತಿಯನ್ನು ಘೋಷಿಸುವ ಕಣ್ಮರೆಯನ್ನು ಜಾರಿಗೆ ತಂದನು.

**ಪೊಲೀಸ್ ಸುಧಾರಣೆಗಳು: (ಯೂರೋಪಿನ ಮಾದರಿ ಪೊಲೀಸ್ ಇಲಾಖೆ)**

- ಈತ ಭಾರತದಲ್ಲಿ ಶಾಶ್ವತ ಪೊಲೀಸ್ ಇಲಾಖೆ ಸ್ಥಾಪಿಸಿದನು. ಕ್ರಿ.ಶ. 1791 ರಲ್ಲಿ ಕಲ್ಕತ್ತಾದಲ್ಲಿ 'ಪೊಲೀಸ್ ಇಲಾಖೆ ಆಯುಕ್ತರನ್ನು ನೇಮಿಸಿದನು.
- ಜಿಲ್ಲೆಗಳನ್ನು 'ಠಾಣೆ'ಗಳೆಂದು ಅವುಗಳಿಗೆ 'ದರೋಗ' ಎಂಬ ಪೊಲೀಸ್ ಅಧಿಕಾರಿಯನ್ನು ನೇಮಿಸಿದನು.,
- ಅಪರಾಧಿಯಿಂದ ವಶಪಡಿಸಿಕೊಂಡ ಸಂಪತ್ತಿನ ಶೇ.10 ರಷ್ಟನ್ನು ಪೊಲೀಸರಿಗೆ ನೀಡುತ್ತಿದ್ದನು.

**ನ್ಯಾಯಾಂಗ ಸುಧಾರಣೆಗಳು:–** ಕಾರ್ಯಾಂಗವನ್ನು ನ್ಯಾಯಾಂಗದಿಂದ ಬೇರ್ಪಡಿಸಿದನು.

- ಕಾರನ್‌ವಾಲೀಸ್ ಕೋಡ್‌ಗಳನ್ನು ಜಾರಿಗೆ ತಂದನು.
- ಢಾಕ್ಕಾ, ಕಲ್ಕತ್ತಾ, ಮುರ್ಷಿದಾಬಾದ್ & ಪಾಟ್ನಾಗಳಲ್ಲಿ 04 ಪ್ರಾಂತೀಯ ನ್ಯಾಯಾಲಯಗಳನ್ನು ಸ್ಥಾಪಿಸಲಾಯಿತು.
- ನ್ಯಾಯಾಲಯ ಶುಲ್ಕ ರದ್ದುಪಡಿಸಿದನು.
- 1793 ರಲ್ಲಿ ಈತ 'ಕಾನೂನು ಸಂಹಿತೆ' ಜಾರಿಗೆ ತಂದನು. 'ಸರ್ ಜಾರ್ಜ್ ಬಾರ್ಲೋ' ಇದನ್ನು ಕ್ರೋಢೀಕರಿಸಿ ಪ್ರಕಟಿಸಿದರು.

**ವಾಣಿಜ್ಯ ಸುಧಾರಣೆಗಳು:–**

- ಈತ ಬ್ರಿಟೀಷ್ & ಭಾರತೀಯ ವ್ಯಾಪಾರಿಗಳೊಡನೆ ನೇರವಾಗಿ ಕೊಳ್ಳುವ & ಮಾರುವ ಕ್ರಮವನ್ನು ಪುನ: ಜಾರಿಗೆ ತಂದನು.
- ಟಿಪ್ಪು ಸುಲ್ತಾನ್‌ನೊಡನೆ 03ನೇ ಆಂಗ್ಲೋ–ಮೈಸೂರು ಯುದ್ಧ(1792) ರಲ್ಲಿ 'ಶ್ರೀರಂಗಪಟ್ಟಣ' ಒಪ್ಪಂದ ಮಾಡಿಕೊಂಡನು.
- ICS: ಸಿವಿಲ್ ಸೇವಾ ಪರೀಕ್ಷೆಗಳನ್ನು ಮೊದಲು ಆರಂಭಿಸಿದ ಕೀರ್ತಿ ಲಾರ್ಡ್ ವೆಲ್ಲೆಸ್ಲಿಗೆ ಸೇರುತ್ತದೆ. ICS ಅಧಿಕಾರಿಗಳಿಗೆ ಶಿಕ್ಷಣ & ತರಬೇತಿಗಾಗಿ ಕಲ್ಕತ್ತಾದ ಪೋರ್ಟ್ ವಿಲಿಯಂನಲ್ಲಿ

INSTA KAS



Note : For reference purpose only, not for commercial purpose

ಕಾಲೇಜೊಂದನ್ನು ಸ್ಥಾಪಿಸಿದನು. 1853 ರ ಚಾರ್ಟರ್ ಕಾಯ್ದೆ ಡೈರೆಕ್ಟರ್‌ಗಳಿಂದ ನೇಮಕಾತಿ ಅಧಿಕಾರ ಕಸಿದುಕೊಂಡು ನೌಕರರನ್ನು ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ತುಂಬುವ ಪದ್ಧತಿ ಜಾರಿಗೆ ತಂದಿತು. 1861 ರಲ್ಲಿ ICS ಕಾಯ್ದೆ ಪಾಸಾಗಿ 1863 ರಲ್ಲಿ ಸತ್ಯೇಂದ್ರನಾಥ ಠಾಗೋರ್‌ರು ICS ಲ್ಲಿ ತೇರ್ಗಡೆಯಾದ ಪ್ರಥಮ ಭಾರತೀಯ. 1869 ರಲ್ಲಿ ICS ನ್ನು ಸುರೇಂದ್ರನಾಥ್ ಬ್ಯಾನರ್ಜಿ, ರಮೇಶಚಂದ್ರ ದತ್ತ & ಬಿಹಾರಿಲಾಲ್ ಗುಪ್ತ ಪಾಸು ಮಾಡಿದರು.

- 1879 ರಲ್ಲಿ ICS ನ ವಯೋಮಿತಿ 19 ವರ್ಷಕ್ಕೆ ಇಳಿಸಿದ್ದನ್ನು ಖಂಡಿಸಿ ರಾಷ್ಟ್ರವ್ಯಾಪಿ ಚಳುವಳಿ ಕೈಗೊಂಡರು. ಇವರು ತಾಂತ್ರಿಕ ತೊಡಕಿನಿಂದ ICS ಹುದ್ದೆ ಕಳೆದುಕೊಂಡರು(ಸುರೇಂದ್ರನಾಥ ಬ್ಯಾನರ್ಜಿ).

## ಲಾರ್ಡ್ ವೆಲ್ಲೆಸ್ಲಿ (1796–1805)

- ಕಾರ್ನ್‌ವಾಲಿಸ್‌ನ ನಂತರ ಸರ್ ಜಾನ್ ಶೋರ್ ಬಂಗಾಳದ ಗವರ್ನರ್ ಆದನು. ಆದರೆ ಈತ ತಟಸ್ಥ ನೀತಿ ಅನುಸರಿಸಿದನು. ಇದರಿಂದ ಹೈದ್ರಾಬಾದ್ ನಿಜಾಂ ಮರಾಠರಿಂದ ಖಾರ್ಡ್ ಕದನದಲ್ಲಿ ಸೋತು, ಫ್ರೆಂಚರ ಬೆಂಬಲಕ್ಕೆ ಹೋದನು.
- ಇವನ ನಂತರ ಲಾರ್ಡ್ ವೆಲ್ಲೆಸ್ಲಿಯು 1796 ರ ಗವರ್ನರ್ ಜನರಲ್ ಆಗಿ ಅಧಿಕಾರ ವಹಿಸಿಕೊಂಡನು.

## ಸಹಾಯಕ ಸೈನ್ಯ ಪದ್ಧತಿ:–

- ದೇಶೀಯ ರಾಜರುಗಳು ತಮ್ಮ ರಕ್ಷಣೆಗಾಗಿ ಬ್ರಿಟೀಷ್ ಸೇನೆಯನ್ನು ತಮ್ಮಲ್ಲಿ ಇಟ್ಟುಕೊಳ್ಳಬೇಕು. ಈ ಪದ್ಧತಿ ಒಪ್ಪಿಕೊಂಡ ಅರಸರು ಸೈನ್ಯದ ವೆಚ್ಚದ ಬಾಬ್ತಿಗೆ ಹಣ ಅಥವಾ ರಾಜ್ಯದ ಒಂದು ಭಾಗದ ಪ್ರದೇಶವನ್ನು ಬ್ರಿಟೀಷ್ ಸರಕಾರಕ್ಕೆ ಕೊಡಬೇಕು.
- ವೈಸರಾಯ್ ಲಿಟ್ಟನ್ 'ಸ್ಟ್ಯಾಟುಟರಿ ಸಿವಿಲ್ ಸರ್ವೀಸಸ್' ನೀತಿ ಜಾರಿಗೆ ತಂದು ಭಾರತೀಯರನ್ನು ಸ್ಪರ್ಧಾತ್ಮಕ ಪರೀಕ್ಷೆಯಿಂದ ದೂರ ಇಟ್ಟನು.

- 1888 ರಲ್ಲಿ ಲಾರ್ಡ್ ಢಪರಿನ್‌ನು ICS ಸೇವಾ ಸಮಸ್ಯೆಗಳ ಕುರಿತು ಪರಿಶೀಲಿಸಿ ವರದಿ ಮಾಡಲು ಸರ್ ಚಾರ್ಲ್ಸ್ ಲಿಚಿಸನ್ ನೇತೃತ್ವದಲ್ಲಿ ಸಾರ್ವಜನಿಕ ಆಯೋಗವನ್ನು ನೇಮಿಸಿದ. ICS ಪರೀಕ್ಷೆಗಳನ್ನು ಭಾರತ & ಇಂಗ್ಲೆಂಡ್‌ಗಳಲ್ಲಿ ಏಕಕಾಲಕ್ಕೆ ನಡೆಸುವುದನ್ನು ವಿರೋಧಿಸಿದನು. ಸಿವಿಲ್ ಸರ್ವೀಸಸ್‌ನ್ನು ಇಂಡಿಯಾ ಸಿವಿಲ್ ಸರ್ವೀಸಸ್‌ನ್ನಾಗಿ ಪರಿವರ್ತಿಸಿತು. ಕರ್ಜನ್ ಭಾರತೀಯರಿಗೆ ICS ಹುದ್ದೆ ಕಡಿತಗೊಳಿಸಿದ. 1919 ರ ಲಾರ್ಡ್ ಐಲಿಂಗ್‌ಟನ್ ಅಧ್ಯಕ್ಷತೆಯ ರಾಯಲ್ ಕಮಿಷನ್ ಲಂಡನ್ ಪರೀಕ್ಷೆಗಳ ಮೂಲಕ ಭಾರತೀಯರನ್ನು ನೇಮಿಸುವುದು. & 257 ಹುದ್ದೆ ಮೀಸಲು ಎಂದಿತು. 1918 ಚೇಮ್ಸ್ ಫರ್ಡ್ 33% ಮೀಸಲು ಭಾರತೀಯರಿಗೆ ಎಂದಿತು. 1922 ರಲ್ಲಿ ICS ಜೊತೆ IPS, IFS ಹುಟ್ಟಿಕೊಂಡವು. 1935 ರ ಶಾಸನದಂತೆ ಕೇಂದ್ರ ಹಾಗೂ ಪ್ರಾಂತ್ಯ ಲೋಕಸೇವಾ ಆಯೋಗಗಳನ್ನು ಸ್ಥಾಪಿಸಲಾಯಿತು.

- ಕಂಪೆನಿಯ ಅನುಮತಿಯಿಲ್ಲದೇ ಯುದ್ಧ ಅಥವಾ ಶಾಂತಿ ಒಪ್ಪಂದಗಳನ್ನು ಮಾಡಿಕೊಳ್ಳುವಂತಿರಲಿಲ್ಲ. ಇವರನ್ನು ಹೊರತುಪಡಿಸಿ ಇತರ ಯೂರೋಪಿಯನ್ನರನ್ನು ಇಟ್ಟುಕೊಳ್ಳುವಂತಿರಲಿಲ್ಲ.
- ಹೈದ್ರಾಬಾದ್‌ನ ನಿಜಾಂನು(1798 ರಲ್ಲಿ) ಈ ಪದ್ಧತಿಯನ್ನು ಒಪ್ಪಿಕೊಂಡನು ಮೊದಲ ದೇಶೀಯ ರಾಜ. ಈತ ಬಳ್ಳಾರಿ, ಕಡಪ, ಕರ್ನೂಲ್ ಪ್ರದೇಶಗಳನ್ನು ಬ್ರಿಟೀಷರಿಗೆ ನೀಡಿದನು.
- ಅಯೋಧ್ಯೆ ನವಾಬನನ್ನು ಬಲವಂತವಾಗಿ ಈ ಪದ್ಧತಿ ಒಪ್ಪಿಕೊಳ್ಳುವಂತೆ ಮಾಡಲಾಯಿತು. ರೋಹಿಲ್‌ಖಂಡ, ಗೋರಖ್‌ಪುರ & ಗಂಗಾ, ಯಮುನಾ ನದಿಗಳ ಪ್ರದೇಶ ಬ್ರಿಟೀಷರಿಗೆ ನೀಡಿದ.
- ಪೇಶ್ವೆ 2ನೇ ಬಾಜಿರಾವ್ ಈ ಪದ್ಧತಿ ಒಪ್ಪಿಕೊಂಡನು. ಆದರೆ ಮೈಸೂರಿನ ಟಿಪ್ಪುಸುಲ್ತಾನ ತಿರಸ್ಕರಿಸಿದನು.
- 04ನೇ ಆಂಗ್ಲೋ–ಮೈಸೂರು ಯುದ್ಧ ಈತನ ನೇತೃತ್ವದಲ್ಲಿ ನಡೆಯಿತು(1799).
- ಹೈದರಾಲಿ ವಶಪಡಿಸಿಕೊಂಡಿದ ಮೈಸೂರು ಸಿಂಹಾಸನವನ್ನು ಮೈಸೂರು ಸಂಸ್ಥಾನದ ಪುರಾತನ ಹಿಂದೂ ರಾಜವಂಶದ ಕುಟುಂಬದಲ್ಲಿ ಜನಿಸಿದ 'ಕೃಪಾ' ಎಂಬುವವರಿಗೆ ಹಿಂದಿರುಗಿಸಲಾಯಿತು.
- ಟಿಪ್ಪು ಕುಟುಂಬದವರನ್ನು ಯುದ್ಧ ಖೈದಿಗಳಾಗಿ ವೇಲೂರಿಗೆ ಕಳಿಸಲಾಯಿತು.
- 02ನೇ ಆಂಗ್ಲೋ–ಮರಾಠ ಯುದ್ಧ (1803) ರಲ್ಲಿ ನಡೆದು 'ಬೆಸ್ಸಿನ್' ಒಪ್ಪಂದವಾಯಿತು.
- ವೆಲ್ಲೆಸ್ಲಿಯು 1801 ರಲ್ಲಿ ನಿಜಾಂನಿಂದ ಪಡೆದ ಉತ್ತರ ಸರ್ಕಾರ, ಟಿಪ್ಪುವಿನಿಂದ ಪಡೆದ ಪ್ರಾಂತ್ಯ, ಕರ್ನಾಟಿಕ್ ಪ್ರಾಂತ್ಯ & ತಂಜಾವೂರು ಪ್ರಾಂತ್ಯಗಳನ್ನು ಒಟ್ಟುಗೂಡಿಸಿ, ಮದ್ರಾಸ್ ಅಧಿಪತ್ಯ ಸ್ಥಾಪಿಸಿದನು.
- ಬ್ರಿಟೀಷ್ ಈಸ್ಟ್ ಇಂಡಿಯಾ ಕಂಪೆನಿಯ ಶ್ರೇಷ್ಠ ಗವರ್ನರ್ ಜನರಲ್‌ಗಳಲ್ಲಿ ಒಬ್ಬನಾಗಿದ್ದಾನೆ. ಕಂಪೆನಿಯ ಒಂದು ರಾಜಕೀಯ ಶಕ್ತಿಯಾಗಿ ಪರಿವರ್ತಿಸಿದ. ಮಧ್ಯಸ್ಥಗಾರನ ನೀತಿ: ದುರಾಡಳಿತದ ನೆಪವೊಡ್ಡಿ ಸಹಾಯಕಸೈನ್ಯ ಪದ್ಧತಿ ಹೇರಿದನು.
- ಅರ್ಕಾಟ್ ನವಾಬ ಉಮದತುಲ್ಲಾ ಉಮರ್ ಗತಿಸಿದಾಗ ಇವನ ಮಗನಾದ ಅಲಿಹುಸೇನ್ ರೋಗಗ್ರಸ್ಥನೆಂದು ಸಿಂಹಾಸನ ಕಿತ್ತುಕೊಂಡು 'ಅಜೀಂ ಉದ್ ದೌಲ್'ನಿಗೆ ಮಾರಿದ.
- ತಂಜಾವೂರ್: ಮರಾಠಿ ದೊರೆ ತುಲಜಿ ಗತಿಸಿದಾಗ ಮಕ್ಕಳಾದ ಸರ್ಪೋಜಿ & ಅಮರ್ ಸಿಂಗ್‌ರ ನಡುವೆ ಜಗಳವಾಯಿತು. ಸರ್ಪೋಜಿ ಈ ಪದ್ಧತಿ ಅಳವಡಿಸಿಕೊಂಡ.
- ಸೂರತ್: ನವಾಬ ತೀರಿದ್ದರಿಂದ ವಶಪಡಿಸಿಕೊಂಡರು.
- ಫರೂಕ್‌ಬಾದ್: ನವಾಬ ಅಪ್ರಾಪ್ತ ಎಂಬ ನೆಪವೊಡ್ಡಿ ವಶಪಡಿಸಿಕೊಂಡ.
- ವೆಲ್ಲೆಸ್ಲಿ ನಂತರ ಕಾರ್ನ್‌ವಾಲೀಸ್ ಮತ್ತೆ 2ನೇ ಬಾರಿಗೆ ಗೌರ್‍ನರ್ ಜನರಲ್‌ನಾದ. ಇವನ ನಂತರ ಸರ್ ಜಾರ್ಜ್‌ಬಾಲೊ ಗೌರ್‍ನರ್ ಜನರಲ್ ಆಗಿ ಕಾರ್ಯ ನಿರ್ವಹಿಸಿದರು.

## ಮಾರ್ಕ್ವೆಸ್ ಹೇಸ್ಟಿಂಗ್ಸ್(1813–1823)

- ನಂತರ ಲಾರ್ಡ್ ಹೇಸ್ಟಿಂಗ್ಸ್‌ನು ಬಂಗಾಳದ ಗವರ್ನರ್ ಜನರಲ್ ಆದನು.
- ಈತ ಲಾರ್ಡ್ ವೆಲ್ಲೆಸ್ಲಿಯ ಕಾರ್ಯಗಳನ್ನು ಪೂರ್ಣಗೊಳಿಸಿದ.
- ನೇಪಾಳದ ಘೂರ್ಖರು, ಪಿಂಡಾರಿಗಳು, & ಮರಾಠರ ಮುಖಂಡರು ಬ್ರಿಟೀಷ್ ಸಾಮ್ರಾಜ್ಯ ಕಿತ್ತೊಗೆಯಲು ಪ್ರಯತ್ನಿಸಿದರು. ಆದರೆ ಈ ಸವಾಲನ್ನು 'ಹೇಸ್ಟಿಂಗ್ಸ್‌ನು' ಸಮಾಧಾನವಾಗಿ ಎದುರಿಸಿದನು.
- ಬ್ರಿಟೀಷ್ ಸರ್ಕಾರವನ್ನು ಭಾರತದಲ್ಲಿ ಶಾಶ್ವತಗೊಳಿಸಿದನು.
- ಇವನ ಆಳ್ವಿಕೆಯ ಕಾಲದಲ್ಲಿ 1813 ರಲ್ಲಿ ಚಾರ್ಟರ್‌ಕಾಯಿದೆ ಜಾರಿಗೆ ತಂದನು.

  1) ಕಂಪೆನಿ ವ್ಯಾಪಾರ 20 ವರ್ಷಗಳಿಗೆ ಮುಂದುವರೆಸಲಾಯಿತು.
  2) ಕ್ರೈಸ್ತ ಧರ್ಮಗುರುಗಳನ್ನು ನೇಮಿಸಿದನು.
  3) ಕಂಪೆನಿಯ ಏಕಸ್ವಾಮ್ಯ ಅಧಿಕಾರ ಕೊನೆಗೊಂಡಿತು.



Note : For reference purpose only, not for commercial purpose

INSTA KAS

- ಗೂರ್ಖರೊಡನೆ ಯುದ್ಧ '1816 ಸೌಗಲಿ ಶಾಂತಿ' ಒಪ್ಪಂದಕ್ಕೆ ಸಹಿ ಹಾಕಲಾಯಿತು.
- ಪಿಂಡಾರಿ ಯುದ್ಧ(1816–1818):– ಮಧ್ಯಭಾರತದಲ್ಲಿ ಸ್ವೇಚ್ಛೆಯಿಂದ ಲೂಟಿ ಮಾಡುತ್ತಿದ್ದರು. ಅಮೀರ್‌ಖಾನ್, ವಸೀಲ್ ಮಹ್ಮದ್ & ಖರೀಂಖಾನ್, ಸೆಟ್ಟು ಮುಂತಾದವರು ಇದರ ಮುಖಂಡರಾಗಿದ್ದರು. ಪಿಂಡಾರಿಗಳನ್ನು ಈತ ಸೋಲಿಸಿ ಮಧ್ಯಭಾರತದ ಜನರನ್ನು ರಕ್ಷಿಸಿದ.
- 03ನೇ ಆಂಗ್ಲೋ–ಮರಾಠ ಯುದ್ಧದಲ್ಲಿ ಗೆಲುವು (1817–1818)

**ಸುಧಾರಣೆಗಳು:–** ಈತ ಬಂಗಾಳದಲ್ಲಿ 1822 ರಲ್ಲಿ ಟೆನ್ನಿನ್(ಗಣಿ) ಕಾಯ್ದೆ ಹೊರಡಿಸಿ ರೈತರನ್ನು ರಕ್ಷಿಸಿದ. 1817 ರಲ್ಲಿ ಕಲ್ಕತ್ತಾದಲ್ಲಿ ಒಂದು ಕೃಷಿ ಕಾಲೇಜನ್ನು ಸ್ಥಾಪಿಸಿದ. ದೇಶೀಯ ಭಾಷಾ ಶಾಲೆಗಳನ್ನು ಸ್ಥಾಪಿಸಿದನು.

- ಪ್ರದೇಶಿಕ ಭಾಷಾ ಪತ್ರಿಕೆಗಳ ಮೇಲಿದ್ದ ನಿರ್ಬಂಧ ಸಡಿಲಗೊಳಿಸಿ 'ಸಮಾಚಾರ ಪತ್ರಿಕೆ' ಎಂಬ ಪತ್ರಿಕಾ ಪ್ರಕಟಣೆಗೆ ಕಾರಣವಾದನು.
- ಮದ್ರಾಸ್‌ನಲ್ಲಿ 'ರೈತ್ವಾರಿ ಪದ್ಧತಿ' ಜಾರಿಗೆ ತಂದನು.

## ಲಾರ್ಡ್ ವಿಲಿಯಂ ಬೆಂಟಿಕ್ (1828–1835)

ತಂದೆ: ಇಂಗ್ಲೇಂಡಿನ ಪ್ರಧಾನಿ ಪೋರ್ಟ್‌ಲ್ಯಾಂಡ್ ಡ್ಯೂಕ್

- ಲಾರ್ಡ್ ಹೇಸ್ಟಿಂಗ್ಸ್‌ನ ನಂತರ ಆಮ್ ಹರ್ಸ್ಟ್‌ನು ಗವರ್ನರ್ ಜನರಲ್ ಆಗಿ ಕಾರ್ಯ ನಿರ್ವಹಿಸಿದನು.
- ಇವನ ಆಡಳಿತದ ಕಾಲದಲ್ಲಿ 1824 ರಲ್ಲಿ ಬರ್ಮನ್ನರು 'ಅಸ್ಸಾಂ'ನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿದರು. ಈತ ಬರ್ಮನ್ನರ ಮೇಲೆ ಯುದ್ಧ ಘೋಷಿಸಿದನು. ಇದನ್ನು 'ಮೊದಲ ಬರ್ಮನ್ನರ ಯುದ್ಧ' ಎಂದು ಕರೆಯಲಾಗುತ್ತದೆ. ಬ್ರಿಟೀಷರು ಬರ್ಮಿಯನ್ನರನ್ನು ಸೋಲಿಸಿದರು. 1826 ರಲ್ಲಿ 'ಯಾಂಡ್ ಬೂ' ಒಪ್ಪಂದವಾಗಿ ಮುಕ್ತವಾಯಿತು.
- ಬ್ರಿಟೀಷರು 'ಅರಕ್ಕಾನ್' & 'ಟೆನಾರಿಸಂ' ಭಾಗಗಳನ್ನು ವಶಪಡಿಸಿಕೊಂಡರು.
- ಈತನ ನಂತರ 'ಲಾರ್ಡ್ ವಿಲಿಯಂ ಬೆಂಟಿಕ್' ಅಧಿಕಾರ ವಹಿಸಿಕೊಂಡನು. ಈತ ನೆಪೋಲಿಯನ್ ವಿರುದ್ಧ ಕಾದಾಡಿದನು.

### ನ್ಯಾಯಾಂಗ ಸುಧಾರಣೆಗಳು:

ಪ್ರಾಂತೀಯ ಅಪೀಲು ನ್ಯಾಯಾಲಯಗಳನ್ನು ವಿಸರ್ಜಿಸಿದ. ಸಿವಿಲ್ ಮೊಕದ್ದಮೆಗಳಿಗಾಗಿ ಸಾದರ್ ದಿವಾನಿ ಅದಾಲತ್ & ಸಾದರ್ ನಿಜಾಮತ್ ಅದಾಲತ್ (ಕ್ರಿಮಿನಲ್) ಅಪೀಲು ನ್ಯಾಯಾಲಯಗಳನ್ನು ಅಲಹಾಬಾದ್‌ನಲ್ಲಿ ಸ್ಥಾಪಿಸಿದನು.

### ಆಡಳಿತ ಸುಧಾರಣೆಗಳು

- ಅಫೀಮು ವ್ಯಾಪಾರ ಕ್ರಮಪಡಿಸಿ ಆದಾಯ ಗಳಿಸಿಕೊಂಡನು.
- ಭಾರತದ ನ್ಯಾಯಾಲಯಗಳಲ್ಲಿ ಬಳಸುತ್ತಿದ್ದ ಪರ್ಷಿಯನ್ ಭಾಷೆ ರದ್ದುಗೊಳಿಸಿ ದೇಶಿಭಾಷೆಯನ್ನು ಜಾರಿಗೊಳಿಸಿದನು.
- ಗವರ್ನರ್ ಜನರಲ್ ಮಂಡಲಿಗೆ 'ಲಾರ್ಡ್ ಮೆಕಾಲೆ'ಯು ಹೊಸದಾಗಿ ಕಾನೂನು ಸದಸ್ಯನನ್ನಾಗಿ ನೇಮಕ ಮಾಡಿದನು.
- ಹೇಸ್ಟಿಂಗ್ಸ್‌ನು ಹೇರಿದ ಪತ್ರಿಕಾ ಮೇಲಿನ ನಿರ್ಬಂಧವನ್ನು ರದ್ದುಪಡಿಸಿ, ಪತ್ರಿಕೆಗಳಿಗೆ ಪೂರ್ಣ ಸ್ವಾತಂತ್ರ್ಯ ನೀಡಿದನು.
- ರಸ್ತೆ ಸುಧಾರಣೆ: ಕಲ್ಕತ್ತಾ & ದೆಹಲಿ ನಡುವೆ ಗ್ರಾಂಡ್ ಟ್ರಂಕ್ ರೋಡ್‌ನ್ನು ನಿರ್ಮಿಸಿದನು.
- ಗಂಗಾ ಮೇಲ್ದಂಡೆ ಕಾಲುವೆಯನ್ನು ನಿರ್ಮಿಸಿದನು. ಗಂಗಾ ನದಿಯಲ್ಲಿ ಉಗಿಬೋಗಿ ಸಂಚಾರವನ್ನು ಆರಂಭಿಸಿದನು. ಭಾರತ & ಇಂಗ್ಲೇಂಡ್ ನಡುವೆ ಕೆಂಪುಸಮುದ್ರ ಮೂಲಕ ನೌಕಾಯಾನವನ್ನು ಆರಂಭಿಸಿದನು.

- 1834 ರಲ್ಲಿ ಕೊಡಗಿನ ಚಿಕ್ಕವೀರ ರಾಜೇಂದ್ರನನ್ನು ಪದಚ್ಯುತಗೊಳಿಸಿ ಕೊಡಗನ್ನು ಆಕ್ರಮಿಸಲಾಯಿತು.

### ಸಾಮಾಜಿಕ ಸುಧಾರಣೆಗಳು:–

ಈತ ತನ್ನ ಸಾಮಾಜಿಕ ಸುಧಾರಣೆಗಳಿಂದಲೇ ಅತ್ಯಂತ ಜನಪ್ರಿಯ ಗವರ್ನರಾಗಿದ್ದು.

ಎ) ಸತಿಪದ್ಧತಿ ನಿರ್ಮೂಲನೆ:– ರಾಜರಾಂ ಮೋಹನರಾಯರ ಜೊತೆಗೂಡಿ 1829 ರಲ್ಲಿ ಈ ಪದ್ಧತಿಯ ರದ್ಧತಿಗೆ ಶಾಸನವನ್ನು ಜಾರಿಗೆ ಮಾಡಿದರು. ರಜಪೂತರಲ್ಲಿ ಈ ಪದ್ಧತಿ ಆಚರಣೆ ಅತಿಯಾಗಿತ್ತು.

ಬಿ) ಹೆಣ್ಣು ಶಿಶು ಹತ್ಯೆ ನಿರ್ಮೂಲನೆ:– ಕಾಥೇವಾಡ & ರಾಜಸ್ಥಾನಗಳಲ್ಲಿ ಈ ಪದ್ಧತಿಯು ಬಳಕೆಯಿದ್ದು ಇದರ ವಿರುದ್ಧ ಕಾನೂನು ಜಾರಿ ಮಾಡಿದರು.

ಸಿ) ನರಬಲಿ ನಿರ್ಮೂಲನೆ:– ಒರಿಸ್ಸಾದ ಬುಡಕಟ್ಟು ಜನರಲ್ಲಿ ಈ ಪದ್ಧತಿ ಆಚರಣೆಯಲ್ಲಿತ್ತು.

ಡಿ) 'ಠಕ್ಕರ ನಿಗ್ರಹ':– 'ಮೇಜರ್ ಸ್ಲಿಮನ್' ನೇತೃತ್ವದಲ್ಲಿ ಹೊಸ ಇಲಾಖೆ ಸ್ಥಾಪಿಸಿ ನಿಗ್ರಹಿಸಿದನು.

- ನೇತೃತ್ವದಲ್ಲಿ ಹೊಸ ಇಲಾಖೆ ಸ್ಥಾಪಿಸಿ ನಿಗ್ರಹಿಸಿದನು.
- ಜೇಮ್ಸ್ ಪ್ರೆಸ್ಸಿಫ್‌ನು 1837 ರಲ್ಲಿ ಭಾರತದ ಶಾಸನಗಳನ್ನು ಕ್ರೋಢೀಕರಿಸಿದನು.
- ಬೆಂಟಿಂಕ್‌ನು ಕಾಫಿ, ಟೀ, ಬೆಳೆಗಳಿಗೆ ಪ್ರೋತ್ಸಾಹ ನೀಡಿದನು. ತೋಟಗಾರಿಕಾ ಕೃಷಿಯನ್ನು ಪ್ರಾರಂಭಿಸಿದನು. ಇಂಗ್ಲೀಷ್ ಶಿಕ್ಷಣದ ಪಿತೃ ಎನಿಸಿಕೊಂಡಿದ್ದಾನೆ.

**ಶೈಕ್ಷಣಿಕ ಸುಧಾರಣೆಗಳು:–** ಇನ್ನು ಮುಂದೆ ಭಾರತೀಯ ಶಿಕ್ಷಣ ಮಾಧ್ಯಮ 'ಆಂಗ್ಲಭಾಷೆ' ಎಂದು ಈತ ಘೋಷಿಸಿದ.

- ಕಲ್ಕತ್ತಾದಲ್ಲಿ ವೈದ್ಯಕೀಯ ಕಾಲೇಜು & ಮುಂಬೈನಲ್ಲಿ 'ಎಲಿನ್‌ಸನ್' ಕಾಲೇಜು ಸ್ಥಾಪಿಸಿದನು.
- ರೂರ್ಕೈಲಾದಲ್ಲಿ ಒಂದು ಸಿವಿಲ್ ಇಂಜಿನಿಯರಿಂಗ್ ಕಾಲೇಜನ್ನು ಸ್ಥಾಪಿಸಿದನು.

## 1833 ರ ಚಾರ್ಟರ್ ಕಾಯ್ದೆ

- ಈ ಕಾಯ್ದೆ ಜಾರಿಗೊಳಿಸಿದನು. ಕಂಪೆನಿಯ ಏಕಸ್ವಾಮ್ಯತೆ ರದ್ದುಮಾಡಲಾಯಿತು. ಬಂಗಾಳದ ಗವರ್ನರ್ ಜನರಲ್ 'ಭಾರತದ ಗವರ್ನರ್ ಜನರಲ್' ಆದನು. ಈತನೇ ಭಾರತದ ಪ್ರಥಮ 'ಗೌರ್ನರ್ ಜನರಲ್'.
- ಈತನು ಭಾರತೀಯ ಜನತೆಗೆ ಬಹಳ ಅಕ್ಕರೆಯನ್ನು ತೋರಿಸಲಾದ್ದರಿಂದ ಲಾರ್ಡ್ ರಿಪ್ಪನ್ ಜೊತೆ ಹೋಲಿಸಲಾಗಿದೆ.
- ಚಾರ್ಲ್ಸ್ ಮೆಟ್ ಕಾಫ್ (1835) ಕೇವಲ ಒಂದು ವರ್ಷ ಸೇವೆ ಸಲ್ಲಿಸಿದ. ಭಾರತೀಯ ಪತ್ರಿಕೋದ್ಯಮದ ಮೇಲಿನ ನಿರ್ಬಂಧವನ್ನು ತೆಗೆದು ಹಾಕಿದ್ದರಿಂದ ಇವನನ್ನು ವಾಪಸ್ಸು ಕರೆಸಿಕೊಳ್ಳಲಾಯಿತು.

## ಲಾರ್ಡ್ ಆಕ್ಲೆಂಡ್ (1836–42)

- ಮೊದಲ ಆಂಗ್ಲೋ–ಅಫಘನ ಯುದ್ಧ ಕಂದಹಾರ್ & ಕಾಬೂಲ್‌ನ್ನು ವಶಪಡಿಸಿಕೊಂಡರು. ಕಾಬೂಲಿನಿಂದ ಹಿಂದಿರುಗುವಾಗ ಸಂಭವಿಸಿದ ದುರಂತ ಹಾಗೂ ಯುದ್ಧದ ವೆಚ್ಚ ಈತನನ್ನು ಹಿಂದಕ್ಕೆ ಕರೆಸಿಕೊಳ್ಳುವಂತೆ ಮಾಡಿತು.

## ಲಾರ್ಡ್ ಎಲ್ಲೆನ್ ಬರೋ (1842–44)

- ಕಾಬೂಲ್ & ಘಜ್ನಿಗಳನ್ನು ವಶಪಡಿಸಿಕೊಂಡರು.

## ಲಾರ್ಡ್ ಹಾರ್ಡಿಂಜ್ (1844–48)

INSTAKAS



Note : For reference purpose only, not for commercial purpose

- ಮೊದಲ ಸಿಖ್ಖ್ ಯುದ್ಧ 'ಲಾಹೋರ್ ಒಪ್ಪಂದ'ದ ಮೂಲಕ ಕೊನೆಗೊಂಡಿತು. ಪಂಜಾಬಿಗೆ ರೆಸಿಡೆಂಟ್‌ಯನ್ನು ನೇಮಕ ಮಾಡುವ ಅಧಿಕಾರ ದೊರೆಯಿತು.
- ಇವನ ಕಾಲದಲ್ಲಿ ರೈಲ್ವೆ ಸ್ಥಾಪಿಸುವ ಮೊದಲ ಪ್ರಯತ್ನಗಳು ಆರಂಭಗೊಂಡವು. ಗಂಗಾ ನದಿಗೆ ದೊಡ್ಡ ಕಾಲುವೆ ನಿರ್ಮಿಸುವ ಯೋಜನೆ ಆರಂಭ.
- ಸಾರ್ವಜನಿಕ ಆಡಳಿತದಲ್ಲಿ ನೌಕರಿಗಳಲ್ಲಿ ಇಂಗ್ಲೀಷ್ ಶಿಕ್ಷಣ ಪಡೆದವರನ್ನು ಮಾತ್ರ ನೇಮಿಸಿಕೊಳ್ಳುವ ಕಾನೂನು ತಂದನು.
- ಪುರಾತನ ಸ್ಮಾರಕಗಳನ್ನು ರಕ್ಷಿಸಲು ಕ್ರಮ ತೆಗೆದುಕೊಂಡನು.
- ಅಸ್ಸಾಂನಲ್ಲಿ ಟೀ ಉತ್ಪಾದನೆಗೆ ಉತ್ತೇಜನ ನೀಡಿದನು.
- ಇವನ ಆಳ್ವಿಕೆಯಲ್ಲಿ ಭಾನುವಾರವನ್ನು ರಜಾದಿನವೆಂದು ಘೋಷಿಸಿದನು.
- ಸತಿ, ಶಿಶು & ಸ್ತ್ರೀ ಹತ್ಯೆ ತಡೆಗೆ ವಿಶೇಷ ಆಸಕ್ತಿ ವಹಿಸಿದನು.

## ಲಾರ್ಡ್ ಡಾಲ್ ಹೌಸಿ (1848–1856)

- 1848 ರಲ್ಲಿ ಭಾರತದ ಗೌರ್ನರ್ ಜನರಲ್‌ನಾದನು. ಬ್ರಿಟೀಷ್ ಸಾಮ್ರಾಜ್ಯ ವಿಸ್ತರಣೆಗಾಗಿ ಹಲವಾರು ಕ್ರಮ ತೆಗೆದುಕೊಂಡನು.
  ಎ) ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಯಂತೆ ವಿಲೀನಗೊಂಡ ಸ್ವದೇಶಿ ಸಂಸ್ಥಾನಗಳು.
  ಬಿ) ಯುದ್ಧಗಳ ಮೂಲಕ ವಿಲೀನಗೊಂಡ ಸ್ವದೇಶಿ ಸಂಸ್ಥಾನ.
  ಸಿ) ದುರಾಡಳಿತದ ನೆಪದ ಮೇಲೆ ವಿಲೀನಗೊಂಡ ಸ್ವದೇಶಿ ಪ್ರಾಂತ್ಯಗಳು.
- ದತ್ತು ಪುತ್ರರಿಗೆ ಹಕ್ಕಿಲ್ಲ ಎಂಬ ನೀತಿಯಡಿ ವಶಪಡಿಸಿಕೊಂಡ ಮೊದಲ ರಾಜ್ಯವೇ ಸತಾರ್.

**ದತ್ತು ಮಕ್ಕಳಿಗೆ ಹಕ್ಕಿಲ್ಲವೆಂಬ ನೀತಿ:–** ಕಚಾರ್, ಆರ್ಕಾಟ್, ತಂಜಾವೂರ್, ಭರತ್ ಪುರ.

- ಸತಾರ, ಝಾನ್ಸಿ, ಜೈಪುರ, ಸಂಬಲಪುರ, ಉದಯಪುರ ನಾಗಪುರಗಳನ್ನು ವಶಪಡಿಸಿಕೊಂಡನು.

**ಯುದ್ಧಗಳ ಮೂಲಕ**

- 2ನೇ ಆಂಗ್ಲೋ ಸಿಖ್(1849) ಯುದ್ಧದಲ್ಲಿ ಪಂಜಾಬನ್ನು 1849 ರಲ್ಲಿ ವಿಲೀನಗೊಳಿಸಿಕೊಂಡನು.
- 2ನೇ ಬರ್ಮಾ ಯುದ್ಧ(1852) ಬ್ರಿಟೀಷ ವ್ಯಾರಿಗಳು ಬರ್ಮಾದಲ್ಲಿ ಅಗೌರವಕ್ಕೊಳಗಾದರು. ಆದ್ದರಿಂದ ಹೌಸಿಯು 1852 ರಲ್ಲಿ ಬರ್ಮಿಯರನ್ನು ಸೋಲಿಸಿ, ಬರ್ಮಾವನ್ನು ವಶಪಡಿಸಿಕೊಂಡರು.
- ಸಿಕ್ಕಿಂ ಆಕ್ರಮಣ (1852)– ಸಿಕ್ಕಿಂನು ಆಕ್ರಮಿಸಿ, ಡಾರ್ಜಿಲಿಂಗ್ ಸೇರಿದಂತೆ ಒಂದು ಭಾಗ ಆಕ್ರಮಿಸಿದರು.

## ದುರಾಡಳಿತದ ಮೇಲೆ ಆಕ್ರಮಿಸಿದ ರಾಜ್ಯಗಳು

- 1856 ರಲ್ಲಿ ಅಯೋಧ್ಯೆಯ (ಔಧ್) 'ವಾಜಿದ್ ಅಲಿಷಾ' ಬಿರಾದ್ ಸಹ ವಿಲೀನಗೊಳಿಸಿಕೊಂಡರು.

## ಆಡಳಿತ:

- ಈತ ಭಾರತದ ಹಾಗೂ ಬಂಗಾಳದ ಗೌರ್ನರ್ ಜನರಲ್ ಆಗಿ ಕಾರ್ಯ ನಿರ್ವಹಿಸುತ್ತಾ ಬಂದನು. ಹಾಗಾಗಿ ಸಮರ್ಥ ಆಡಳಿತ ನಡೆಸಲಾಗಲಿಲ್ಲ.
- 'ಸಿಮ್ಲಾ' ಬೇಸಿಗೆ ಕಾಲದ, 'ಕಲ್ಕತ್ತಾ' ಚಳಿಗಾಲದ ರಾಜಧಾನಿಯಾಗಿ ಕಾರ್ಯ ನಿರ್ವಹಿಸಿದವು.

## ಸಿಕ್ಕಿಂ ಆಕ್ರಮಣ: (1852)

- ಭಾರತದಲ್ಲಿ ಮೊಟ್ಟ ಮೊದಲಿಗೆ ರೈಲು ಮಾರ್ಗ ಪರಿಚಯಿಸಿದ ಕೀರ್ತಿ ಈತನಿಗೆ ಸಲ್ಲುತ್ತದೆ. 1853 ರಲ್ಲಿ ಭಾರತದಲ್ಲಿ ಪ್ರಥಮ ರೈಲು ಮಾರ್ಗ ಹಾಕಿ, 1854 ರಲ್ಲಿ ಹೌರಾ & ರಾಣಿಗಂಜ್ ನಡುವೆಯೂ, 1856 ರಲ್ಲಿ ಚೆನ್ನೈ ಅರಕ್ಕೋಣಂ ರೈಲು ಮಾರ್ಗ ಪ್ರಾರಂಭವಾಯಿತು.
- "ರೈಲು ಮಾರ್ಗದ ಪಿತಾಮಹ" ಎಂದು ಕರೆಯಲಾಗುತ್ತದೆ.
- ಲೋಕೋಪಯೋಗಿ ಇಲಾಖೆಯನ್ನು ಸ್ಥಾಪಿಸಿದನು. 1856 ವಿಧವಾ ವಿವಾಹ ಕಾಯಿದೆ ಜಾರಿಗೆ ತಂದನು.

## ಅಂಚೆ ಮತ್ತು ತಂತಿ

- ಮೊಟ್ಟ ಮೊದಲ ಅಂಚೆ ಚೀಟಿಯನ್ನು ಭಾರತದಲ್ಲಿ ಪರಿಚಯಿಸಲಾಯಿತು. ಈತ ಅರ್ಧ ಆಣೆಯ (3 ಪೈಸೆ) ಅಂಚೆ ಪದ್ಧತಿ ಪರಿಚಯಿಸಿದನು. ದೇಶಾದ್ಯಂತ ತಂತಿಸಂಪರ್ಕ ಕಲ್ಪಿಸಲಾಯಿತು.
- ಲೋಕೋಪಯೋಗಿ ಇಲಾಖೆ ಸ್ಥಾಪಿಸಿದನು. ಕಲ್ಕತ್ತಾದಿಂದ ಪೇಷಾವರದವರೆಗಿನ 'ಗ್ರಾಂಡ್ ಟ್ರಂಕ್' ರೋಡನ್ನು ಉನರ್ ನಿರ್ಮಿಸಲಾಯಿತು.

## ಸಾಮಾಜಿಕ ಸುಧಾರಣೆ

- 1856 ರಲ್ಲಿ ಹಿಂದೂ ವಿವಾಹ, ಪುನರ್ ವಿವಾಹ ಕಾಯ್ದೆ ಜಾರಿಗೊಳಿಸಿದನು. ವಿಧವಾ ವಿವಾಹ ಪ್ರೋತ್ಸಾಹಿಸಿದನು.
- ಮತಾಂತರಗೊಂಡರೆ ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ಎಂದು ಪ್ರಕಟಿಸಿದನು.
- ಪೇಷಾವರ್ & ಕೋಲ್ಕತ್ತಾ ನಡುವೆ ಗ್ರಾಂಡ್ ಟ್ರಂಕ್ ರಸ್ತೆ ಪುನರ್ ರಚಿಸಲಾಯಿತು.
- ಗಂಗಾ ಕಾಲುವೆಯು ಇವನ ಕಾಲದಲ್ಲಿ ನಿರ್ಮಿಸಲ್ಪಟ್ಟಿತು.

## ಶೈಕ್ಷಣಿಕ ಸುಧಾರಣೆಗಳು

- ವುಡ್ ವರದಿಯನ್ನು ಭಾರತದಲ್ಲಿ 'ಇಂಗ್ಲೀಷ್ ಶಿಕ್ಷಣದ ಮ್ಯಾಗ್ನಕಾರ್ಟ್' ಎಂದು ಕರೆಯಲಾಗಿದೆ. 1854 ರಲ್ಲಿ ಚಾರ್ಲ್ಸ್‌ವುಡ್ ರ ನೇತೃತ್ವದಲ್ಲಿ ಆಯೋಗವನ್ನು ರಚಿಸಿ, ಶಿಕ್ಷಣದಲ್ಲಿ ಹಲವಾರು ಸುಧಾರಣೆಗಳನ್ನು ತರಲಾಯಿತು.
- ಪ್ರಾಥಮಿಕದಿಂದ ಪದವಿಯವರೆಗೆ ಹಲವು ವಿಧದ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲಾಯಿರು.
- ಶಿಕ್ಷಕರ ತರಬೇತಿಗೆ, ತರಬೇತಿ ಶಾಲೆಗಳನ್ನು ತೆರೆಯಲಾಯಿತು.
- ಲಂಡನ್ ವಿಶ್ವವಿದ್ಯಾಲಯದ ಮಾದರಿಯಲ್ಲಿ 'ಚೆನ್ನೈ' ಮುಂಬೈ, ಕೋಲ್ಕತ್ತಾಗಳಲ್ಲಿ ವಿಶ್ವ ವಿದ್ಯಾಲಯಗಳನ್ನು ಸ್ಥಾಪಿಸಲಾಯಿತು.
- 'ರೂರಕಿ' ಎಂಬಲ್ಲಿ ಇಂಜಿನಿಯರಿಂಗ್ ಕಾಲೇಜು ಸ್ಥಾಪಿಸಿದರು.
- ಅಂಗೀಕಾರ ಪಡೆದ ಶಾಲೆಗಳಿಗೆ ಅನುದಾನ ಕೊಡುವ ಪದ್ಧತಿ ಜಾರಿಗೆ ತಂದನು.

## ಸೈನಿಕ ಸುಧಾರಣೆಗಳು:–

- ಭಾರತದ ಸೇನೆಗೆ 'ಘೂರ್ಖರನ್ನು' ಸೇರಿಸಿಕೊಂಡನು.
- ಸೇನೆಯ ಮುಖ್ಯ ಕೇಂದ್ರವನ್ನು ಕಲ್ಕತ್ತಾದಿಂದ ಸಿಮ್ಲಾಕ್ಕೆ ಸ್ಥಳಾಂತರಿಸಿದನು.
- ಫಿರಂಗಿದಳದ ಮುಖ್ಯ ಕೇಂದ್ರವನ್ನು ಕಲ್ಕತ್ತಾದಿಂದ ಮೀರತ್‌ಗೆ ಸ್ಥಳಾಂತರಿಸಿದನು.
- ಭಾರತದ ಗವರ್ನರ್ ಜನರಲ್‌ಗಳಲ್ಲಿಯೇ ಅತಿ ಕಿರಿಯ ವಯಸ್ಸಿನವನಾಗಿದ್ದು 'ಆಧುನಿಕ ಭಾರತದ ನಿರ್ಮಾತೃ' ಎಂದು ಪ್ರಸಿದ್ಧಿ ಪಡೆದಿದ್ದಾನೆ.

INSTA KAS



Note : For reference purpose only, not for commercial purpose

- ಭಾರತದಲ್ಲಿ ಪ್ರಥಮ ಬಾರಿಗೆ 1748 ರಲ್ಲಿ ಮೇಜರ್ ಸ್ಟ್ರಿಂಜರ್ ಲಾರೆನ್ಸ್ ಎಂಬಾತನು ಬ್ರಿಟೀಷ್ ಭಾರತೀಯ ಸೈನ್ಯವನ್ನು ಸ್ಥಾಪಿಸಿದನು. ಹೀಗಾಗಿ ಈತನನ್ನು "ಭಾರತೀಯ ಸೈನ್ಯದ ಪಿತಾಮಹ" ಎಂದು ಕರೆಯಲಾಗಿದೆ. ಈತ ಮದ್ರಾಸಿನಲ್ಲಿ ಭಾರತೀಯ ಸೈನಿಕರ ಒಂದು ಸಣ್ಣಪಡೆಯನ್ನು ಕಟ್ಟಿದನು.
- 1843 ರಲ್ಲಿ ಪ್ರಥಮ ಬಾರಿಗೆ ಸಿಂಧ್‌ನಲ್ಲಿ ಪೊಲೀಸ್ ಪಡೆಯನ್ನು ಕಟ್ಟಿದ ಕೀರ್ತಿ 'ಚಾರ್ಲ್ಸ್ ನೆಪಿಯರ್'ಗೆ ಸಲ್ಲುತ್ತದೆ. ಮ್ಯಾಜಿಸ್ಟ್ರೇಟ್ & ಪೊಲೀಸ್ ಸೂಪರಿಂಟೆಂಡೆಂಟ್ ಕರ್ತವ್ಯಗಳನ್ನು ಪ್ರತ್ಯೇಕಿಸಲಾಯಿತು.

**ಲಾಡ್ ಕಾರ್ನ್‌ವಾಲೀಸ್‌ನ ನ್ಯಾಯಾಂಗ ಸುಧಾರಣೆಗಳು:**

06 ಹಂತದ ಸಿವಿಲ್ ಕೋರ್ಟ್‌ಗಳನ್ನು ವ್ಯವಸ್ಥೆಗೊಳಿಸಿ ಜಾರಿಗೆ ತಂದನು.

1) ಮುನ್ಸಿಫ್ (ಕೆಳಹಂತದ) ನ್ಯಾಯಾಲಯ: 50 ರೂ.ಮೌಲ್ಯದ ಮೊಕದ್ದಮೆ ತೀರ್ಮಾನಿಸುತ್ತಿದ್ದರು.
2) ರಿಜಿಸ್ಟ್ರಾರ್ ಕೋರ್ಟ್‌ಗಳು: 200 ರೂ.ವರೆಗಿನ ಮೊಕದ್ದಮೆ
3) ಜಿಲ್ಲಾ ಕೋರ್ಟ್‌ಗಳು: 500 ರೂ.ವರೆಗಿನ
4) ಪ್ರಾಂತೀಯ ಕೋರ್ಟ್‌ಗಳು: ಜಿಲ್ಲಾ ಕೋರ್ಟ್‌ಗಳ ಮೇಲೆ 4 ಪ್ರಾಂತೀಯ ನ್ಯಾಯಾಲಯಗಳನ್ನು ಸ್ಥಾಪಿಸಲಾಯಿತು(ಕಲ್ಕತ್ತಾ, ಢಾಕಾ, ಮುರ್ಷಿದಾಬಾದ್ & ಪಾಟ್ನಾ) 1000 ರೂ.ವರೆಗೆ.
5) ಸದರ್–ದಿವಾನಿ ಅದಾಲತ್ (ಸುಪ್ರೀಂಕೋರ್ಟ್): ಕಲ್ಕತ್ತಾದಲ್ಲಿ ಸ್ಥಾಪಿಸಲಾಗಿತ್ತು. 5000 ರೂ. ವರೆಗಿನ ಮೊಕದ್ದಮೆಗಳನ್ನು ತೀರ್ಮಾನಿಸುತ್ತಿತ್ತು. ಇಲ್ಲಿ ಇತ್ಯರ್ಥವಾಗದ ಕೇಸುಗಳನ್ನು ಇಂಗ್ಲೇಂಡಿನಲ್ಲಿದ್ದ 'ಕಿಂಗ್ ಇನ್ ಕೌನ್ಸಿಲ್'ಗೆ ಒಯ್ಯಬಹುದಿತ್ತು.
6) ಕಿಂಗ್ ಇನ್ ಕೌನ್ಸಿಲ್ (ರಾಜಮಂಡಲಿ ಕೋರ್ಟ್): ಇದು ಇಂಗ್ಲೇಂಡಿನ ದೊರೆಯ ಅಧೀನದಲ್ಲಿದ್ದು, ಇದೇ ಅಂತಿಮ ಅಪೀಲಾಗಿತ್ತು. ನ್ಯಾಯಾಲಯವಾಗಿತ್ತು. ಇದು 5,000 ರೂ.ಗಿಂತ ಮೇಲ್ಪಟ್ಟ ಮೊಕದ್ದಮೆಗಳನ್ನು ತೀರ್ಮಾನಿಸುತ್ತಿತ್ತು,

- ಸಂಚಾರಿ ನ್ಯಾಯಾಲಯ (ಸರ್ಕ್ಯೂಟ್ ಕೋರ್ಟ್ಸ್): 1790 ಸುಧಾರಣೆಗಳು ಇಂಡಿಯನ್ ಜಡ್ಜ್‌ಗಳ ಅಧೀನದಲ್ಲಿದ್ದ ಫೌಜದಾರಿ ಕೋರ್ಟ್‌ಗಳನ್ನು ರದ್ದುಪಡಿಸಿ ಅವುಗಳ ಸ್ಥಾನದಲ್ಲಿ 04 ಸರ್ಕ್ಯೂಟ್ ಕೋರ್ಟ್‌ಗಳನ್ನು ಕಲ್ಕತ್ತಾ, ಮುರ್ಷಿದಾಬಾದ್, ಪಾಟ್ನಾ & ಢಾಕಾಗಳಲ್ಲಿದ್ದವು. ಕ್ರಿಮಿನಲ್ ನ್ಯಾಯಾಲಯಗಳಾಗಿದ್ದವು.
- ಕಾನೂನಿನ ಮುಂದೆ ಎಲ್ಲರೂ ಸಮಾನರು ಎಂಬ ತತ್ವವನ್ನು ಕಾರ್ನ್‌ವಾಲೀಸ್ ಸಾರಿದನು. ನೌಕರರ ಮೇಲೂ ಮೊಕದ್ದಮೆ ಹೂಡಲು ಅವಕಾಶ ಕಲ್ಪಿಸಿದನು.

**ಲಾರ್ಡ್ ಆಮ್‌ಹರ್ಸ್ (1823–28) ಲಾರ್ಡ್ ಹೇಸ್ಟಿಂಗ್ಸ್ ನಂತರ ಭಾರತದ ಗೌರ್ನರ್ ಜನರಲ್.**

- ಮೊದಲ ಬರ್ಮಿಸ್ ಯುದ್ಧ (1624–26)
- ಬ್ಯಾಂಕ್ ಪುರದ ಸೈನಿಕ ಬಂಡಾಯ: ಹಿಂದೂಸ್ತಾನಿ ಸೈನಿಕರನ್ನು ಸಮುದ್ರ ದಾಟಿ ಬರ್ಮಾ ಯುದ್ಧಕ್ಕೆ ಧಾವಿಸಿ ಬರುವಂತೆ ಹೇಳಿದಾಗ ದಂಗೆ ಎದ್ದರು.
- ಭರತ್‌ಪುರದ ಆಕ್ರಮಣ:

## ಆಂಗ್ಲೋ – ಮರಾಠರ ಯುದ್ಧ

**1) ಮೊದಲ ಆಂಗ್ಲೋ–ಮರಾಠರ ಯುದ್ಧ(1775–82):** ಪೇಶ್ವೆ ಮಾಧವರಾವ್ 1772 ರಲ್ಲಿ ನಿಧನವಾದನು. ಈತನ ಮಗ ನಾರಾಯಣರಾವ್ ಪಟ್ಟವೇರಿದನು. ಅಧಿಕಾರದ ಆಸೆಯಿಂದ ಚಿಕ್ಕಪ್ಪನಾದ ರಘುನಾಥ(ರಾಘೋಬ) ನಾರಾಯಣರಾವ್‌ನನ್ನು ಕೊಲ್ಲಿಸಿದನು. ಮರಾಠ ಮುಖಂಡರು ರಘೋಬನನ್ನು ವಿರೋಧಿಸಿ ಗಡಿಪಾರು ಮಾಡಿದ್ದು ಬ್ರಿಟೀಷರ ರಕ್ಷಣೆಯಾಗಿದೆ.

- 1775 ರಲ್ಲಿ ಬ್ರಿಟೀಷರ ಜೊತೆ (ಬಾಂಬೆ ಗವರ್ನರ್ ಆಗಿದ್ದ ಎಲ್ಲಿನ್‌ಸ್ಟನ್ ಜೊತೆ) 'ಸೂರತ್' ಒಪ್ಪಂದ ಮಾಡಿಕೊಂಡ ಸಾಲ್ಸೆಟ್ & ಬೆಸ್ಸಿನ್‌ಗಳನ್ನು ಬಿಟ್ಟುಕೊಡುವುದಾಗಿ ಹೇಳಿದ. ಮರಾಠ ನಾಯಕರು ಇದನ್ನು ಸಹಿಸದೇ 'ನಾನಾ ಫಡ್ನವೀಸ್' ನಾಯಕತ್ವದಲ್ಲಿ 'ರಾಘೋಬ'ನನ್ನು ಗಡಿಪಾರು ಮಾಡಿದರು. ರಾಘೋಬಾ ಮರಾಠರ ಸ್ವಾತಂತ್ರ್ಯ ಬ್ರಿಟೀಷರಿಗೆ ಮಾರಿದಕ್ಕೆ ಯುದ್ಧ ಸಾರಿ 'ಅರಾಸ್' ಕದನದಲ್ಲಿ ಸೋತು,
- 1776 ರಲ್ಲಿ ನಾನಾ ಫಡ್ನವೀಸ್‌ನ ಜೊತೆ ಹೇಸ್ಟಿಂಗ್ಸ್‌ನು 'ಪುರಂದರ ಒಪ್ಪಂದ' ಮಾಡಿಕೊಂಡನು. ಇದರ ಪ್ರಕಾರ ಠಾಣಾ, ಸಾಲ್ಸೆಟ್‌ಗಳನ್ನು ಪಡೆದರು.
- ಆದರೆ ಬಾಂಬೆ ಸರಕಾರ ರಾಘೋಬನಿಗೆ ಆಶ್ರಯ ನೀಡಿತ್ತು. & ಸೂರತ್ ಒಪ್ಪಂದವನ್ನು ಮಾನ್ಯ ಮಾಡಿತು. ವಡಗಾಂವ್ ಒಪ್ಪಂದ ಬ್ರಿಟೀಷರಿಗೆ ಮಾಡಿದ ಅವಮಾನವೆಂದು ವಾರನ್ ಹೇಸ್ಟಿಂಗ್ಸ್‌ನು ಆಗ ಮರಾಠ & ಬ್ರಿಟೀಷರ ನಡುವೆ ಯುದ್ಧ ಆರಂಭವಾಯಿತು.
- ಇಂಗ್ಲೀಷರ ವಿರುದ್ಧ ಹೈದರ್‌ಅಲಿ & ನಿಜಾಮ & ಮರಾಠರು ಸೇರಿ ರಚಿಸಿದ ಕೂಟಕ್ಕೆ ಸೋಲಾಯಿತು.
- '1782' ರಲ್ಲಿ ಮರಾಠರು 'ಸಾಲ್ಬಾಯಿ' ಒಪ್ಪಂದಕ್ಕೆ ಸಹಿ ಹಾಕಿದರು.
- 2ನೇ ಮಾಧವರಾಯನನ್ನು ಪೇಶ್ವೆಯನ್ನಾಗಿ ಮಾಡಿ ರಾಘೋಬನಿಗೆ ವಿಶ್ರಾಂತಿ ವೇತನ ನೀಡಲಾಯಿತು. ಮುಂದೆ ರಾಘೋಬ (ರಘುನಾಥರಾಯನ) ಮಗ 2ನೇ ಬಾಜಿರಾಯ ಪೇಶ್ವೆ ಆದನು. ಇವನೇ ಕೊನೆಯ ಪೇಶ್ವೆ.
- ಮುಂದಿನ 20 ವರ್ಷಗಳ ಕಾಲ ಶಾಂತಿ ನೆಲೆಸಿತು. ನಾರಾಯಣರಾವ್‌ನ ವಿಧವೆ ಗಂಗೂಬಾಯಿಗೆ ಒಂದು ಗಂಡು ಮಗು ಹುಟ್ಟಿತು. ನಾನಾಫಡ್ನವೀಸ್ ನಾಯಕತ್ವದಲ್ಲಿ ಮರಾಠ ಸರದಾರರು ಮಗುವನ್ನು ಪೇಶ್ವೆ ಗದ್ದುಗೆಯಲ್ಲಿಟ್ಟು ಅವನಿಗೆ '2ನೇ ಮಾಧವರಾವ್ ನಾರಾಯಣ್' ಎಂದು ಹೆಸರಿಟ್ಟರು. ನಾನಾಫಡ್ನವೀಸ್ ನೇತೃತ್ವದಲ್ಲಿ ಒಂದು ರಾಜಪ್ರತಿನಿಧಿ ಸಮಿತಿ ರಚನೆಯಾಯಿತು. ಇದನ್ನೇ 'ಪೂನಾ ದರ್ಬಾರ್' ಎಂದು ಕರೆಯಲಾಯಿತು.
- **1779 ವಡಗಾಂವ್ ಒಪ್ಪಂದ:** ಬ್ರಿಟೀಷರು ಪುರಂದರ ಒಪ್ಪಂದ ತಿರಸ್ಕರಿಸಿ 'ಸೂರತ್ ಒಪ್ಪಂದ' ಮಾನ್ಯ ಮಾಡಿದಕ್ಕೆ ನಾನಾ

INSTA KAS

ಫಡ್ನವೀಸ್‌ನು 1779 'ತಲೆಗಾಂವ್' ಕದನದಲ್ಲಿ ಬ್ರಿಟೀಷ್ ಸೇನೆಯನ್ನು ಸೋಲಿಸಿದ. 'ಬಾಂಬೆ ಸರ್ಕಾರ'ದೊಡನೆ 'ವಡಗಾಂವ ಒಪ್ಪಂದ' ಮಾಡಿಕೊಂಡ. ಮರಾಠರ ಎಲ್ಲಾ ಪ್ರದೇಶ ವಾಪಸ್ಸು ಪಡೆದರು.

### 2) 2ನೇ ಆಂಗ್ಲೋ-ಮರಾಠರ ಯುದ್ಧ (1800-1802)

- ನಾನಾ ಫಡ್ನವೀಸ್‌ನು 1800 ರಲ್ಲಿ ಮರಣ ಹೊಂದಿದನು. ಇಂದೋರಿನ ಹೋಳ್ಕರ್ & ಗ್ವಾಲಿಯಾರ್‌ನ ಸಿಂಧಿಯಾ ಪೇಶ್ವೆ 2ನೇ ಬಾಜಿರಾವ್‌ನ ಮೇಲೆ ಹಿಡಿತ ಸಾಧಿಸಲು ಪೈಪೋಟಿ ಆರಂಭಿಸಿದರು.
- 1802 ರಲ್ಲಿ ಹೋಳ್ಕರ್‌ನು ಪೇಶ್ವೆ ಹಾಗೂ ಸಿಂಧ್ಯರ ಸೈನ್ಯವನ್ನು ಪುಣೆಯ ಸಮೀಪ ಸೋಲಿಸಿದನು. ಹಾಗಾಗಿ 2ನೇ ಬಾಜಿರಾಯನು ಇಂಗ್ಲೀಷರೊಂದಿಗೆ ಬೆಸ್ಸಿನ್ ಒಪ್ಪಂದ (1802) ಮಾಡಿಕೊಂಡು ಸಹಾಯಕ ಸೈನ್ಯ ಪದ್ಧತಿ ಒಪ್ಪಿಕೊಂಡನು.
- ಸಿಂಧ್ಯ & ಹೋಳ್ಕರ್ ಇದರಿಂದ ಕೋಪಗೊಂಡು ಬ್ರಿಟಿಷರೊಡನೆ ಯುದ್ಧ ಹೂಡಿ ಸೋತು ಹೋದರು. (ಸರ್ ಅಜಟಿಗಾನ್ ಒಪ್ಪಂದ) (ದೇವಗಾಂವ ಒಪ್ಪಂದದಂತೆ 1863) ಸಿಂಧ್, ಬೊಂಸ್ಲೆ ಸಹಾಯಕ ಸೈನ್ಯ ಪದ್ಧತಿ ಒಪ್ಪಿಕೊಂಡನು.
- ಹೋಳ್ಕರನು ಇಂಗ್ಲೀಷರೊಡನೆ 'ರಾಜಪುರಘಾಟ' ಒಪ್ಪಂದ ಮಾಡಿಕೊಂಡ ಸಹಾಯಕ ಸೈನ್ಯ ಪದ್ಧತಿ ಒಪ್ಪಿಕೊಂಡನು.
- ಬರೋಡದ 'ಗಾಯಕವಾಡ' ಕೂಡ ಒಪ್ಪಿದರು.
- 'ಜಾರ್ಜ್ ಬಾರ್ಲೋ' ಭಾರತದ ಗೌರ್ನರ್ ಜನರಲ್‌ನಾಗಿದ್ದನು.

### 3) 3ನೇ ಆಂಗ್ಲೋ-ಮರಾಠ ಯುದ್ಧ (1817-1818)

- ಪೇಶ್ವೆ 2ನೇ ಬಾಜಿರಾಯ ಮರಾಠರ ಸಾಮ್ರಾಜ್ಯ ಪುನರ್ ಸ್ಥಾಪಿಸುವ ಉದ್ದೇಶದಿಂದ 'ಪಠಾಣ & ಪಿಂಡಾರಿಗಳ' ಬೆಂಬಲ ಪಡೆದುಕೊಂಡು ಟರ್ಕಿಯಲ್ಲಿರುವ ಇಂಗ್ಲೀಷರ ಸೇನಾ ಶಿಬಿರದ ಮೇಲೆ ದಾಳಿ ಮಾಡಿದನು. ಇದು ಯುದ್ಧಕ್ಕೆ ಕಾರಣವಾಯಿತು. ಇದರಲ್ಲಿ ಮರಾಠರು ಸೋತರು. ಛತ್ರಪತಿ ಸಾಹು ವಂಶಸ್ಥನಿಗೆ ಸತಾರ ಪ್ರದೇಶದ ಆಳ್ವಿಕೆ ನಡೆಸಲು ಅನುಮತಿ ಕೊಟ್ಟರು. 2ನೇ ಬಾಜಿರಾಯನಿಗೆ ವಿಶ್ರಾಂತಿ ವೇತನ 8,00,000 ರೂ. ನೀಡಿ 'ಬಿಥೂರಿಗೆ' ಕಳಿಸಿದರು. ಇದರೊಂದಿಗೆ ಮರಾಠ ಸಾಮ್ರಾಜ್ಯ ಅವನತಿಯಾಯಿತು. 1817 ರಲ್ಲಿ ಪೇಶ್ವೆಯೊಡನೆ 'ಎಲಿಸ್ಟೋನ್‌ನು ತ್ರಿಯಂಬಕ್‌ನು (ಗಾಯಕವಾಡನ ಮಂತ್ರಿ) ಪರಾರಿಯಾಗಲು ಪೇಶ್ವೆಯೇ ಕಾರಣವೆಂದು ಆಪಾದಿಸಿ 'ಪೂನಾ' ಒಪ್ಪಂದವನ್ನು ಮಾಡಿಕೊಳ್ಳುವಂತೆ ಬಲತ್ಕಾರಿಸಿದನು.
- ಪೂನಾ ಒಪ್ಪಂದವು ಮರಾಠರಿಗೆ ಗುಲಾಮಗಿರಿ ಸಂಕೇತವಾಗಿತ್ತು. ಅದೇ ರೀತಿ ಬೋಸ್ಲೆ ಜೊತೆ ನಾಗಪುರ ಒಪ್ಪಂದ (1817), ಸಿಂಧಿಯಾರೊಡನೆ ಗ್ವಾಲಿಯಾರ್ ಒಪ್ಪಂದ(1817) ಬ್ರಿಟೀಷರು ಮಾಡಿಕೊಂಡರು. ಹೀಗೆ ಬ್ರಿಟೀಷರು ಮರಾಠರನ್ನು ಖರೀದಿಸಿದರು. ಲಾರ್ಡ್ ಹೇಸ್ಟಿಂಗ್ಸ್‌ನು ಗೌರ್ನರ್ ಜನರಲ್‌ನಾಗಿದ್ದನು.
- Nov 1817 ರಲ್ಲಿ ಅಪ್ಪಾ ಸಾಹೇಬ್ & ಹೋಳ್ಕರು ಯುದ್ಧವನ್ನು ಬ್ರಿಟೀಷರ ಮೇಲೆ ಸಾರಿದರು. ಬ್ರಿಟೀಷರು ಕ್ರಮವಾಗಿ ಇವರನ್ನು ನಾಗಪುರದ ಸಿತಾಂಬಲ್ಡಿಯ & 'ಮಹೀದ್ ಪುರ' ಎಂಬಲ್ಲಿ ಇಬ್ಬರನ್ನು ಸೋಲಿಸಿದರು. ಅಲ್ಲದೇ 1818 ರಲ್ಲಿ ಪೇಶ್ವೆಯ ಬೆನ್ನು ಹತ್ತಿ ಅಶ್ಟಿ & ಕೋರೆಗಾಂವ್ ಕದನದಲ್ಲಿ ಸೋಲಿಸಿ ಅಸಿಘರ್ ಕೋಟೆ ಬ್ರಿಟೀಷರ ವಶವಾಗುವುದರೊಂದಿಗೆ ಈ ಯುದ್ಧ ಅಂತ್ಯವಾಗಿ, ಮರಾಠರು ತಮ್ಮ ಅಸ್ಥಿತ್ವವನ್ನು ಪೂರ್ಣವಾಗಿ ಕಳೆದುಕೊಂಡರು.

## ಆಂಗ್ಲೋ-ಸಿಖ್ಖ್-ಯುದ್ಧಗಳು

- ಪಂಜಾಬಿನ ಸಿಂಹ ಎಂದು ಖ್ಯಾತನಾಗಿದ್ದ 'ರಣಜಿತ್ ಸಿಂಗ್ ಸಿಖ್ಖರ ಪ್ರಸಿದ್ಧ ದೊರೆ.
- ಸಿಡುಬು ರೋಗದಿಂದ ತನ್ನ ಎಡಗಣ್ಣನ್ನು ಕಳೆದುಕೊಂಡನು. 12 ವರ್ಷದವನಾಗಿದ್ದಾಗ ಸಿಖ್ಖ್ ಒಕ್ಕೂಟದ 'ಸುಖರ್ ಚಾಕಿಯಾ' ಶಾಖೆಯ ಮುಖ್ಯಸ್ಥನಾದನು.
- ಕಾಬೂಲಿನ ಜಮಾನ್ ಷಾ ಭಾರತದ ಮೇಲೆ ದಾಳಿ ಮಾಡಿದಾಗ ಇವನು ಕೊಟ್ಟ ನೆರವಿನಿಂದ 1798 ರಲ್ಲಿ ಲಾಹೋರ್ ಪಡೆದು ಅದರ ರಾಜನಾದನು.
- 1802 ಅಮೃತ ಸರ, 1806 ರಲ್ಲಿ ಲೂಧಿಯಾ ಪಡೆದುಕೊಂಡು ಇಂಗ್ಲೀಷರೊಡನೆ ಘರ್ಷಣೆಗಿಳಿದನು.
- 1809 ರಲ್ಲಿ ಇಂಗ್ಲೀಷರೊಡನೆ 'ಅಮೃತಸರ ಒಪ್ಪಂದ' ಮಾಡಿಕೊಂಡು ಇಂಗ್ಲೀಷರೊಡನೆ ಸ್ನೇಹದಿಂದಿದ್ದನು.
- ಈತನ ಮರಣಾನಂತರ ಸಿಂಹಾಸನಕ್ಕಾಗಿ ಈತನ ಮಕ್ಕಳಲ್ಲಿ ಕಲಹ ಉಂಟಾಗಿ 'ದುಲೀಪ್ ಸಿಂಗ್' ಎಂಬಾತ ಅಧಿಕಾರಕ್ಕೆ ಬಂದನು. ಈತ ಅಪ್ರಾಪ್ತನಾಗಿದ್ದರಿಂದ ರಾಣಿ ಜಿಂದಾನಳು ರಾಜ ಪ್ರತಿನಿಧಿ & ಲಾಲ್‌ಸಿಂಗ್ ಎಂಬುವವನು ಪ್ರಧಾನಿಯಾದನು. ಇದನ್ನು ಲಾಹೋರ್ ದರ್ಬಾರ್ ಎಂದು ಕರೆಯಲಾಗುತ್ತಿತ್ತು.

### ಮೊದಲನೇ ಆಂಗ್ಲೋ-ಸಿಖ್ಖ್ ಯುದ್ಧ (1845-46)

- ಲಾಲಸಿಂಗಾನು 'ಖಾಲ್ಸಾ' ಸೈನ್ಯ ತನ್ನಡೆಗೆ ಒಲಿಸಿಕೊಂಡು 1845 ರಲ್ಲಿ (ಸರ್ ಹ್ಯೂಗೋ ನಾಯಕತ್ವದ) ಇಂಗ್ಲೀಷರೊಡನೆ ಯುದ್ಧ ಹೂಡಿದನು. 'ಮುಡ್ಕಿ ಫಿರೋಜ್ ಷಾ, ಅಲ್ವಲ್ ವಾರಾದ' ಕದನಗಳಲ್ಲೂ ಸಿಖ್ಖರು ಸೋತರು. ಅಂತಿಮವಾಗಿ 1846 ರ 'ಆಲಿವಾಲ್' ಕದನದಲ್ಲಿ ಸೋಲಿಸಿದರು.
- ಇಂಗ್ಲೀಷರೊಂದಿಗೆ 'ಲಾಹೋರ್ ಒಪ್ಪಂದ' ಆಯಿತು. ಒಪ್ಪಂದದಂತೆ ಮಹಾರಾಜ ಸಿಖ್ಖರ ಪ್ರದೇಶದ ಮೇಲಿನ ಹಕ್ಕು ಬಿಟ್ಟುಕೊಟ್ಟನು.
- ಕಾಶ್ಮೀರವನ್ನು ಗುಲಾಬ ಸಿಂಗ್‌ನಿಗೆ 75 ಲಕ್ಷ ರೂ. ಕೊಡಲ್ಪಟ್ಟಿತು(ಮಾರಲ್ಪಟ್ಟರು). ಅವನು ಇಂಗ್ಲೀಷರ ಅಧೀನನಾದನು.
- ಲಾರ್ಡ್ ಹಾರ್ಡಿಂಜ್ ಗೌರ್ನರ್ ಜನರಲ್‌ನಾಗಿದ್ದ. ದಂಡನಾಯಕರಾದ ಲಾಲ್‌ಸಿಂಗ್ & ತೇಜ್‌ಸಿಂಗ್‌ರು ಮಿಲಿಟರಿ ರಹಸ್ಯಗಳನ್ನು ಬ್ರಿಟೀಷರಿಗೆ ಮಾರಿ ಲಾಹೋರ್ ದರ್ಬಾರಿಗೆ ದ್ರೋಹ ಬಗೆದರು.

### 2ನೇ ಆಂಗ್ಲೋ-ಸಿಖ್ಖರ ಯುದ್ಧ (1848-49):-

INSTA KAS



Note : For reference purpose only, not for commercial purpose

- ಒಂದನೇ ಆಂಗ್ಲೋ-ಸಿಖ್ಖ್ ಕದನದಲ್ಲಿ ಇಂಗ್ಲೀಷರು ಪೂರ್ಣವಾಗಿ ಪಂಜಾಬನ್ನು ವಶಪಡಿಸಿಕೊಳ್ಳಲಾಗಲಿಲ್ಲ.
- ಸಿಖ್ಖ್ ರಾಜ್ಯದ ಉಸ್ತುವಾರಿ ದುಲೀಪಸಿಂಗ್‌ನಿಗೆ ವಹಿಸಿದನು. ಸೈನ್ಯ ತುಕುಡಿಯೊಂದನ್ನು ಇರಿಸಿದರು. ಇದರಿಂದ 'ಖಾಲ್ಸಾ' ಸೈನ್ಯದಲ್ಲಿದ್ದ ಸಿಖ್ಖ್‌ರಿಗೆ ಅಸಮಾಧಾನವಾಯಿತು. ಆಗ ಅನೇಕ ಕಡೆ ದಂಗೆಗಳಾದವು.
- ಮುಲ್ತಾನಿನ ಅಧಿಕಾರಿ ಮುಲ್‌ರಾಜನು ದಂಗೆ ಎದ್ದನು. ಅಫಘನ್ ದೊರೆ ದೋಸ್ತ್ ಅಲಿ ಕೂಡ ದಂಗೆ ಎದ್ದನು. ಸಿಖ್ಖ್‌ರು ಬೆಂಬಲಿಸಿದರು.
- 1849 ರಲ್ಲಿ ಜಲಿಯಾನವಾಲಾದಲ್ಲಿ ನಡೆದ ಯುದ್ಧದಲ್ಲಿ ಇಂಗ್ಲೀಷ್‌ರನ್ನು ಜನರಲ್ 'ನೆಪಿಯರ್' ಸಿಖ್ಖ್‌ರನ್ನು ಹೀನಾಯವಾಗಿ ಸೋಲಿಸಿದ. ಈ ಯುದ್ಧದೊಂದಿಗೆ ಸಿಖ್ಖ್‌ರ ಆಡಳಿತ ಅಂತ್ಯವಾಯಿತು.
- ಮಹಾರಾಜ 'ದುಲೀಪ ಸಿಂಗ್‌ನಿಗೆ' ವಿಶ್ರಾಂತಿ ವೇತನ ನೀಡಲಾಯಿತು. ಇದರ ನೆನಪಿಗಾಗಿ ಈತ ಕೊಹಿನೂರು ವಜ್ರ' ಇಂಗ್ಲೀಷರಿಗೆ ನೀಡಿದ. ಅದು ಈಗಲೂ ಬ್ರಿಟೀಷ್ ರಾಣಿಯ ಕಿರೀಟದಲ್ಲಿದೆ. ಡಾಲ್‌ಹೌಸಿಯು ಪಂಜಾಬನ್ನು ಬ್ರಿಟೀಷರ ಅಧೀನಕ್ಕೆ ತೆಗೆದುಕೊಳ್ಳುತ್ತಿದ್ದರಿಂದ ಇಡೀ ಭಾರತ ಬ್ರಿಟೀಷರ ವಶವಾಯಿತು.
- ಭೈರೋವಾಲ್ ಒಪ್ಪಂದ(1849): ಲಾಹೋರ್ ಒಪ್ಪಂದದಂತೆ ಲಾಲ್‌ಸಿಂಗ್‌ನು ಕಾಶ್ಮೀರವನ್ನು ಗುಲಾಬ್‌ಸಿಂಗ್‌ನಿಗೆ ಬಿಟ್ಟುಕೊಡಲು ಒಪ್ಪಲಿಲ್ಲ. ಅಲ್ಲಿನ ಮುಸ್ಲೀಂ ಗೌರ್‍ನರನು ಗುಲಾಬ್‌ನ ವಿರುದ್ಧ ದಂಗೆ ಏಳುವಂತೆ ಪ್ರಚೋದಿಸಿದ. ಹೀಗಾಗಿ ಈತನನ್ನು ಕಿತ್ತು ಬನಾರಸ್‌ಗೆ ಜಿಂದಾನ್‌ಳನ್ನು ಚುನಾರ್'ಗೆ ಕಳಿಸಿದರು. ನಂತರ ಜಮ್ಮು & ಕಾಶ್ಮೀರ ಗುಲಾಬ್ ಸಿಂಗ್‌ನಿಗೆ ನೀಡಿ 'ಭೈರೋವಾಲ್' ಒಪ್ಪಂದ ಮಾಡಿಕೊಂಡರು. ಈ ಒಪ್ಪಂದದಂತೆ ದುಲೀಪ್ ಸಿಂಗ್‌ನು ರಾಜಪ್ರತಿನಿಧಿ ಸಮಿತಿ ಬ್ರಿಟೀಷ್ ರೆಸಿಡೆಂಟ್‌ನ ಸಲಹೆಯಂತೆ ನಡೆದುಕೊಳ್ಳುವುದು. 'ಹೆನ್ರಿ ಲಾರೆನ್ಸ್' ಬ್ರಿಟೀಷ್ ರೆಸಿಡೆಂಟ್‌ನಾಗಿದ್ದನು. ಗೌರ್‍ನರ್ ಜನರಲ್ ಪಂಜಾಬಿನ ಕೋಟೆ ವಶಪಡಿಸಿಕೊಂಡು ಸೈನ್ಯ ಇಟ್ಟುಕೊಳ್ಳುವ ಹಕ್ಕು ನೀಡಲಾಯಿತು.
- ಚೆಲಿಯಾಜವಾಲ್ ಯುದ್ಧದ ಸೋಲಿನಿಂದ ಲಾರ್ಡ್ ಡಾಲ್‌ಹೌಸಿಯು ಚಾರ್ಲ್ಸ್ ನೆಪಿಯರ್‌ನನ್ನು ಲಾರ್ಡ್‌ಗೂಫ್‌'ನ ಸ್ಥಾನಕ್ಕೆ ಕಳಿಸಿದನು. ಆದರೆ 'ಗೂಫ್'ನು ನೆಪಿಯರ್ ತಲುಪುವ ಮೊದಲೇ 1849 'ಗುಜ್ರಾತ್' ಕದನದಲ್ಲಿ ಸಿಖ್ಖ್‌ರನ್ನು ಸೋಲಿಸಿದನು. ಇದನ್ನು 'ಫಿರಂಗಿಗಳ ಕದನ' ಎಂದು ಕರೆಯಲಾಗುತ್ತದೆ. 'ಮೂಲ್ ರಾಜ್'ನನ್ನು ಅಂಡಮಾನ್‌ಗೆ ಗಡಿಪಾರು ಮಾಡಲಾಯಿತು.
- ಡಾಲ್ ಹೌಸಿ 1849 ರಲ್ಲಿ ಪಂಜಾಬ್‌ನ್ನು ಬ್ರಿಟೀಷ್ ಸಾಮ್ರಾಜ್ಯಕ್ಕೆ ಸೇರಿಸಿಕೊಂಡು ಅಲ್ಲಿ ಪ್ರಥಮ ಬ್ರಿಟೀಷ್ ಚೀಫ್ ಕಮಿಷನರ್ ನಾಗಿ ಸೂಜಾನ್ ಲಾರೆನ್ಸ್‌ರನ್ನು ನೇಮಿಸಲಾಯಿತು.
- ದುಲೀಪ್‌ಸಿಂಗ್ & ಆತನ ತಾಯಿ ಜಿಂದಾನಳನ್ನು ಲಂಡನ್‌ಗೆ ಕಳಿಸಲಾಯಿತು.

### 1857 ರ ದಂಗೆ

- ಲಾರ್ಡ್ ಕ್ಯಾನಿಂಗ್ ಈ ದಂಗೆಯ ಸಮಯದಲ್ಲಿ ಗವರ್ನರ್ ಜನರಲ್‌ನಾದನು.

### ರಾಜಕೀಯ ಕಾರಣಗಳು:-

- ಲಾರ್ಡ್ ಡಾಲ್‌ಹೌಸಿಯ ದತ್ತು ಪುತ್ರರಿಗೆ ಹಕ್ಕಿಲ್ಲ & ವೆಲ್ಲೆಸ್ಲಿಯ ಸಹಾಯಕ ಸೈನ್ಯ ಪದ್ಧತಿ.

### ಆರ್ಥಿಕ ಕಾರಣಗಳು:-

- ಇನಾಂ ಕಮಿಷನ್ ಎಂಬ ಸಮಿತಿ ಲಕ್ಷಾಂತರ ಇನಾಂ ಭೂಮಿಯನ್ನು ಕಸಿದುಕೊಂಡಿತು.

### ಸೈನಿಕ ಕಾರಣಗಳು:-

- ಲಾರ್ಡ್ ಕ್ಯಾನಿಂಗ್‌ನ ಆಳ್ವಿಕೆಯಲ್ಲಿದ್ದಾಗ ಜಾರಿಗೆ ತಂದ ಸಾಮನ್ಯ ಸೇನಾ ಕಾಯ್ದೆ- 1856,
- ಈ ಪದ್ಧತಿಯಂತೆ ಭಾರತದ ಸೈನಿಕರು ಬ್ರಿಟೀಷರಿಗಾಗಿ ಸಾಗರದಾಚೆ ಯುದ್ಧ ಮಾಡಬೇಕೆಂಬುದು.

### ತತ್‌ಕ್ಷಣದ ಕಾರಣಗಳು:-

- ಎನ್ ಫಿಲ್ಡ್ ಬಂದೂಕುಗಳಿಗೆ ಬಳಸುವ ತೋಟಾಗಳ ಹೊರಹೊದಿಕೆಗೆ 'ಹಸು & ಹಂದಿ'ಗಳ ಕೊಬ್ಬು ಲೇಪಿಸಿದರು.
- ಮಂಗಲಪಾಂಡೆ ಎಂಬುವವನು ಪ್ರಥಮವಾಗಿ ಇದನ್ನು ನಿರಾಕರಿಸಿದನು. ಈತ ಬಂಗಾಳದಲ್ಲಿರುವ ಭರಕ್‌ಪುರ ಎಂಬ ಸ್ಥಳದಲ್ಲಿಯ ಭೂಸೇನಾ ಪಡೆಯ 34ನೇ ವಿಭಾಗಕ್ಕೆ ಸೇರಿದವನಾಗಿದ್ದನು. ಅಲ್ಲದೇ ಅಲ್ಲಿಯ ಅಧಿಕಾರಿಗಳನ್ನು ಸುಟ್ಟು ಕೊಂದನು. ತಕ್ಷಣ ಬಂಧಿಸಿ 1857 ಏಪ್ರಿಲ್ 08 ರಂದು ನೇಣಿಗೆ ಹಾಕಲಾಯಿತು. ಈತ 'ಮೇಜರ್' ಹಡ್ಸನ್‌ನನ್ನು ಕೊಂದನು.
- ಕ್ರಾಂತಿಯ ಪ್ರಮುಖ ಘಟನೆಗಳು 1857 ಮೇ 10 ರಂದು ಮೀರತ್ ಎಂಬ ಸ್ಥಳದಲ್ಲಿ ಪ್ರಾರಂಭವಾಯಿತು. ಪದಚ್ಯುತ ಮೊಘಲರ ದೊರೆ '2ನೇ ಬಹದ್ದೂರ್ ಷಾ'ನನ್ನು ತಮ್ಮ ಚಕ್ರವರ್ತಿ ಎಂದು ಘೋಷಿಸಿದರು. ಈ ದಂಗೆ ಕಾನ್ಪೂರ್, ಲಕ್ನೋ, ನಾಸಿರ್ ಬಾದ್, ಬನಾರಸ್, ಝಾನ್ಸಿಗಳಿಗೂ ಹರಡಿತು.
- ದೆಹಲಿ- ಇಂಗ್ಲೀಷರ ಕೈ ತಪ್ಪಿದಾಗ ಸಿಖ್ಖ್ ಸೈನಿಕರ ಬೆಂಬಲದಿಂದ 'ಜಾನ್ ನಿಕೊಲ್ಸನ್' ಪುನ: ವಶಪಡಿಸಿಕೊಂಡು, 2ನೇ ಬಹದ್ದೂರ್ ಷಾನನ್ನು ಸೆರೆ ಹಿಡಿದು ಅಪರಾಧಿ ಎಂದು ಘೋಷಿಸಿ, ಜೀವಾವಧಿ ಶಿಕ್ಷೆ ನೀಡಿ ರಂಗೂನಿಗೆ ಕಳಿಸಲಾಯಿತು. ಅಲ್ಲಿ 1862ರಲ್ಲಿ ಮರಣ ಹೊಂದಿದನು. ಇವನ ಮರಣದೊಂದಿಗೆ ಬಹುದೊಡ್ಡ ಮೊಗಲ್ ಸಾಮ್ರಾಜ್ಯವು ಕೊನೆಗೊಂಡಂತಾಯಿತು.
- ಕಾನ್ಪುರ:- ಪೇಶ್ವೆ 2ನೇ ಬಾಜಿರಾಯನ ಮಗ 'ನಾನಾಸಾಹೇಬನು' ತಾನೇ ಪೇಶ್ವೆ ಎಂದು ಘೋಷಿಸಿ ಕಾನ್ಪೂರ ದಂಗೆಯ ನಾಯಕತ್ವ ವಹಿಸಿಕೊಂಡನು. ಇಂಗ್ಲೀಷ್ ಪುರುಷ, ಹೆಂಗಸರು, & ಮಕ್ಕಳನ್ನು ಕೊಲೆಗೈದರು. ಇದೇ 'ಕಾನ್ಪುರ ಕಗ್ಗೊಲೆ'.
- ಇವನ ಸೇನಾನಾಯಕ ತ್ಯಾತ್ಯಾ ಟೋಪಿಯ ಸಹಾಯದಿಂದ ಕಾನ್ಪುರ ಕೋಟೆ ವಶಪಡಿಸಿಕೊಂಡನು.
- ಕರ್ನಲ್ ಹ್ಯಾವವಾಕ್ & ಕರ್ನಲ್ ಒನೆಯಿಲ್ ಕಾನ್ಪುರವನ್ನು ವಶಪಡಿಸಿಕೊಂಡರು (1857 ಜುಲೈ 17) ನಾನಾ ಸಾಹೇಬನು ನೇಪಾಳಕ್ಕೆ ಓಡಿಹೋಗಿ ಅಲ್ಲಿಯೇ ಮರಣ ಹೊಂದಿದ. ನಾನಾಸಾಹೇಬನನ್ನು 'ಭಾರತದ ಗ್ಯಾರಿಬಾಲ್ಡಿ' ಎಂದು ಕರೆಯಲಾಗುತ್ತದೆ.
- ಸೇನಾಧಿಪತಿಯಾದ ತ್ಯಾತ್ಯಾಟೋಪಿಯು ಕಾನ್ಪುರವನ್ನು ಪುನ: ವಶಪಡಿಸಿಕೊಂಡನು. ಇಂಗ್ಲೀಷರು ಝಾನ್ಸಿಗೆ ಮುತ್ತಿಗೆ ಹಾಕಿದಾಗ ಸಹಾಯಕ್ಕಾಗಿ ಈತ ಅಲ್ಲಿಗೆ ಹೋದ. ಅಲ್ಲಿಯೂ ಸೋಲಾದಾಗ ಕಾಡಿನಲ್ಲಿ ಅಡಗಿಸಿಕೊಂಡನು. ಸರ್ ಕ್ಯಾಂಪ್ ಬೆಲ್‌ನು ರಕ್ತಹರಿಸಿ ಕಾನ್ಪುರ್ ವಶಪಡಿಸಿಕೊಂಡನು.
- ಆದರೆ ಮಾನ್‌ಸಿಂಗ್ ಎಂಬ ದೇಶದ್ರೋಹಿ ಇವನನ್ನು ಬ್ರಿಟೀಷರಿಗೆ ಹಿಡಿದುಕೊಟ್ಟನು.

### ಲಕ್ನೋ ದಂಗೆ:-

- ಅಯೋಧ್ಯೆಯ ನವಾಬ ವಾಜಿದ್ ಅಲಿಯ ಹೆಂಡತಿ 'ಬೇಗಂ ಹಜರತ್ ಮಹಲ್' ಈ ದಂಗೆಯ ಮುಂದಾಳತ್ವ ವಹಿಸಿದ್ದಳು.



Note : For reference purpose only, not for commercial purpose

INSTA KAS

- ತನ್ನ ಮಗನಾದ 'ಫಿರ್ಜಿಷ್ ಖಾದರ್‌ನನ್ನು' ಬಂಗಾಳದ ನವಾಬನೆಂದು ಘೋಷಿಸಿದಳು. ನಂತರ ಜನರಲ್ ಜಾಟ್ರಂ & ಹಾವಲಕ್, ಅವಧ್ ರಾಜಧಾನಿ ಲಕ್ನೋವನ್ನು ವಶಪಡಿಸಿಕೊಂಡರು. ಬೇಗಂ ತಪ್ಪಿಸಿಕೊಂಡು ನೇಪಾಳದಲ್ಲಿ ಆಶ್ರಯ ಪಡೆದಳು.
- ಲಕ್ನೋ ಕ್ರಾಂತಿಕಾರಿಗಳು ಸರ್ ಲಾರೆನ್ಸ್ & ಕೊಲೆನ್‌ನಿಲ್ ಎಂಬುವರನ್ನು ಕೊಲೆಗೈಯಲಾಯಿತು.
- ಕ್ಯಾಂಪಬೆಲ್‌ನು ಲಕ್ನೋ ವಶಪಡಿಸಿಕೊಂಡ.

**ಮಧ್ಯಭಾರತ (ಮಧ್ಯಪ್ರದೇಶ) ದಂಗೆ:–**

- ಝಾನ್ಸಿ ರಾಣಿ ಲಕ್ಷ್ಮೀಬಾಯಿ & ತಾತ್ಯಾಟೋಪಿ ಈ ಕ್ರಾಂತಿಯನ್ನು ನಡೆಸಿದರು. ಇವಳು ಗ್ವಾಲಿಯರ್‌ನ್ನು ವಶಪಡಿಸಿಕೊಂಡಳು.
- ಸರ್ 'ಹುಗರೋಸ್' ನೇತೃತ್ವದಲ್ಲಿ ಬ್ರಿಟೀಷರು ಇವರನ್ನು ಸೋಲಿಸಿದರು. ರಾಣಿಯು 'ಕಲ್ಪಿ' ಎಂಬ ಸ್ಥಳಕ್ಕೆ ಓಡಿಹೋದಳು. ತಾತ್ಯಾಟೋಪಿ ಸಹಾಯ ಮಾಡಿದನು. ಇಬ್ಬರೂ ಸೇರಿ ಗ್ವಾಲಿಯರ್ ಕೋಟೆ ವಶಪಡಿಸಿಕೊಂಡರು.
- ನಂತರದ ಯುದ್ಧದಲ್ಲಿ ಝಾನ್ಸಿಯು ಹೋರಾಡುತ್ತಲೇ ವೀರ ಮರಣವನ್ನಪ್ಪಿದಳು. ತಾತ್ಯಾಟೋಪಿಯು ತಪ್ಪಿಸಿಕೊಂಡನು. ಆದರೆ ಈತನನ್ನು ಸೆರೆ ಹಿಡಿದು ಶಿಕ್ಷಿಸುವುದರೊಂದಿಗೆ ಈ 1857 ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಕೊನೆಗೊಂಡಿತು.

**ಫಲಿತಾಂಶಗಳು**

- ಭಾರತದಲ್ಲಿ ಕಂಪೆನಿ ಆಳ್ವಿಕೆ ಕೊನೆಗೊಂಡು ಸರ್ಕಾರವೇ ಆಡಳಿತವನ್ನು ವಹಿಸಿಕೊಂಡಿತು.
- ವಿಕ್ಟೋರಿಯಾ ಮಹಾರಾಣಿಯ ಪ್ರಕಟಣೆ:– ಇದನ್ನು 1858 ನವೆಂಬರ್ 01 ರಂದು ಭಾರತದ ಕೊನೆಯ ಗೌರ್‍ನರ್ ಜನರಲ್ & ಪ್ರಥಮ ವೈಸರಾಯ್ ಆದ ಲಾರ್ಡ್ ಕ್ಯಾನಿಂಗ್‌ನು ಅಲಹಾಬಾದ್ ಸಮ್ಮೇಳನದಲ್ಲಿ ಪ್ರಕಟಣೆಯನ್ನು ಘೋಷಿಸಿದನು.
- ಗೌರ್‍ನರ್ ಜನರಲ್‌ನು ವೈಸರಾಯ್ ಆಗಿ ಬದಲಾದನು. ವೈಸರಾಯ್ ಎಂದರೆ ಸರಕಾರದ ಪ್ರತಿನಿಧಿ ಎಂದರ್ಥ.
- ಕೊಲೆಯ ಅಪಾದನೆಯನ್ನು ಬಿಟ್ಟು ಉಳಿದೆಲ್ಲಾ ಅಪರಾಧಿಗಳಿಗೂ ಸಾರ್ವತ್ರಿಕ ಕ್ಷಮಾದಾನ ನೀಡಲಾಯಿತು.
- 'ದತ್ತು ಮಕ್ಕಳಿಗೆ ಹಕ್ಕಿಲ್ಲ' ನೀತಿ ಕೈ ಬಿಡಲಾಯಿತು.
- ಕಾಶಿ ಬಂಡಾಯ: ಕರ್ನಲ್ ಓನಿಲ್‌ನು ಈ ದಂಗೆ ಅಡಗಿಸಿದನು.

**ಬರೈಲಿ ದಂಗೆ:–**

- ರೋಹಿಲ ಖಂಡದ ರಾಜಧಾನಿ. ತಮ್ಮ ನಾಯಕನನ್ನು ಗೌರ್‍ನರ್ ಎಂದು ಘೋಷಿಸಿಕೊಂಡರು. ಖಾನ್ ಬಹದ್ದೂರ್ ಖಾನ್‌ನು ದಂಗೆ ಎದ್ದನು.

**ಬಿಹಾರ ದಂಗೆ:–**

- ಬಿಹಾರದಲ್ಲಿರುವ ಜಗದೀಶಪುರದ ಜಮೀನ್ದಾರ 80 ವರ್ಷದ 'ಕನ್ವರ್ ಸಿಂಗ್' ಕ್ರಾಂತಿಯ ನಾಯಕತ್ವ ವಹಿಸಿಕೊಂಡನು. ಹೋರಾಡಿ ಮರಣ ಹೊಂದಿದನು. ನಂತರ ಇವನ ಸಹೋದರ ಅಮರ್‌ಸಿಂಗ್ ನಾಯಕತ್ವ ವಹಿಸಿಕೊಂಡನು. ಆದರೆ ಕ್ರಾಂತಿಯು ತಕ್ಷಣ ಕೊನೆಗೊಂಡಿತು.

**ನಾನಾಸಾಹೇಬ ಯೋಜನೆ ವಿಫಲ:**

- ಕ್ರಾಂತಿಯ ದಿನವನ್ನು 1857 ಮೇ 31ಕ್ಕೆ ನಿಗದಿ ಮಾಡಿದರು. ಆದರೆ ಅದಕ್ಕಿಂತ ಮುಂಚೆಯೇ ಕ್ರಾಂತಿ ಸಂಭವಿಸಿದ್ದು, ವಿಫಲತೆಗೆ ಪ್ರಮುಖ ಕಾರಣ.

- 19 & 34ನೇ ದೇಶೀಯ ತುಕಡಿಗಳನ್ನು ರದ್ದುಪಡಿಸಿದ್ದು, ಮಿರತ್ ದಂಗೆಗೆ ಕಾರಣವಾಯಿತು.
    1) (ಮಾರ್ಚ್ 29, 1857) ಭರತ್ ಪುರ:– ಮಂಗಲ್ ಪಾಂಡೆ
    2) (ಮೇ 09, 1857) ಮೀರತ್ & ದೆಹಲಿ:– 2ನೇ ಬಹದ್ದೂರ್ ಷಾ
    3) (ಜೂನ್ 05) ಮಧ್ಯಭಾರತ:– ಝಾನ್ಸಿ ರಾಣಿ ಲಕ್ಷ್ಮೀಬಾಯಿ
    4) (ಜುಲೈ 04) ಲಕ್ನೋ – ಬೇಗಂ ಹಜರತ್ ಮಹಲ್
    5) (ಜೂನ್ 05) ಕಾನ್ಪುರ – ನಾನಾ ಸಾಹೇಬ & ತಾಂತ್ಯಾಟೋಪಿ
    6) ಬಿಹಾರ – ಕನ್ವರ ಸಿಂಗ್
    7) ಫೈಜಾಬಾದ್ – ಅಹ್ಮದುಲ್ಲಾ

**ಸಣ್ಣ ಪುಟ್ಟ ದಂಗೆಗಳು (ನಾಗರೀಕ & ರೈತರ)**

- ಬಂಗಾಳದಲ್ಲಿ ಜಮೀನ್ದಾರರನ್ನೊಳಗೊಂಡ ಗುಂಪು ಸನ್ಯಾಸಿ ದಂಗೆ ಎಂಬ ಹೆಸರಲ್ಲಿ 1763 – 1800 ರವರೆಗೆ ದಂಗೆ ನಡೆಸಿದರು. ಈ ದಂಗೆಯಲ್ಲಿ ಬಕಿಂಚಂದ್ರ ಚಟರ್ಜಿಯವರ ಹಾಡು ಪ್ರಸಿದ್ಧಿಯಾಯಿತು(ಆನಂದ ಮಠ).
- ಚೌಹಾರ ದಂಗೆ / ಬಂಗಾಳದ ಐದು ಜಿಲ್ಲೆ & ಬಿಹಾರ) 1766–72 ಮತ್ತು 1795–1816. ಈಶಾನ್ಯ ರಾಜ್ಯಗಳಲ್ಲಿ ರಂಗಪುರ, ದಿನಜಪುರ ದಂಗೆ 1783, ಬಿಶ್ನಪುರ್ & ಭಿರಬಂದಂಗೆ 1799, ಓರಿಸ್ಸಾ ಜಮೀನ್ದಾರರು (1804–17) & ಸಂಬಾಲಪುರ 1827–40.
- ದಕ್ಷಿಣ ಭಾಗದಲ್ಲಿ ವಿಜಯನಗರ ರಾಜ್ಯದ ದಂಗೆ 1794, ಪೊರಿಗಾರ್ಸ್ ತಮಿಳುನಾಡು 1790, ಮಲಬಾರ್ & ಆಂಧ್ರಪ್ರದೇಶ ಕರಾವಳಿ ದಂಗೆ, ಪಕಿಖೆಮಡಿ 1813–14, ದೇವನವೇಳುತಂಪಿ, ತಿರುವಾಂಕುರಲ್ಲಿ 1805, ಮೈಸೂರು ರೈತರ ದಂಗೆ–1830–31, ವಿಶಾಖಪಟ್ಟಣಂ 1830–34, ಗಂಜಂ–1835, ಕರ್ನೂಲ್ 1846–47.
- ಪಶ್ಚಿಮ ಭಾರತದಲ್ಲಿ ಸೌರಾಷ್ಟ್ರ ದಂಗೆ 1816–32, ಕೊಳ್ಳಿಸ–ಗುಜರಾತ್ 1824–28 & 1839–49, ಕಿತ್ತೂರು ಚೆನ್ನಮ್ಮ ದಂಗೆ 1824, ಸತಾರ ದಂಗೆ 1841, ಗಡ್ಕರಿ ದಂಗೆ 1844.
- ಉತ್ತರ ಭಾರತದಲ್ಲಿ U.P & ಹರಿಯಾಣ ಸೈನಿಕ ದಂಗೆ 1524, ಬಿಲಾಸ್ ಪುರ 1805, ಅಲಿಘಡದ ತಾಲ್ಲೂಕುದಾರರ ದಂಗೆ 1814–17, ಜಬ್ಬಲ್ ಪುರದ ಬುಂದೇಲರು 1842, & ಖಂಡೇಶ 1852, 2ನೇ ಪಂಜಾಬ್ ಯುದ್ಧ 1848–49.

**ಸಂತಾಲರ ಬುಡಕಟ್ಟು ದಂಗೆ:–** ಭಗತ್‌ಪುರ್ & ರಾಜಮಹಲ್ ಪ್ರದೇಶಗಳ ನಡುವೆ ವಾಸಿಸುವ ಬುಡಕಟ್ಟು ಜನ.

- (ದಾಮನ್–ಇ–ಕೊ' ಎಂದು ಪರಿಚಿತ) ಮಜಿಸ್ & ಪರಗಣಿತರು, ಮುಖ್ಯಸ್ಥರಾಗಿದ್ದರು. ಹೊರಗಿನವರನ್ನು(ವಿದೇಶಿಯರನ್ನು) ಹೊರಹಾಕಲು ಸುಮಾರು 400 ಗ್ರಾಮಗಳಿಂದ 6000 ಸಂತಾಲರು ಒಂದಾದರು. ಭಗನಿದಿಹಿ ಎಂಬಲ್ಲಿ 1855 ಜೂನ್ 30 ರಂದು ದಂಗೆ ಘೋಷಿಸಿದರು. 'The reign of truth' and 'True Justice' 'Satyagrah' ಇವರ ಘೋಷಣೆಗಳಾಗಿದ್ದವು.
- ಛೋಟಾನಾಗ್ಪುರ ಕೋಳರ ಬುಡಕಟ್ಟು ದಂಗೆ 1820–57.
- ರಂಪಾ(ಕರಾವಳಿ ಆಂಧ್ರ) ಬುಡಕಟ್ಟು ದಂಗೆ 1879 ಮಾರ್ಚ್
- ಮುಂಡಾ ಬುಡಕಟ್ಟು ದಂಗೆ (ಬಿರ್ಸಾ ಮುಂಡಾ ಎಂಬುವನಿಂದ 1899–1900).

**ಕರ್ನಾಟಕದಲ್ಲಿ ದಂಗೆ ಕೇಂದ್ರಗಳು**

INSTA KAS



Note : For reference purpose only, not for commercial purpose

- ಹಲಗಲಿ: ಬಿಜಾಪುರದ ಹಲಗಲಿ ಬೇಡರು ಬ್ರಿಟೀಷರ ಶಸ್ತ್ರಾಸ್ತ್ರ ಕಾಯ್ದೆ ವಿರೋಧಿಸಿ ದಂಗೆ ಎದ್ದು ಹುತಾತ್ಮರಾದರು.
- ಸುರಪುರ: ಬೇಡರ ನಾಯಕ ವೆಂಕಟಪ್ಪ ನಾಯಕನು ದಂಗೆ ಎದ್ದ.
- ನರಗುಂದ: ಧಾರವಾಡದ ನರಗುಂದದಲ್ಲಿ ದಾದಾಸಾಹೇಬ ದತ್ತು ಪುತ್ರರಿಗೆ ಹಕ್ಕಿಲ್ಲ ಎಂಬ ನೀತಿ ವಿರೋಧಿಸಿ ದಂಗೆ ಎದ್ದನು.
- ಮುಂಡರಗಿ: ಧಾರವಾಡ ಮುಂಡರಗಿಯಲ್ಲಿ ತಹಸೀಲ್ದಾರ್ ಭೀಮರಾವ್ ಬ್ರಿಟೀಷರ ಭ್ರಷ್ಟ ನೀತಿಯನ್ನು ಖಂಡಿಸಿ ದಂಗೆ ಎದ್ದು, ಹುತಾತ್ಮನಾದನು.

1857 ರ ದಂಗೆ ನಡೆದ ಕೇಂದ್ರಗಳು ಕಾಲಾನುಕ್ರಮವಾಗಿ,

1) ಭರಕ್‌ಪುರ (ಮಾರ್ಚ್ 29, 1857) – ಮಂಗಲ್ ಪಾಂಡೆ
2) ಮೀರತ್ (ಮೇ 09, 1857) – 2ನೇ ಬಹದ್ದೂರ್ ಷಾ
3) ದೆಹಲಿ (ಮೇ 11, 1857) – 2ನೇ ಬಹದ್ದೂರ್ ಷಾ
4) ಕಾನ್ಪುರ್ (ಜೂನ್ 05, 1857) – ನಾನಾಸಾಹೇಬ & ತಾಂತ್ಯಾ ಟೋಪಿ,
5) ಮಧ್ಯಭಾರತ(M.P) (ಜೂನ್, 05, 1857) – ಝಾನ್ಸಿ ರಾಣಿ ಲಕ್ಷ್ಮೀಬಾಯಿ
6) ಲಕ್ನೋ (ಜುಲೈ 04, 1857) – ಬೇಗಂ ಹಜರತ್ ಮಹಲ್
7) ಬಿಹಾರ್ – ಕನ್ವರ್ ಸಿಂಗ್
8) ಫೈಜಾಬಾದ್ – ಅಹ್ಮದುಲ್ಲಾ

## 19ನೇ ಶತಮಾನದ ಸಾಮಜೋ – ಧಾರ್ಮಿಕ ಸುಧಾರಣಾ ಚಳುವಳಿಗಳು

ಭಾರತದಲ್ಲಿ 19ನೇ ಶತಮಾನವನ್ನು 'ಪುನರುಜ್ಜೀವನದ ಕಾಲ'ವೆಂದು ಕರೆಯಲಾಗುತ್ತದೆ.

### ಬ್ರಹ್ಮ ಸಮಾಜ

- ರಾಜರಾಮಮೋಹನರಾಯರು ಈ ಸಮಾಜದ ಸ್ಥಾಪಕರು.
- 1828 ರಲ್ಲಿ ಕಲ್ಕತ್ತಾದಲ್ಲಿ ಸ್ಥಾಪಿಸಿದರು.
- ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು.
- ಇವರು ಅರೇಬಿಕ್, ಸಂಸ್ಕೃತ, ಹಿಬ್ರೂ, ಇಂಗ್ಲೀಷ್, ಪರ್ಷಿಯನ್, ಫ್ರೆಂಚ್, ಲ್ಯಾಟಿನ್ ಭಾಷೆಗಳಲ್ಲಿ ಪಾಂಡಿತ್ಯ ಪಡೆದಿದ್ದರು.
- ಬೆಂಗಾಳಿ, ಹಿಂದೀ, ಸಂಸ್ಕೃತ, ಪರ್ಷಿಯಾ, ಇಂಗ್ಲೀಷ್‌ನಲ್ಲಿ ಅನೇಕ ಕೃತಿಗಳನ್ನು ಬರೆದಿದ್ದಾರೆ.
  a) Prospectus of Jesus Christ (ಏಸುಕ್ರಿಸ್ತನ ನೀತಿ ಬೋಧನೆಗಳು)
  b) Guide to peace and happiness (ಶಾಂತಿಗೂ ಸಂತೋಷಕ್ಕೂ ಮಾರ್ಗ) ಎಂಬ ಪುಸ್ತಕಗಳು ಪ್ರಮುಖವು.
- ಬ್ರಿಟೀಷ್ ಕಂಪೆನಿಯಲ್ಲಿ 1805–1814 ರವರೆಗೆ ಸೇವೆ ಸಲ್ಲಿಸಿದ್ದರು.
- (1830) 2ನೇ ಅಕ್ಬರ್‌ನಿಗೆ ನಿವೃತ್ತಿ ವೇತನ ಹೆಚ್ಚಿಸಲು ಇಂಗ್ಲೆಂಡಿಗೆ ತೆರಳಿದ್ದರು. ಅಲ್ಲಿನ ಡೈರಕ್ಟರ್ ಮುಂದೆ ವಾದ ಮಂಡಿಸಿ ಗೆದ್ದರು.
- 1833 ರಲ್ಲಿ 'ಬ್ರಿಸ್ಟಲ್' ಎಂಬಲ್ಲಿ ನಿಧನ ಹೊಂದಿದರು.
- ಇವರಿಗೆ ಮೊಗಲ ಅರಸ 'ರಾಜಾ' ಎಂಬ ಬಿರುದು ನೀಡಿದನು.
- ಆಧುನಿಕ ಭಾರತದ ಧ್ರುವತಾರೆ (Herald of New age in India) ಕೇಶವ ಚಂದ್ರ ಸೇನರು ಭಾರತೀಯ ಬ್ರಹ್ಮ ಸಮಾಜದ ನಾಯಕರಾದರು. ಸುಲಭ ಸಮಾಚಾರ್ & ಭಾರತೀಯ ಸುಧಾರಣಾ ಸಂಘ ಸ್ಥಾಪಿಸಿದರು. ಒಡಕಿನಿಂದಾಗಿ ಇವರ ಶಿಷ್ಯರಾದ ಶಿವನಾಥ ಶಾಸ್ತ್ರಿ & ಮೋಹನ್ ಬೋಸ್ಲೆರವರು 'ಸುಧಾರಣಾ ಬ್ರಹ್ಮ ಸಮಾಜವನ್ನು 1878 ರಲ್ಲಿ ಸ್ಥಾಪಿಸಿದರು.

**ಸಾಧನೆಗಳು:–** 1815 ರಲ್ಲಿ **'ಆತ್ಮೀಯ ಸಭಾ'** ಸ್ಥಾಪಿಸಿದರು. ಇದುವೇ ನಂತರ 1828 ರಲ್ಲಿ **'ಬ್ರಹ್ಮ ಸಮಾಜ'** ವಾಯಿತು.
ದೇವರು ಒಬ್ಬನೇ & ಸಾರ್ವತ್ರಿಕ ಧರ್ಮದಲ್ಲಿ ನಂಬಿಕೆ ಹೊಂದಿದ್ದರು.

- ಮೂರ್ತಿ ಪೂಜೆ, ಸತಿ ಪದ್ಧತಿ, ಅಸ್ಪೃಶ್ಯತೆ, ಜಾತಿ ಪದ್ಧತಿ, ದುಬಾರಿ ವೆಚ್ಚದ ಶಾಸ್ತ್ರ, ವಿಧಿ–ವಿಧಾನಗಳನ್ನು ಖಂಡಿಸಿದರು.
- ಇವರ ಕಠಿಣ ಪರಿಶ್ರಮದ ಫಲವಾಗಿ ಲಾರ್ಡ್ ವಿಲಿಯಂ ಬೆಂಟಿಕ್‌ನ್ನು 1829 ರಲ್ಲಿ ಸತಿ ಪದ್ಧತಿಯನ್ನು ನಿಷೇಧಿಸಿ ಕಾನೂನು ಜಾರಿಗೆ ತಂದನು.
- ಇವರ ಮರಣಾನಂತರ ಕೇಶವಚಂದ್ರ ಸೇನ್ & ದೇವೇಂದ್ರ ನಾಥ ಠ್ಯಾಗೋರ್ ಬ್ರಹ್ಮ ಸಮಾಜ ಮುಂದುವರೆಸಿದರು.
- (ತತ್ವ ಬೋಧಿನಿ ಸಭಾ & ತತ್ವ ಬೋಧಿನಿ ಪತ್ರಿಕಾ) ಆದಿ ಬ್ರಹ್ಮ ಸಮಾಜವನ್ನು ಠ್ಯಾಗೋರ್ ಮುಂದುವರೆಸಿದರು. ಸಂಘತ್ ಸಭಾ/ಸ್ನೇಹಿತರ ಒಕ್ಕೂಟ ಸ್ಥಾಪಿಸಿದರು. ಚೈತನ್ಯ ಮತು ಆಚಾರ್ಯ ಎಂಬ ಪದವಿ ಪಡೆದರು.
- ಕೇಶವ ಚಂದ್ರಸೇನ್‌ರ ಪ್ರಯತ್ನವಾಗಿ 1872 ರಲ್ಲಿ ಬಹುಪತ್ನಿತ್ವ & ಬಾಲ್ಯವಿವಾಹ ತಡೆಗಟ್ಟಲು ಜಾರಿಗೆ ತರಲಾಯಿತು. ಈ ಕಾಯ್ದೆಯು ಅಂತರ್ಜಾತಿ ವಿವಾಹ & ವಿಧವಾ ಪುನರ್ ವಿವಾಹಗಳನ್ನು ಪ್ರೋತ್ಸಾಹಿಸಿತು.
- 1866 ರಲ್ಲಿ ಬ್ರಹ್ಮ ಸಮಾಜವು ಭಾರತೀಯ ಬ್ರಹ್ಮ ಸಮಾಜ & ಆದಿ ಬ್ರಹ್ಮ ಸಮಾಜ ಎಂದು ಇಬ್ಭಾಗವಾಯಿತು.
- ರಾಜರಾಂ ಮೋಹನ್ ರಾಯರು ಕಲ್ಕತ್ತಾದಲ್ಲಿ ಸ್ವಂತ ಖರ್ಚಿನಲ್ಲಿ ಆಂಗ್ಲ ಮಾಧ್ಯಮ ಶಾಲೆ ಸ್ಥಾಪಿಸಿದರು.
- ಭಾರತೀಯ ವಿಜ್ಞಾನ & ಪಾಶ್ಚಾತ್ಯ ವಿಜ್ಞಾನಗಳನ್ನು ಬೋಧಿಸಿ 'ವೇದಾಂತ ಕಾಲೇಜೊಂದನ್ನು' ಸ್ಥಾಪಿಸಿದರು.
- ಇವರು 'ಸಂವಾದ್ ಕಾಮುದಿ' ಎಂಬ ಬಂಗಾಳಿ ಪತ್ರಿಕೆಯನ್ನು ಪ್ರಕಟಿಸಿದರು.
- ತಂದೆ ತೀರಿಕೊಂಡ ನಂತರ ಮುರ್ಷಿದಾಬಾದ್‌ಗೆ ಬಂದು ತುಹಪತ್ ಉಲ್–ಮುವಹಿದೀನ್ (ಏಕದೇವತಾರಾಧನೆಯ ಕೊಡುಗೆ) ಎಂಬ ಕಿರುಹೊತ್ತಿಗೆ ರಚಿಸಿ ಮೂಢನಂಬಿಕೆ, ಮೂರ್ತಿಪೂಜೆಯನ್ನು ಖಂಡಿಸಿದರು.
- ಸಮಾಚಾರ ದರ್ಪಣ, ಮೀರತ್ ಉಲ್–ಅಕ್ಬರ್ (ಪರ್ಶಿಯನ್) ಬರಾಹ್ಮನಿಕಲ್ ಎಂಬ ಪತ್ರಿಕೆಗಳನ್ನು ಹೊರಡಿಸಿದನು.
- 'ತಾರಾಚಂದ್ ಚಕ್ರವರ್ತಿ' ಬ್ರಹ್ಮ ಸಮಾಜದ ಮೊದಲ ಕಾರ್ಯದರ್ಶಿ. ಬ್ರಹ್ಮ ಸಮಾಜವನ್ನು ದೇವರ ಸಮಾಜ; ಎಂದು ಕರೆಯಲಾಗುತ್ತದೆ.

### ಪ್ರಾರ್ಥನಾ ಸಮಾಜ – 1867

- ಡಾ॥ ಆತ್ಮರಾಂ ಪಾಂಡುರಂಗರಿಂದ 1867 ಮುಂಬೈ ಸ್ಥಾಪಿಸಲ್ಪಟ್ಟಿತು. 'ನಿಮ್ನ ವರ್ಗಗಳ ಸಂಘ' ಸ್ಥಾಪಿಸಿದರು.
- ಪ್ರತಿಯೊಂದು ಧರ್ಮವು ಸತ್ಯದ ಪ್ರತೀಕ ಎಂದು ಘೋಷಿಸಿದರು.
- ಸಮಪಂಕ್ತಿಭೋಜನ, ಪರ್ದಾ ಪದ್ಧತಿ ನಿಷೇಧ, ಬಾಲ್ಯ ವಿವಾಹ ನಿಷೇಧ, ಅಸ್ಪೃಶ್ಯತೆ, ಜಾತಿ ನಿಷೇಧ ಪ್ರಮುಖವಾದವುಗಳು. ಹಿಂದುಳಿದ ಜನರಿಗೆ ರಾತ್ರಿ ಶಾಲೆಗಳನ್ನು, ಅನಾಥಾಲಯ, ವಿಧವಾಶ್ರಮಗಳನ್ನು ಸ್ಥಾಪಿಸಿದರು. 'ಸುಭೋದ' ಪತ್ರಿಕೆ ಆರಂಭಿಸಿದರು.
- ನ್ಯಾ. ಗೋವಿಂದ ರಾನಡೆ:– ಪ್ರಾರ್ಥನಾ ಸಮಾಜದ ಶ್ರೇಯಸ್ಸಿಗೆ ದುಡಿದರು.

INSTAKAS



Note : For reference purpose only, not for commercial purpose

- ಇವರು ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಗೆ ದುಡಿದರು. ಕಾಂಗ್ರೆಸ್ ವಾರ್ಷಿಕ ಅಧಿವೇಶನಗಳಲ್ಲಿ ಸಾಮಾಜಿಕ, ಧಾರ್ಮಿಕ ಸುಧಾರಣಾ ಸಮ್ಮೇಳನಗಳನ್ನು ನಡೆಸಿದರು.
- ರಾನಡೆಯವರು ಸ್ತ್ರೀ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಟ್ಟರು. ಹೆಣ್ಣು ಮಕ್ಕಳಿಗಾಗಿ 1884 ಪುಣೆಯಲ್ಲಿ ಪ್ರಥಮ ಪ್ರೌಢಶಾಲೆ ಸ್ಥಾಪಿಸಿದರು.
- ಗೋಪಾಲ ಗಣೇಶ ಅಗರಕರ್:– ವಿಧವಾ ಪುನರ್ ವಿವಾಹ ಪ್ರತಿಪಾದಿಸಿದರು.
- ದುಂದೂ ಕೇಶವ್ ಕರ್ವೆ:– ಸಂಪ್ರದಾಯವಾದಿಗಳ ವಿರೋಧದ ನಡುವೆಯೂ ಒಬ್ಬ ವಿಧವೆಯನ್ನು ಮದುವೆಯಾದರು.
- ಪುಣೆಯಲ್ಲಿ ವಿಧವೆಯರಿಗೆ 'ವಸತಿ ಗೃಹ' ಸ್ಥಾಪಿಸಿದರು.
- ಏಕಾಂಗಿಯಾಗಿ ಮಹಿಳಾ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲು ಪ್ರಚಾರ ಮಾಡಿ ಧೇಣಿಗೆ ಸಂಗ್ರಹಿಸಿದರು.

  ಇವರು SNDT ಮಹಿಳಾ ವಿಶ್ವವಿದ್ಯಾನಿಲಯವನ್ನು 1916 ರಲ್ಲಿ ಸ್ಥಾಪಿಸಿದರು.
- ನಾರಾಯಣ ಗಣೇಶರಾವ್ ಚಂದಾವರ್ಕರ್ & ವಿಠಲ್ ರಾಮ್ ಜಿ ಶಿಂಧೆ ದಲಿತರ ಉದ್ಧಾರಕ್ಕಾಗಿ 1906 ರಲ್ಲಿ 'ದುರ್ಬಲ ವರ್ಗಗಳ ಮಿಶನ್'ನ್ನು ಸ್ಥಾಪಿಸಿದರು.

### ಇತರೆ ಚಳುವಳಿಗಳು

- ದೇವಬಂಧ್ ಚಳುವಳಿ, ಮಹ್ಮದ್ ಖಾಸೀಂ & ರಶೀದ್ ಅಹ್ಮದ್ ಗಂಗೋಹಿ, ಮುಸ್ಲಿಂ ಜನಾಂಗ ಉದ್ಧಾರಕ್ಕೆ 1866 ರಲ್ಲಿ ಸ್ಥಾಪಿಸಿದರು.
- ಸಿಂಗ್ ಸಭಾ, ಠಾಕೋರ್ ಸಿಂಗ್ & ಜಿ. ಸಿಂಗ್‌ರು, ಸಿಖ್ಖರ ಧರ್ಮ ಪರಿಶುದ್ಧತೆ ಕಾಪಾಡಲು 1873 ಅಕ್ಟೋಬರ್ 01 ರಂದು ಸ್ಥಾಪಿಸಿದರು.
- ರುಹುನಮ್ಮೆ ಮಜದಯಾ ಸನನ್ ಸಭಾ(ಮತ ಸುಧಾರಣಾ ಸಂಘ–1851) ದಾದಾ ನೌರೋಜಿ, ಜೆ.ಬಿ.ವಾಚ್, ಎಸ್.ಎಸ್. ಬೆಂಗಾಳಿಯವರು ಪಾರ್ಸಿ ಸಮುದಾಯದ ಏಳಿಗೆಗಾಗಿ ಸ್ಥಾಪಿಸಿದರು.
- ನಾಯನಾರ್ ಸೇವಾ ಸಮಾಜ್ – 1914, ತಿರುವಾಂಕೂರಿನಲ್ಲಿ ಮನ್ನಾತ್ ಪದ್ಮನಾಭ್ ಪಿಳ್ಳೈ ಸ್ಥಾಪಿಸಿದರು. ಇದು ಮದ್ರಾಸಿನ ಜಸ್ಟೈಸ್ ಪಾರ್ಟಿಯೊಂದಿಗೆ ಸಂಪರ್ಕ ಬೆಳೆಸಿಕೊಂಡಿತು.
- ಪ್ರಜಾಮಿತ್ರ ಮಂಡಳಿ: ಮೈಸೂರು ಸಂಸ್ಥಾನದಲ್ಲಿ ನಂಬೂದರಿ & ಮಲಯಾಳ ಬ್ರಾಹ್ಮಣರ ಏಕಸ್ವಾಮ್ಯ ಖಂಡಿಸಿ, ಸಿ.ಆರ್.ರೆಡ್ಡಿ, ಎಂ. ಬಸವಯ್ಯ, ಗುಲಾಂ ಅಹ್ಮದ್, ಬಸಚನ್ನಯ್ಯ ಸೇರಿ ಸ್ಥಾಪಿಸಿದರು.
- ಕುಕ ಚಳುವಳಿ ಪಂಜಾಬ್, ಸಿಖ್ಖರ ಧರ್ಮ ಸುಧಾರಣೆ & ಬ್ರಿಟೀಷರನ್ನು ಹೊರಹಾಕುವ 'ಭಗತ್ ಜವಹಾರ್ ಮಾಲ್ ಸ್ಥಾಪಕ, ಬಲಕ್ ಸಿಂಗ್, ರಾಮಸಿಂಗ್ ಇತರರು.
- ನಿರಂಕಾರಿ ಚಳುವಳಿ: ಬಾಬಾ ದಯಾಳದಾಸ ಸ್ಥಾಪಕ (ದೇವರು ನಿರಂಕರಿ ಎಂದರ್ಥ)
- ನಾಮಧಾರಿ ಚಳುವಳಿ: ಕುಕ ಚಳುವಳಿ ಆಧರಿಸಿ ನಡೆದ ಸಿಖ್ ಚಳುವಳಿ ಬಾಬಾರಾಂಸಿಂಗ್ ಸ್ಥಾಪಕ.
- ಅಕಾಲಿ/ಗುರುದ್ವಾರ ಚಳುವಳಿ: 1920 ರ ಮುನ್ನ ಸಿಖ್ಖರ ಪೂಜಾ ಕೇಂದ್ರಗಳಾದ ಗುರುದ್ವಾರಗಳು ಪುರೋಹಿತರಾದ 'ಮಹಂತರ' ಕೈಯಲ್ಲಿದ್ದವು. ಮಹಂತರು ಸ್ವಾರ್ಥರಾಗಿ ಗುರುದ್ವಾರ ಆದಾಯವನ್ನು ದುರುಪಯೋಗಪಡಿಸಿಕೊಳ್ಳತೊಡಗಿದ್ದು, ಇದನ್ನು ಖಂಡಿಸಿ ಸಿಖ್ಖರು 1920 ಅಕಾಲಿ ಚಳುವಳಿ ಹೂಡಿದರು. ಪರಿಣಾಮವಾಗಿ 1925 ರಲ್ಲಿ ಕಾಯ್ದೆ ಪಾಸಾಗಿ ಮಹಂತರರನ್ನು ಕಿತ್ತು ಹಾಕಿ ಶಿರೋಮಣಿ ಗುರುದ್ವಾರ ಪ್ರಬಂಧಕ ಸಮಿತಿಗೆ ವಹಿಸಲಾಯಿತು.
- ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ, 1905 ರಲ್ಲಿ ಗೋಪಾಲಕೃಷ್ಣ ಗೋಖಲೆ ಸ್ಥಾಪಿಸಿದರು. ಕೆಳವರ್ಗಗಳ ಏಳಿಗೆ, ಸಮಾಜಸೇವೆ ಮುಂತಾದ.
- ದೇವ ಸಮಾಜ, ಲಾಹೋರಿನಲ್ಲಿ 1887, ಶಿವಸೇನ ಅಗ್ನಿಹೋತ್ರಿಯವರು ಲಂಚಗುಳಿತನ, ಜೂಜಾಟ, ಹಿಂಸೆ ಖಂಡನೆಗೆ ಸ್ಥಾಪಿಸಿದರು.
- ನಾಡಾರ್ ಚಳುವಳಿ: ತಮಿಳುನಾಡಿನ ರಾಮನಾಡು ಜಿಲ್ಲೆಯಲ್ಲಿ ಸರಾಯಿ ತಯಾರಿಸುತ್ತಿದ್ದ ಅಸ್ಪೃಶ್ಯರ ಗುಂಪು.
- ಪಲ್ಲಿ ಚಳುವಳಿ: ತಮಿಳುನಾಡಿನ ಕೀಳು ಜಾತಿಯವರ ಸಂಘ.
- ಯಜ್ವಾ ಚಳುವಳಿ: ಕೇರಳದಲ್ಲಿ ನಾರಾಯಣ ಗುರು 'ಯಜ್ವಾ' ಎಂಬ ಕೀಳು ಜಾತಿಯ ಏಳಿಗೆಗಾಗಿ ಚಳುವಳಿ ಆರಂಭಿಸಿದರು.
- ಮಹಾರ್ ಚಳುವಳಿ: ಅಂಬೇಡ್ಕರ್‌ರವರು ದಲಿತರ ಜಾಗೃತಿ ಮತ್ತು ಸುಧಾರಣೆಗೆ ಸ್ಥಾಪಿಸಿದರು.
- ರಾಧಾಸ್ವಾಮಿ ಚಳುವಳಿ: ಇದನ್ನು ತುಳಸಿರಾಂ 1861 ಆಗ್ರಾದಲ್ಲಿ ಸ್ಥಾಪಿಸಿದರು.

  - ✓ ಸಿಸ್ಟರ್ ಸುಬ್ಬಲಕ್ಷ್ಮೀ ಮದ್ರಾಸ್ ಪ್ರಾಂತ್ಯದ ಮೊದಲ ಹಿಂದೂ ವಿಧವಾ ಪದವೀಧರೆ, ಬಾಲ ವಿಧವೆಯರಿಗೆ ಬೆಳಕಾದಳು & ವಿಧವೆಯರಿಗಾಗಿ ವಯಸ್ಕ ಶಾಲೆ ತೆರೆದಳು.
  - ✓ ಆರ್ಯ ಮಹಿಳಾ ಸಮಾಜ: ರಾನಡೆ ಪತ್ನಿ ರಮಾಬಾಯಿ ಸ್ಥಾಪಿಸಿದರು.
  - ✓ ಸ್ತ್ರೀ ಜೋರಾತಾಷ್ಠಿ ಮಂಡಲ: ಇದು ಪಾರ್ಸಿ ಮಹಿಳೆಯ ಕಲ್ಯಾಣಕ್ಕೆ ಸ್ಥಾಪಿಸಲಾಗಿತ್ತು.
  - ✓ ಭಾರತ ಸ್ತ್ರೀ ಮಹಾಮಂಡಲ: 1910 ಶಾರದಾ ದೇವಿ ಚೌದರಾಣಿ ಅಲಹಾಬಾದಿನಲ್ಲಿ ಸ್ಥಾಪಿಸಿದರು.
  - ✓ ಭಾರತೀಯ ಮಹಿಳಾ ಸಂಸ್ಥೆ: 1915 ಥಿಯೋಸೋಪಿಸ್ಟ್ ಜೀನರಾಜದಾಸರು' ಸ್ಥಾಪಿಸಿದರು. ಆ್ಯನಿಬೆಸೆಂಟ್ ಪ್ರಥಮ ಅಧ್ಯಕ್ಷರು. 'ಸ್ತ್ರೀ ಧರ್ಮ' ಪತ್ರಿಕೆಯನ್ನು ಹೊರಡಿಸಿತು. ಮಹಿಳಾ ಮತದಾನಕ್ಕೆ ಒತ್ತಾಯಿಸಿತು.
  - ✓ ಅಖಿಲ ಭಾರತ ಮಹಿಳಾ ಸಮ್ಮೇಳನ: ಭಾರತೀಯರ ಮೊತ್ತ ಮೊದಲ ಮಹಿಳಾ ಸಂಘಟನೆ 1927 ಪೂನಾದಲ್ಲಿ ನಡೆಯಿತು. ಸ್ತ್ರೀ ಜಾಗೃತಿಗಾಗಿ 'ರೋಶಿ' ಎಂಬ ಪತ್ರಿಕೆ ಹೊರಡಿಸಿತು. AIWC ಸೇರಿದ 'ಮುತ್ತುಲಕ್ಷ್ಮೀ ರೆಡ್ಡಿ' 1927 ರಲ್ಲಿ ಪ್ರಥಮ ಮಹಿಳಾ ಶಾಸಕಿಯಾಗಿ ಮದ್ರಾಸ್ ಲೆಜಿಸ್ಲೇಟೀವ್ ಕೌನ್ಸಿಲ್‌ಗೆ ಅಯ್ಕೆ.

### ಆರ್ಯ ಸಮಾಜ – 1875

- 1875 ರಲ್ಲಿ ದಯಾನಂದ ಸರಸ್ವತಿಯವರು ಆರ್ಯ ಸಮಾಜವನ್ನು 'ಬಾಂಬೆ'ಯಲ್ಲಿ ಸ್ಥಾಪಿಸಿದರು.

  ಜನನ: ಗುಜರಾತ್ ಕಾಥೇವಾಡದ ಮೂರ್ವಿ ಎಂಬಲ್ಲಿ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು. ನಿಜವಾದ ಹೆಸರು – 'ಮೂಲಶಂಕರ'
- ಕಾಶಿಯಲ್ಲಿ ಉನ್ನತ ವ್ಯಾಸಂಗ ಮಾಡಿದರು.
- ವೇದಗಳಿಗೆ ಹಿಂದಿರುಗಿ (Go back to vedas) ಎಂದು ಕರೆ ನೀಡಿದರು.
- ಪ್ರಾಣಿ ಬಲಿ, ನರ ಬಲಿ, ನರಕ, ಮೂಢನಂಬಿಕೆಗಳನ್ನು ಖಂಡಿಸಿತು.
- ವೇದಗಳೆಲ್ಲವೂ ಸತ್ಯ ಎಂದು, ಸರ್ವಜ್ಞಾನದ ಮೂಲಾಧಾರಗಳೆಂದು ನಂಬಿದ್ದರು.

INSTA KAS

- ಮತಾಂತರಗೊಂಡ ಹಿಂದೂಗಳನ್ನು ಪುನ: ಹಿಂದೂ ಧರ್ಮಕ್ಕೆ ಸೇರಿಸಿಕೊಳ್ಳಲು 'ಶುದ್ಧಿ ಚಳುವಳಿ' ಪ್ರಾರಂಭಿಸಿದರು.
- ವೇದ & ಆಂಗ್ಲ ಮಾಧ್ಯಮದ ಶಿಕ್ಷಣವನ್ನು ಕಲಿಸುವುದಕ್ಕಾಗಿ DAV (DAYANANDA ANGLO VEDIC) ಶಾಲೆ & ಕಾಲೇಜುಗಳನ್ನು ಸ್ಥಾಪಿಸಿದರು(1886).
- ದಯಾನಂದರ ಮುಖ್ಯ ಗುರುಗಳಾದ ಲಾಲ ಲಜಪತರಾಯ್, ಲಾಲಾ ಹನ್ಸರಾಜ್ & ಪಂಡಿತ ಗುರುದತ್ ಆರ್ಯ ಸಮಾಜದ ತತ್ವಗಳನ್ನು ಪ್ರಚಾರ ಮಾಡಿದರು & ಹರಿದ್ವಾರದಲ್ಲಿ ಗುರುಕುಲವನ್ನು ಸ್ಥಾಪಿಸಿದರು.(1902)
- ತಿಲಕ್ & ಗೋಖಲೆಯವರ ಮೇಲೆ ಈ ಸಮಾಜದ ತತ್ವಗಳು ಬಹಳ ಪ್ರಭಾವ ಬೀರಿದವು.
- 'ಸ್ವದೇಶಿ & ಭಾರತ ಭಾರತೀಯರಿಗೆ' ಎಂಬ ಘೋಷಣೆಗಳನ್ನು ಮೊಟ್ಟಮೊದಲು ಘೋಷಿಸಿದರು.

### ಕೃತಿ–ಸತ್ಯಾರ್ಥ ಪ್ರಕಾಶ

- ಭಾರತೀಯ ಹಿಂದೂ ಧರ್ಮದ ಮಾರ್ಟಿನ್ ಲೂಥರ್ ಎಂದು ಕರೆಯಲಾಗುತ್ತದೆ. 'ಹಿಂದೂ ಧರ್ಮದ ರಕ್ಷಕ' ಎಂದು ಕರೆಯಲಾಗಿದೆ.
- ಭಾರತೀಯರಲ್ಲಿ ರಾಷ್ಟ್ರೀಯ ಜಾಗೃತಿ ಹುಟ್ಟಿಸಿತು. ಕಾಂಗ್ರೆಸ್ ಜೊತೆಗೂಡಿ ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸಿತು.
- ಹಿಂದಿಯನ್ನು ರಾಷ್ಟ್ರಭಾಷೆಯಾಗಿ ಜಾರಿಗೆ ತರುವಂತೆ ಒತ್ತಾಯಿಸಿದರು.

### ಸತ್ಯ ಶೋಧಕ ಸಮಾಜ 1873

- ಸ್ಥಾಪಕ:– ಮಹಾತ್ಮ ಜ್ಯೋತಿಭಾಫುಲೆ 1873 ರಲ್ಲಿ ಪುಣೆಯಲ್ಲಿ ಸ್ಥಾಪಿಸಿದರು.
- ಜನನ:– ಮಹಾರಾಷ್ಟ್ರದ ಬಡಕುಟುಂಬದಲ್ಲಿ 1827 ರಲ್ಲಿ ಜನಿಸಿದರು. 'ಮಾಲ' ಜಾತಿಯಲ್ಲಿ ಹುಟ್ಟಿದರು.
- ಪಾಶ್ಚಿಮಾತ್ಯ ಹೆಸರಾಂತ ಚಿಂತಕರಾದ **'ಥಾಮಸ್ ಪೇನ್'** ವಿಚಾರಗಳಿಂದ ಪ್ರಭಾವಿತರಾಗಿದ್ದರು.
- ಜಾತಿ ಪದ್ಧತಿಯ ಅನಿಷ್ಟಗಳಿಂದ ಬೇಸತ್ತು ಅದರ ನಿರ್ಮೂಲನಕ್ಕಾಗಿ ಪಣ ತೊಟ್ಟರು.
- ರೈತರು & ಕೆಳವರ್ಗದವರ ಹಕ್ಕುಗಳಿಗಾಗಿ ಹೋರಾಡಿದರು.
- ಪುಣೆಯಲ್ಲಿ ಹುಡುಗಿಯರ ಶಿಕ್ಷಣಕ್ಕೆ ಶಾಲೆಯನ್ನು 1848 ರಲ್ಲಿ ಸ್ಥಾಪಿಸಿದರು.
- ಆಶ್ರಯವಿಲ್ಲದ ಹೆಂಗಸರಿಗೆ ವಸತಿ ನಿಲಯಗಳನ್ನು ನಿರ್ಮಿಸಿದರು.
- ಅನಾಥ ಮಕ್ಕಳಿಗಾಗಿ **'ಅನಾಥಾಲಯಗಳನ್ನು'** ಸ್ಥಾಪಿಸಿದ ಮೊದಲ ಹಿಂದೂ ಇವರೇ ಎಂದು ನಿಶ್ಚಯವಾಗಿ ಹೇಳಬಹುದು.
- ಮುಂಬೈ ಗಿರಣಿ ಕಾರ್ಮಿಕರ ಪರವಾಗಿ ಹೋರಾಟ ನಡೆಸಿದರು. ದಲಿತರ ಜಾಗೃತಿಗಾಗಿ **'ದೀನಬಂಧು'** ಪತ್ರಿಕೆ ಜಾರಿ ತಂದರು.
- 'ಉಚಿತ & ಕಡ್ಡಾಯ ಶಿಕ್ಷಣ' ಹಾಗೂ **'ಸಾರ್ವತ್ರಿಕ ಶಿಕ್ಷಣ'**ವನ್ನು ಪ್ರತಿಪಾದಿಸಿದ ಪ್ರಥಮ ಸಮಾಜ ಸುಧಾರಕರು.
- ಇದರ ಸದಸ್ಯರಾದ ಎನ್.ಎಮ್.ಲೋಕ ಹಂಡೆ ಭಾರತದ ಪ್ರಥಮ ಕಾರ್ಮಿಕ ಸಂಘವಾದ ಬಾಂಬೆ ಮಿಲ್ಸ್ ಹ್ಯಾಂಡ್ಸ್ ಅಸೋಸಿಯೇಷನ್ ಸ್ಥಾಪಿಸಿದರು.
- ಗಣ್ಯ ತಾರಾಬಾಯಿ ಶಿಂಧೆಯವರು **'ಸ್ತ್ರೀ ಪುರುಷ ತುಲನ'** ಎಂಬ ಪುಸ್ತಕ ಬರೆದು, ಪುರುಷ ಸಮಾನ ಹಕ್ಕನ್ನು ಪಡೆಯಲು ಸ್ತ್ರೀಯರಿಗೆ ಪ್ರಚೋದಿಸಿದಳು.

### ಬ್ರಹ್ಮ(ದಿವ್ಯ) ಜ್ಞಾನ ಸಭೆ (Theosohical Society) – 1875

- ರಷ್ಯಾದ ಮಹಿಳೆ 'ಮೇಡಂಬ್ಲಾವಟ್ಸ್ಕಿ & ಅಮೇರಿಕಾದ ಕರ್ನಲ್ ಹೆನ್ರಿ ಅಲ್ಕಾಟ್' ಎಂಬುವವರು 1875 ರಲ್ಲಿ ನ್ಯೂಯಾರ್ಕ್‌ನಲ್ಲಿ ದೇವರ ಭಕ್ತಿ & ಸತ್ಯದ ಜ್ಞಾನ ಪಡೆಯಲು 'ಬ್ರಹ್ಮ ಜ್ಞಾನ ಸಭೆ' ಸ್ಥಾಪಿಸಿದರು.
- ಥಿಯೋಸ್ ದೇವರು ಸೋಫಿಯಾ ಜ್ಞಾನ ಎಂದರ್ಥ.
- ಜನರಲ್ಲಿ ಸೋದರತ್ವ ಭಾವನೆ ಬೆಳೆಸುವುದು ಮುಖ್ಯ ಗುರಿ.
- 1879 ರಲ್ಲಿ ಸಂಸ್ಥಾಪಕರಿಬ್ಬರು ಭಾರತಕ್ಕೆ ಬಂದು ಮದ್ರಾಸ್ ಬಳಿಯ ಅಡಿಯಾರ್‌ಲ್ಲಿ ಸಂಸ್ಥೆಯ ಕೇಂದ್ರ ಕಾರ್ಯಾಲಯ ಸ್ಥಾಪಿಸಿದರು.
- 1893 ರಲ್ಲಿ ಐರ್ಲೆಂಡ್ ದೇಶದಿಂದ ಆಗಮಿಸಿದ 'ಆ್ಯನಿಬೆಸೆಂಟ್'ರು ಈ ಸೊಸೈಟಿಯ ಚಟುವಟಿಕೆಗಳಿಗೆ ಹೊಸ ರೂಪ & ಚೈತನ್ಯ ನೀಡಿದರು.
- ಈ ಸೊಸೈಟಿಯ ಗುರಿಗಳನ್ನು ಪ್ರಚಾರ ಮಾಡಲು ಆ್ಯನಿಬೆಸೆಂಟ್'ರು 'ನ್ಯೂ ಇಂಡಿಯಾ' 'ಕಾಮನ್ ವಿಲ್' ಎಂಬ ಪತ್ರಿಕೆ ಪ್ರಾರಂಭಿಸಿದರು.
- ಸ್ವಾತಂತ್ರ್ಯಕ್ಕಾಗಿ 1916 ರಲ್ಲಿ 'ಹೋಂ ರೂಲ್ ಲೀಗ್' (ಸ್ವಯಂ ಆಡಳಿತ ಚಳುವಳಿ)ಯನ್ನು ಪ್ರಾರಂಭಿಸಿದರು.
- ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ 1917 ರಲ್ಲಿ ಸ್ವಾತಂತ್ರ್ಯಕ್ಕಾಗಿ ದುಡಿದರು, ಪ್ರಥಮ ಮಹಿಳಾ ಅಧ್ಯಕ್ಷರು.
- ಬನಾರಸ್ ನಲ್ಲಿ 'ಸೆಂಟ್ರಲ್ ಹಿಂದೂ ಶಾಲೆಯನ್ನು ಸ್ಥಾಪಿಸಿದರು. ಅದು ಈಗ 'ಬನಾರಸ್' ಹಿಂದೂ ವಿಶ್ವವಿದ್ಯಾಲಯವಾಗಿ ಅಭಿವೃದ್ಧಿಗೊಂಡಿತು. ಅದ್ಯಾರನ್‌ಲ್ಲಿ ರಾಷ್ಟ್ರೀಯ ವಿಶ್ವವಿದ್ಯಾಲಯ ಸ್ಥಾಪಿಸಿದರು.
- ತಿಲಕ್‌ರು ಹೋಂ ರೂಲ್ ಲೀಗ್‌ನು 1916–18 ಅವಧಿಯಲ್ಲಿ ಮಹಾರಾಷ್ಟ್ರ, ಕೇಂದ್ರೀಯ ಪ್ರಾಂತ್ಯಗಳು & ಕರ್ನಾಟಕ, ಬೀರಾರ್ ಪ್ರಾಂತ್ಯಗಳು G.S. ಕರ್ಪಡೆ & ಆ್ಯನಿಬೆಸೆಂಟ್'ರ ಜೊತೆ ಸ್ಥಾಪಿಸಿದರು. ಈ ಪ್ರಾಂತ್ಯಗಳನ್ನು ಬಿಟ್ಟು ಉಳಿದ ಭಾರತದಾದ್ಯಂತ ಆ್ಯನಿಬೆಸೆಂಟ್‌ರು 'ಹೋಂ ರೂಲ್ ಲೀಗ್'ನ್ನು ಸ್ಥಾಪಿಸಿದರು.

### ಅಲಿಘಡ್ ಚಳುವಳಿ

- ಸ್ಥಾಪಕ: ಸರ್ ಸೈಯದ್ ಅಹ್ಮದ್ ಖಾನ್(ಇಸ್ಲಾಂ ವೃದ್ಧ ಪಿತಾಮಹ)
- ಇವರು ಬ್ರಿಟೀಷ ನ್ಯಾಯಾಲಯಗಳಲ್ಲಿ ಸೇವೆ ಸಲ್ಲಿಸಿದರು.
- ಭಾರತದ ಮುಸ್ಲೀಂರಲ್ಲಿ ಜಾಗೃತಿ ಮೂಡಿಸಲು ಈ ಚಳುವಳಿಯ ನಾಯಕತ್ವ ವಹಿಸಿದರು(ಮೊದಲ ಮುಸ್ಲೀಂ ಚಳುವಳಿ).
- ಮುಸ್ಲೀಂ ಪಾಶ್ಚಾತ್ಯ ದೇಶಗಳ ವಿಚಾರ ಸಂಗಮಕ್ಕೆ ಸ್ಪಂದಿಸಬೇಕೆನ್ನುವುದು ಮುಖ್ಯ ಗುರಿಯಾಗಿತ್ತು.
- 1864 ರಲ್ಲಿ ಘಾಜಿಪುರ್‌ನಲ್ಲಿ ವೈಜ್ಞಾನಿಕ ಶಾಲೆ(Scientific school) ಸ್ಥಾಪಿಸಿದರು.
- 1875 ರಲ್ಲಿ ಅಲಿಘರ್‌ದಲ್ಲಿ ಮೊಹ್ಮದನ್ ಆಂಗ್ಲೋ ಓರಿಯೆಂಟಲ್(MAO) ಕಾಲೇಜು ಸ್ಥಾಪಿಸಿದರು ಈ ಕಾಲೇಜು ಮುಂದೆ ಅಲಿಘಡ್ ಮುಸ್ಲೀಂ(1920) ವಿಶ್ವವಿದ್ಯಾಲಯವಾಗಿ ಪರಿಣಮಿಸಿತು.
- ಫರ್ದಾ(ಘೋಷಾ) ಧರಿಸುವುದನ್ನು ನಿಷೇಧಿಸುವಂತೆ ಶ್ರಮಿಸಿದನು.

INSTA KAS

- ಮುಸ್ಲೀಂರಲ್ಲಿ ತನ್ನ ಸುಧಾರಣಾ ನೀತಿಗಳನ್ನು ಪ್ರಚಾರ ಮಾಡಲು 'ತಾಜಿಲ್–ಉದ್–ಅಖ್‌ಲಕ್' ಎಂಬ ದಿನಪತ್ರಿಕೆ ಪ್ರಚಾರ ಮಾಡಿದನು.
- ಇಂಗ್ಲೀಷ್ ಕೃತಿಗಳನ್ನು ಉರ್ದುವಿಗೆ ಭಾಷಾಂತರಿಸಲು 'ಅಂಜುಮಾನ್ ಅಥವಾ ಸೈಂಟಿಫಿಕ್ ಸೊಸೈಟಿಯನ್ನು' ಸ್ಥಾಪಿಸಿದರು.

### ರಾಮಕೃಷ್ಣ ಮಠ 1897

- ಈ ಮಠವನ್ನು ಸ್ವಾಮಿ ವಿವೇಕಾನಂದರು 1897 ಮೇ 01 ರಂದು 'ಬಂಗಾಳದ ಬೇಲೂರು ಮಠ' ಎಂಬಲ್ಲಿ ಸ್ಥಾಪಿಸಿದರು.
- ಮತ್ತೊಂದು ಶಾಖೆ 'ಮಾಯಾವತಿ'ಯಲ್ಲಿದೆ.
- ಸ್ವಯಂ ಸಂಘಟನಾ ಸಂಸ್ಥೆಯಾಗಿದೆ. ಆರೋಗ್ಯ, ಪ್ರಕೃತಿ ವಿಕೋಪ, ಪ್ರವಾಹ, ಬರಗಾಲ ಮತ್ತಿತರ ಸಂದರ್ಭಗಳಲ್ಲಿ ಅಪಾರ ಸೇವೆ ಸಲ್ಲಿಸುತ್ತಿವೆ.
- ರಾಮಕೃಷ್ಣ ಪರಮಹಂಸರು ಬಂಗಾಳದಲ್ಲಿ ಜನಿಸಿದರು. ಇವರು 'ಶಾರಾದಾಮಣಿ ದೇವಿ'ಯನ್ನು ವಿವಾಹವಾದರು.
- ಪರಮಹಂಸರು 'ಕೋಲ್ಕತ್ತಾದಲ್ಲಿ ದಕ್ಷಿಣೇಶ್ವರದ ಕಾಳ' ದೇವಾಲಯದಲ್ಲಿ ಅರ್ಚಕರಾಗಿದ್ದರು.

### ಸ್ವಾಮಿ ವಿವೇಕಾನಂದರು

ಜನನ – 1863 ಜನವರಿ 12 ರಂದು ಕಲ್ಕತ್ತಾದಲ್ಲಿ ಜನಿಸಿದರು.
ತಂದೆ – ವಿಶ್ವನಾಥದತ್ತ, ತಾಯಿ – ಭುವನೇಶ್ವರಿದೇವಿ,
ಮೂಲ ಹೆಸರು – ನರೇಂದ್ರನಾಥದತ್ತ.
ರಾಮಕೃಷ್ಣ ಪರಮಹಂಸರು ಗುರುಗಳು.

- 1893 ರಲ್ಲಿ ಚಿಕಾಗೋದಲ್ಲಿ ನಡೆದ ಧಾರ್ಮಿಕ ಸಮ್ಮೇಳನದಲ್ಲಿ ಭಾರತದ ಪರವಾಗಿ ಭಾಗವಹಿಸಿದರು.
- ಪಶ್ಚಿಮ ಬಂಗಾಳದಲ್ಲಿರುವ ಸುಂದರವನ ಭಾಗದಲ್ಲಿ ಸೌರಶಕ್ತಿಯನ್ನು ಬಳಸಿ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಯೋಜನೆ (Photo Vothic lighting system) ಸ್ಥಾಪಿಸುವುದರಲ್ಲಿ ರಾಮಕೃಷ್ಣ ಆಶ್ರಮ ಪ್ರಮುಖ ಪಾತ್ರ ವಹಿಸಿದೆ.
- UNESCO ರಚನೆಯಂತೆಯೇ ಈ ರಾಮಕೃಷ್ಣ ಆಶ್ರಮ ಇದ್ದಿದ್ದಾಗಿ Unesco ಮಹಾನಿರ್ದೇಶಕರಾಗಿದ್ದ 'ಫೆಡ್ರಿಕೊ ಮೇಯರ್' 1993 ರಲ್ಲಿ ಭಾಷಣ ಮಾಡುವಾಗ ತಿಳಿಸಿದರು.
- ಸಿಸ್ಟರ್ 'ನಿವೇದಿತಾ' ಎಂಬ ಐರಿಶ್ ಮಹಿಳೆಯು ವಿವೇಕಾನಂದರ ಪ್ರಮುಖ ಅನುಯಾಯಿಯಾಗಿದ್ದಳು.
- ವಿವೇಕಾನಂದರು 'ಪ್ರಬುದ್ಧ ಭಾರತ' & ಉದ್ಬೋದನ' ಎಂಬ ಬಂಗಾಳಿ ಇಂಗ್ಲೀಷ್‌ನಲ್ಲಿ ಪತ್ರಿಕೆಗಳನ್ನು ಹೊರಡಿಸಿದರು.

### ಭಾರತದ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆ – 1885

- ಪಂಜಾಬ್ ಜಿಲ್ಲಾ ಕಲೆಕ್ಟರ್ ಆಗಿದ್ದ. 'ಅಲೆನ್ ಚೈವಿಯನ್ ಹ್ಯೂಂ'ರವರು ಡಿಸೆಂಬರ್ 27, 1885 ರಲ್ಲಿ INC ಸ್ಥಾಪಿಸಿದ.
- ರಕ್ಷಕವಾದ ಸಿದ್ಧಾಂತ: ಬ್ರಿಟೀಷರ ಬಗ್ಗೆ ಭಾರತೀಯರಲ್ಲಿ ಮೂಡಿದ ಜಿಗುಪ್ಸೆ, ಅತೃಪ್ತಿ, ಪ್ರತಿಭಟನೆಯನ್ನು ನಿಧಾನವಾಗಿ ಹೋಗಲಾಡಿಸಲು ಕಾಂಗ್ರೆಸನ್ನು ಒಂದು ರಾಜಕೀಯ ವೇದಿಕೆಯಾಗಿ ಬಳಸಬೇಕೆಂಬುದೇ ಉದ್ದೇಶವಾಗಿತ್ತು.

ಭಾರತೀಯರ ಆಶೋತ್ತರಗಳನ್ನು ಈಡೇರಿಸಿಕೊಳ್ಳಲು ಒಂದು ವೇದಿಕೆ ಕಲ್ಪಿಸಿದಲ್ಲಿ ಅವರಲ್ಲಿ ಕ್ರಮೇಣ ಬ್ರಿಟೀಷ್ ವಿರೋಧಿ ಭಾವನೆ ತೊಲಗುತ್ತದೆ. ಚಳುವಳಿ, ಹಿಂಸೆ, ರಕ್ತಪಾತ ತಪ್ಪುತ್ತದೆ ಎಂದು ಹೇಳಿದ. ವೈಸ್ರಾಯ್ ಲಾರ್ಡ್ ಡಫರಿನ್‌ರವರು ಇದಕ್ಕೆ ಬೆಂಬಲಿಸಿದರು.

### ಪ್ರಥಮ ಅಧಿವೇಶನ – ಬಾಂಬೆ 1885 ಡಿಸೆಂಬರ್ 28–30

- ಅಧ್ಯಕ್ಷತೆ: W.C. ಬ್ಯಾನರ್ಜಿ, ದೇಶದ ನಾನಾ ಮೂಲದಿಂದ ಬಂದ ಒಟ್ಟು 72 ಪ್ರತಿನಿಧಿಗಳು ಭಾಗವಹಿಸಿದ್ದರು. ಸುರೇಂದ್ರನಾಥ ಬ್ಯಾನರ್ಜಿ ಕಲ್ಕತ್ತಾದಲ್ಲಿ ಇದೇ ಕಾಲಕ್ಕೆ 'ಇಂಡಿಯನ್ ನ್ಯಾಷನಲ್ ಕಾನ್ಫರೆನ್ಸ್' ನಡೆಯುತ್ತಿದ್ದರಿಂದ ಭಾಗವಹಿಸಲಿಲ್ಲ. ಈ ಕೆಳಕಂಡ ಅಂಶಗಳನ್ನು ಮಂಡಿಸಲಾಯಿತು.

  1) ಕೇಂದ್ರ & ಪ್ರಾಂತೀಯ ಶಾಸಕಾಂಗಗಳಲ್ಲಿ ಚುನಾಯಿತ ಬಹುಸಂಖ್ಯಾತರನ್ನು ಆರಿಸುವುದು.
  2) ಇಂಡಿಯನ್ ಕೌನ್ಸಿಲ್ ರದ್ದುಪಡಿಸುವುದು ಮತ್ತು ವೈಸ್ರಾಯ್ ಕೌನ್ಸಿಲ್‌ನಲ್ಲಿ ಭಾರತೀಯರಿಗೆ ಪ್ರಾತಿನಿಧ್ಯ ಕೊಡುವುದು.
  3) ಸ್ಥಳೀಯ ಸಂಸ್ಥೆಗಳನ್ನು ಬಲಪಡಿಸುವುದು.
  4) ಭಾರತದ ಆಡಳಿತ ಸುಧಾರಿಸಲು ಸರ್ವೋಚ್ಚ ಆಯೋಗವನ್ನು ಸ್ಥಾಪಿಸುವುದು.
  5) ICS ಹುದ್ದೆಗಳಿಗೆ ಪರೀಕ್ಷೆಗಳನ್ನು ಭಾರತ ಮತ್ತು ಇಂಗ್ಲೇಂಡ್‌ಗಳಲ್ಲಿ ಏಕಕಾಲಕ್ಕೆ ನಡೆಸುವುದು. ಉನ್ನತ ಹುದ್ದೆಗಳಿಗೆ ಭಾರತೀಯರ ನೇಮಕ.
  6) ಕಾರ್ಯಾಂಗವನ್ನು ನ್ಯಾಯಾಂಗದಿಂದ ಬೇರ್ಪಡಿಸುವುದು.
  7) ಶಸ್ತ್ರಾಸ್ತ್ರ ಕಾಯ್ದೆ ರದ್ದುಪಡಿಸುವುದು. ಇತ್ಯಾದಿ.

ಆರಂಭದಲ್ಲಿ ಬ್ರಿಟೀಷರು ಕಾಂಗ್ರೆಸ್ ಚಟುವಟಿಕೆಗಳನ್ನು ಸ್ವಾಗತಿಸಿದರೂ ಲಾರ್ಡ್ ಡಫರಿನ್ 1886 ರಲ್ಲಿ ಕಲ್ಕತ್ತಾದಲ್ಲಿ ಕಾಂಗ್ರೆಸ್ಸಿಗರಿಗೆ ಔತಣಕೂಟ ಏರ್ಪಡಿಸಿದರು. ನಂತರದಲ್ಲಿ ಬದಲಾದರು 1890 ರಲ್ಲಿ ಬಂಗಾಳ ಸರಕಾರಿ ಕಾಯಿದೆ ಮಾಡಿ ಕಂಪೆನಿ ನೌಕರರು ಕಾಂಗ್ರೆಸ್‌ನಲ್ಲಿ ಭಾಗಿಯಾಗದಂತೆ ತಡೆಯಿತು. INC ಯು 'ಇಂಡಿಯಾ' ಎಂಬ ಪತ್ರಿಕೆಯನ್ನು ಹೊರಡಿಸಿತು.

## ಭಾರತ ಸ್ವಾತಂತ್ರ್ಯ ಚಳುವಳಿ – ಮೊದಲ ಹಂತ ಗಾಂಧಿ–ಪೂರ್ವ ಯುಗ (1885–1919)

**ವಾರ್ತಾ ಪತ್ರಿಕೆಗಳು:–** ಇಂಡಿಯನ್ ಮಿರರ್, ಬಾಂಬೆ ಸಮಾಚಾರ್, ಅಮೃತ್ ಬಜಾರ್, ಕೇಸರಿ, ಮರಾಠಿ, ಇತ್ಯಾದಿ & ಶಸ್ತ್ರಾಸ್ತ್ರ ಕಾಯ್ದೆ. ಆದರೆ 1878 ರಲ್ಲಿ ಬ್ರಿಟೀಷರು ಮಾತೃಭಾಷೆ ಪತ್ರಿಕಾ ನಿಷೇಧ ಕಾಯಿದೆ ಜಾರಿ ಮಾಡಿದರು.

- 1878 ಕ್ಕೂ ಮೊದಲು ಸ್ಥಾಪಿಸಲ್ಪಟ್ಟ ಕೆಲವು ರಾಜಕೀಯ ಸಂಘ ಸಂಸ್ಥೆಗಳು:–

  1) ಬಂಗ ಭಾಷಾ ಪ್ರಾಕ್ಷಿಕ ಸಭಾ – 1836
  2) ದ್ವಾರಕನಾಥ ಟಾಗೋರರ ಜಮೀನ್ದಾರಿ ಅಸೋಸಿಯೇಷನ್(ಭೂಹಿಡುವಳಿದಾರರ ಸಮಿತಿ) 1838
  3) ಬಂಗಾಲ ಬ್ರಿಟೀಷ್ ಇಂಡಿಯಾ ಸೊಸೈಟಿ – 1843
  4) ಜಮೀನ್ದಾರಿ ಅಸೋಸಿಯೇಷನ್ ಹಾಗೂ ಬಂಗಾಲ ಬ್ರಿಟೀಷ್ ಇಂಡಿಯಾ ಸೊಸೈಟಿಯು ಲೀನದಿಂದ ಸ್ಥಾಪನೆಯಾದ 'ಬ್ರಿಟೀಷ್ ಇಂಡಿಯನ್ ಅಸೋಸಿಯೇಷನ್' – 1851
  5) ದಾದಾಬಾಯಿ ನೌರೋಜಿಯವರ ಈಸ್ಟ್ ಇಂಡಿಯಾ ಅಸೋಸಿಯೇಷನ್ – 1866
  6) ಶಿಶಿರ್‌ಕುಮಾರ ಘೋಷ್‌ರವರ ಇಂಡಿಯನ್ ಲೀಗ್ – 1875


INSTA KAS
Note : For reference purpose only, not for commercial purpose

7) S.N. ಬ್ಯಾನರ್ಜಿ & ಆನಂದ್ ಮೋಹನ್ ಬೋಸ್‌ರಿಂದ ಸ್ಥಾಪಿಸಲ್ಪಟ್ಟ 'ಇಂಡಿಯನ್ ಅಸೋಸಿಯೇಷನ್ ಆಫ್ ಕಲ್ಕತ್ತಾ' – 1876.
8) ಎಂ.ಜಿ. ರಾನಡೆಯವರ ಪೂನಾ ಸಾರ್ವಜನಿಕ ಸಭಾ 1870
9) ವೀರ ರಾಘವಚಾರಿ, ಸುಬ್ರಹ್ಮಣ್ಯ ಅಯ್ಯರ್ & ಆನಂದಚಾರ್ಲುರವರ ಮದ್ರಾಸ್ ಮಹಾಜನಾ ಸಭಾ – 1884
10) ಬದ್ರುದ್ದೀನ್ ತ್ಯಾಬ್ಜಿ, ಫಿರೋಜ್ ಷಾ ಮೆಹತಾ & ಕೆ.ಟಿ.ಹೆಲಾಂಗ್‌ರವರ ಬಾಂಬೆ ಪ್ರೆಸಿಡೆನ್ಸಿ ಅಸೋಸಿಯೇಶನ್ – 1885.

## ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆ:–

- ಬ್ರಿಟೀಷ್ ನಿವೃತ್ತ ICS ಅಧಿಕಾರಿ & ಥಿಯೋಸೋಫಿಸ್ಟ್ ಆಲನ್ ಆಕ್ಟೋವಿಯನ್ ಹ್ಯೂಮ್‌ರವರು 1884 ರಲ್ಲಿ ಭಾರತೀಯ ರಾಷ್ಟ್ರೀಯ ಒಕ್ಕೂಟವನ್ನು & 1885 ರಲ್ಲಿ ಇದೇ 'ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸ್'ಗೆ ಪರಿವರ್ತನೆಗೊಂಡಿತು.
- ಇದರ ಮೊದಲ ಅಧಿವೇಶನವು 27/12/1885 ರಂದು ಉಮೇಶ್ ಚಂದ್ರ ಬ್ಯಾನರ್ಜಿಯವರ ಅಧ್ಯಕ್ಷತೆಯಲ್ಲಿ ಮುಂಬೈಯಲ್ಲಿ ಜರುಗಿತು.
- ಭಾರತದಾದ್ಯಂತ 72 ಪ್ರತಿನಿಧಿಗಳು ಭಾಗವಹಿಸಿದ್ದರು.

### ಗುರಿಗಳು

1) ಪತ್ರಿಕಾ ಸ್ವಾತಂತ್ರ್ಯ
2) ವಿಧಾನಸಭೆಗಳನ್ನು ವಿಸ್ತರಿಸುವುದು, ಪ್ರತಿನಿಧಿತ್ವ ಹೆಚ್ಚಳ
3) ICS ಪರೀಕ್ಷೆಗಳನ್ನು ಭಾರತದಲ್ಲೇ ನಡೆಸುವುದು.
4) ತೆರಿಗೆ ಸಡಿಲ & ಆಮದು ವಸ್ತುಗಳ ತೆರಿಗೆ ಹೆಚ್ಚಳ
5) ಲಂಡನ್‌ನಲ್ಲಿರುವ ಇಂಡಿಯನ್ ಕೌನ್ಸಿಲ್ ಸಭೆ ತೆಗೆದುಹಾಕುವುದು.

- ಭಾರತದ ವೈಸರಾಯ್ ಲಾರ್ಡ್ ಡಫರಿನ್' INC ಸ್ಥಾಪನೆಗೆ ಒಳಸಂಚು ನಡೆಸಿದನೆಂದು ಇತಿಹಾಸಕಾರರ ಅಭಿಪ್ರಾಯ.

## ಮಂದಗಾಮಿಗಳು:– (1885–1905)

ಭಾರತದ ರಾಜಕೀಯದಲ್ಲಿ ಸಂವಿಧಾನಾತ್ಮಕವಾಗಿ ಬದಲಾವಣೆ ತರಬೇಕೆಂದು ಪ್ರತಿಪಾದಿಸುತ್ತಿದ್ದ ಕಾಂಗ್ರೆಸ್ ಮುಖಂಡರನ್ನು 'ಮಂದಗಾಮಿಗಳು' ಎನ್ನುತ್ತಾರೆ.

- M.G. ರಾನಡೆ, ದಾದಾಬಾಯಿ ನೌರೋಜಿ, ಸುರೇಂದ್ರನಾಥ ಬ್ಯಾನರ್ಜಿ, ಬದರುದ್ದೀನ್ ತಯ್ಯಾಬ್ಜಿ, ಗೋಪಾಲಕೃಷ್ಣ ಗೋಖಲೆ, ಫಿರೋಜ್ ಷಾ ಮೆಹ್ತಾ ಇತ್ಯಾದಿ.
- ಇವರು ತಮ್ಮ ಬೇಡಿಕೆ, ವಾದಗಳನ್ನು ಶಾಂತ ರೀತಿಯಲ್ಲಿ ಪತ್ರಗಳ ಮೂಲಕ ಬಗೆಹರಿಸಿಕೊಳ್ಳಲು ಇಚ್ಛಿಸಿದರು.
- ದಾದಾಬಾಯಿ ನೌರೋಜಿಯವರು 'ಸಂಪತ್ತಿನ ಪ್ರವಾಹ ಸಿದ್ಧಾಂತ' (Drain Theory) ಮಂಡಿಸಿದರು.
- ಬ್ರಿಟೀಷರು ಕಾಂಗ್ರೆಸ್‌ನ್ನು 'ರಾಜದ್ರೋಹದ ಕಾರ್ಖಾನೆ' ಎಂತಲೂ ನಾಯಕರನ್ನು 'ವಿದ್ರೋಹಿ ಬ್ರಾಹ್ಮಣರು' & 'ನಿಷ್ಠೆ ಇಲ್ಲದ ಬಾಬು'ಗಳೆಂದು ಕರೆದರು.
  ಇವರ ಪರಿಶ್ರಮದಿಂದಾಗಿ 1892 ಇಂಡಿಯನ್ ಕೌನ್ಸಿಲ್ ಕಾಯ್ದೆ ಜಾರಿಗೆ ಬಂತು. ಪತ್ರಿಕಾ, ಶಸ್ತ್ರಾಸ್ತ್ರ ಕಾಯಿದೆ ರದ್ದುಪಡಿಸಿದರು. ರಾಷ್ಟ್ರ ಪ್ರಜ್ಞೆ, ಸ್ವರಾಜ್ಯ, ಸ್ವದೇಶಿ ಚಳುವಳಿ ಬಿತ್ತಿದರು. ಆಡಳಿತದಲ್ಲಿ ಉನ್ನತ ಹುದ್ದೆಗಳನ್ನು ಭಾರತೀಯರಿಗೆ ದೊರಕಿಸಿಕೊಟ್ಟರು. ಪರೀಕ್ಷೆಗಳು ಏಕಕಾಲಕ್ಕೆ ನಡೆದು 1886 ರಲ್ಲಿ ಲೋಕಸೇವಾ ಆಯೋಗ ಸ್ಥಾಪಿಸಲಾಯಿತು. ಕಾರ್ಯಾಂಗವನ್ನು ನ್ಯಾಯಾಂಗದಿಂದ ಪ್ರತ್ಯೇಕಿಸಿದರು. ಕೃಷಿ ಬ್ಯಾಂಕ್ ಸ್ಥಾಪನೆ (1896). 1906 ರಲ್ಲಿ ಕಲ್ಕತ್ತಾ ಕಾಂಗ್ರೆಸ್ ಸ್ವದೇಶಿ ನಿರ್ಣಯ ಅಂಗೀಕರಿಸಿತು.

## ತೀವ್ರಗಾಮಿಗಳು (1905–1920)

- ಇವರು ಕ್ರಾಂತಿಕಾರಿಗಳು & ಹೋರಾಟದ ಪ್ರವೃತ್ತಿಯುಳ್ಳವರಾಗಿದ್ದವರು. ಆದ್ದರಿಂದ ಇವರನ್ನು 'ತೀವ್ರಗಾಮಿಗಳು & ಕ್ರಾಂತಿಕಾರಿ ರಾಷ್ಟ್ರೀಯವಾದಿ'ಗಳೆಂದು ಕರೆಯಲಾಗಿದೆ.
- ಕಾಂಗ್ರೆಸ್ಸಿನವರ ಒಂದು ಗುಂಪು ಮಂದಗಾಮಿಗಳಲ್ಲಿಯ ನಂಬಿಕೆ ಕಳೆದುಕೊಂಡರು. ಅವರುಗಳೆಂದರೆ, ತಿಲಕರು, ಬಿಪಿನ್ ಚಂದ್ರಪಾಲ್, ಲಾಲಾ ಲಜಪತ್‌ರಾಯ್‌ರು.
- ಲಾರ್ಡ್ ಕರ್ಜನ್ 1905 ರಲ್ಲಿ 'ಬಂಗಾಳದ ವಿಭಜನೆಯನ್ನು' ಮಾಡಿದರು ಪೂರ್ವಬಂಗಾಳ(ಢಾಕಾ) & ಪಶ್ಚಿಮಬಂಗಾಳ(ಕಲ್ಕತ್ತಾ) ವಿಭಜಿಸಿದ.
- 1903 ರಲ್ಲಿ ಡಿಸೆಂಬರ್‌ನಲ್ಲಿ ಬಂಗಾಳದ ವಿಭಜನೆಯನ್ನು ಘೋಷಿಸಲಾಯಿತಾದರೂ ಅದು 1905 ಅಕ್ಟೋಬರ್ 16 ರಂದು ರಾಜ ಘೋಷಣೆಯೊಂದಿಗೆ ಸಾರ್ವಜನಿಕ ಪ್ರಕ್ರಿಯೆಗೆ ವಿರುದ್ಧವಾಗಿ ಜಾರಿಗೆ ಬಂದಿತು(ಒಡೆದು ಆಳುವ ನೀತಿ, ಧರ್ಮದ ಆಧಾರದ ಮೇಲೆ).
- ತಿಲಕ್‌ರು ಈ ವಿಭಜನೆಯನ್ನು ತೀವ್ರವಾಗಿ ವಿರೋಧಿಸಿ **'ಸ್ವರಾಜ್ಯ ನನ್ನ ಆ ಜನ್ಮ ಸಿದ್ಧ ಹಕ್ಕು'**, ಅದನ್ನು ಪಡೆದೇ ತೀರುತ್ತೇನೆ ಎಂದು ಘೋಷಿಸಿದರು.
  'ಕೇಸರಿ' & 'ಮರಾಠ' ಎಂಬ ಪತ್ರಿಕೆಗಳ ಮೂಲಕ ಹಾಗೂ ಗಣೇಶ ಹಬ್ಬ & ಶಿವಾಜಿ ಜಯಂತಿಯನ್ನು ಆಚರಿಸುವುದರ ಮೂಲಕ ಬ್ರಿಟೀಷರ ವಿರುದ್ಧ ಹೋರಾಡಲು ಪ್ರಬಲ ರಾಷ್ಟ್ರೀಯತೆಯನ್ನು ಪ್ರತಿಪಾದಿಸಿದರು.
- ಲಾರ್ಡ್ ಕರ್ಜನ್‌ರು ಬಂಗಾಳವನ್ನು ಪೂರ್ವ ಬಂಗಾಳ & ಅಸ್ಸಾಂನ್ನು ಸೇರಿಸಿ, ಒಂದು ಪ್ರಾಂತ್ಯವನ್ನಾಗಿ, ಬಂಗಾಳ & ಬಿಹಾರನ್ನು ಸೇರಿಸಿ ಒಂದು ಪ್ರಾಂತ್ಯವನ್ನಾಗಿ, ಆಡಳಿತದ ಹಿತದೃಷ್ಟಿಯಿಂದ 2 ಭಾಗಗಳನ್ನಾಗಿ ವಿಂಗಡಿಸಲಾಗುವುದು ಎಂದು ತಿಳಿಸಿದರು.
- ಕಲ್ಕತ್ತಾ ಕಾರ್ಪೊರೇಶನ್ ಆ್ಯಕ್ಟ್ (1899) ಅಫಿಷಿಯಲ್ ಸಿಕ್ರೆಟ್ ಆ್ಯಕ್ಟ್(1904) & ಇಂಡಿಯನ್ ಯುನಿವರ್ಸಿಟಿ ಆ್ಯಕ್ಟ್(1904), ಪ್ರತಿಗಾಮಿ ಕ್ರಮಗಳನ್ನು ಲಾರ್ಡ್ ಕರ್ಜನ್ ಕೈಗೊಂಡರು.
- ಬಂಗಾಳದ ವಿಭಜನೆಯ ವಿರುದ್ಧ 'ವಿದೇಶಿ ವಸ್ತುಗಳ ಬಹಿಷ್ಕಾರ, ಸ್ವದೇಶಿ ವಸ್ತುಗಳ ಬಳಕೆ, ಶಾಲಾ–ಕಾಲೇಜು ಕಛೇರಿಗಳ ಬಹಿಷ್ಕಾರ ತರಹದ ಅನೇಕ ಹಿಂಸಾತ್ಮಕ ಪ್ರತಿಭಟನೆಗಳು ನಡೆದವು. 'ವಂದೇ ಮಾತರಂ' ಗೀತೆಯು ಹಾಡುವುದು ನಿಷೇಧಿಸಲಾಗಿತ್ತು. ಆದರೂ ತಡೆಯಲಾಗಲಿಲ್ಲ.
- ಕೊನೆಗೆ 1911 ಡಿಸೆಂಬರ್ 12 ರಂದು ದೆಹಲಿ ದರ್ಬಾರಿನಲ್ಲಿ (ದೊರೆ 5ನೇ ಜಾರ್ಜ್ ಸಿಂಹಾಸನಕ್ಕೇರಲು ನಡೆದ ಸಭೆಯಲ್ಲಿ– ಬಂಗಾಳದ ವಿಭಜನೆ ರದ್ದುಗೊಳಿಸುವ & ರಾಜಕೀಯ ಖೈದಿಗಳನ್ನು ಬಿಡುಗಡೆ ಮಾಡುವ ವಿಷಯ ಪ್ರಕಟಿಸಲಾಯಿತು.
- ಜನರ ಕ್ರಾಂತಿಕಾರಿ ಪ್ರಕ್ರಿಯೆಗಳಿಂದ ಬ್ರಿಟೀಷರು ಎಷ್ಟು ಗಲಿಬಿಲಿಗೊಂಡರೆಂದರೆ ದೆಹಲಿ ದರ್ಬಾರಿನಲ್ಲಿಯೇ ಕಲ್ಕತ್ತಾದಿಂದ ದೆಹಲಿಗೆ ರಾಜಧಾನಿಯನ್ನು ವರ್ಗಾಯಿಸಿದ್ದು ಘೋಷಿಸಲಾಯಿತು.
  (1905–1910) ಲಾರ್ಡ್ ಮಿಂಟೋ, (1899–1905) ಲಾರ್ಡ್ ಕರ್ಜನ್

## ಮುಸ್ಲೀಂ ಲೀಗ್ ಸ್ಥಾಪನೆ – 1906

- 1906 ರಲ್ಲಿ ಢಾಕಾ ನಗರಕ್ಕೆ ಸೇರಿದ್ದ ನವಾಬ್ 'ಸಲೀಂ ಉಲ್ಲಾಖಾನ್' ಎಂಬುವವರ ಅಧ್ಯಕ್ಷತೆಯಲ್ಲಿ 'ಮುಸ್ಲೀಂ ಲೀಗ್' ಪಕ್ಷ ಸ್ಥಾಪಿಸಲ್ಪಟ್ಟಿತು.

INSTA KAS

Note : For reference purpose only, not for commercial purpose

- ಬ್ರಿಟೀಷರೊಡನೆ ವಿಶ್ವಾಸದಿಂದ ಮುಸ್ಲಿಂಗಾಗಿ ಪ್ರತ್ಯೇಕ ಸ್ಥಾನ ಪಡೆಯುವುದು ಇದರ ಉದ್ದೇಶವಾಗಿತ್ತು.
- ನವಾಬ ಅಗಾಖಾನ್ & ನವಾಬ್ ಮೋಹ್ಸಿನ್ ಉಲ್ ಮುಲ್ಕ್ ಇತರರು ಸೇರಿ 1906 ರಲ್ಲಿ ಮುಸ್ಲಿಂ ಲೀಗ್ ಸ್ಥಾಪಿಸಿದರೆ, ಇದು ಮುಸ್ಲಿಂರಿಗೆ ಪ್ರತ್ಯೇಕ ಮತದಾನ ಹಕ್ಕನ್ನು ಕೋರಿತು.
- ಪಂಜಾಬ್ ಹಿಂದೂ ಮಹಾಸಭಾ 1909 ರಲ್ಲಿ ಸ್ಥಾಪಿತವಾಯಿತು. ಅಖಿಲ ಭಾರತದ ಹಿಂದೂ ಮಹಾಸಭಾದ ಪ್ರಥಮ ಅಧಿವೇಶನ 1909 ರಲ್ಲಿ ಖಾಸೀಂ ಬಜಾರ್‌ನಲ್ಲಿ 'ಮಹಾರಾಜರ' ನೇತೃತ್ವದಲ್ಲಿ ನಡೆಯಿತು. ಇದು IMLನಂತೆ INCಯ ವಿರೋಧಿಯಾಗಿತ್ತು.
- ಸ್ವದೇಶಿ ಚಳುವಳಿ(August 17, 1906): ಸ್ವದೇಶಿ ವಸ್ತುಗಳ ಬಳಕೆ, ವಿದೇಶಿ ವಸ್ತುಗಳ ಬಹಿಷ್ಕಾರ, ಸ್ವರಾಜ್ಯ, ಸ್ವದೇಶಿ, ಬಹಿಷ್ಕಾರ & ರಾಷ್ಟ್ರೀಯ ಶಿಕ್ಷಣ ಇದರ ಉದ್ದೇಶಗಳಾಗಿದ್ದವು. ಸ್ವದೇಶಿ ಚಳುವಳಿಯನ್ನು ನಿಲ್ಲಿಸಲು ಮನವೊಲಿಕೆಗೆ 1909 ರ ಮಿಂಟೋ ಮಾರ್ಲೆ ಸಮಿತಿ ರಚಿಸಲಾಯಿತು.

**ಸೂರತ್ ಒಡಕು(1907)**

ಮಂದಗಾಮಿ & ತೀವ್ರಗಾಮಿ ನಾಯಕರ ನಡುವೆ ಅಧ್ಯಕ್ಷರ ಚುನಾವಣೆ, ನಿರ್ಣಯಗಳ ಜಾರಿಗೆ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿದ್ದವು.

- 1906 ರಲ್ಲಿ INC ಅಧ್ಯಕ್ಷನ ಸ್ಥಾನಕ್ಕೆ ತೀವ್ರಗಾಮಿ ನಾಯಕನನ್ನು ಅಧ್ಯಕ್ಷನಾಗಿ ಮಾಡಲು ಬೇಡಿಕೆ ಇಟ್ಟಿತ್ತು. ಆದರೆ ಎರಡೂ ಗುಂಪುಗಳು ಕೊನೆಗೆ 'ದಾದಾಬಾಯಿ ನೌರೋಜಿ' ಅಧ್ಯಕ್ಷತೆಗೆ ಒಪ್ಪಿಕೊಂಡವು.
- ಆದರೆ ಸ್ವರಾಜ್(ಸ್ವಯಂ ಆಡಳಿತ) ಘೋಷಿಸುವಂತೆ ಮಾಡುವಲ್ಲಿ ತೀವ್ರಗಾಮಿಗಳು ಸಫಲರಾದರು.
- 1907 ರ ಸೂರತ್ ಅಧಿವೇಶನದಲ್ಲಿ ಮತ್ತೆ ಭಿನ್ನಾಭಿಪ್ರಾಯಗಳು ಮೂಡಿದವು.
- ಮಂದಗಾಮಿಗಳ ಗುಂಪು 'ರಾಸ್ ಬಿಹಾರಿ ಘೋಷ್'ರವರನ್ನು & ತೀವ್ರಗಾಮಿಗಳ ಗುಂಪು ಲಾಲಾ ಲಜಪತರಾಯರನ್ನು ಅಧ್ಯಕ್ಷರನ್ನಾಗಿಸಲು ಬಯಸಿ ಒಡಕುಂಟಾಗಿ 'ತಿಲಕ್‌ರು' ತೀವ್ರಗಾಮಿಗಳ ನಾಯಕರಾಗಿ & ಗೋಪಾಲಕೃಷ್ಣ ಗೋಖಲೆ ಮಂದಗಾಮಿಗಳ ನಾಯಕರಾಗಿ ಆರಿಸಲ್ಪಟ್ಟರು. ಇದನ್ನೇ 'ಸೂರತ್ ಒಡಕು' ಎಂದು ಕರೆಯಲಾಗುತ್ತದೆ.
- ತೀವ್ರಗಾಮಿಗಳನ್ನು ಸದೆಬಡಿಯಲು ಬ್ರಿಟೀಷರು ಹಲವು ಕ್ರಮಗಳನ್ನು ಕೈಗೊಂಡರು. ಅವುಗಳೆಂದರೆ, ಸೆಡಿಷಿಯಸ್ ಮೀಟಿಂಗ್ ಆ್ಯಕ್ಟ್(1908), ಇಂಡಿಯನ್ ಪ್ರೆಸ್ ಆ್ಯಕ್ಟ್(1910).
- 1916 ರಲ್ಲಿ A.C. (ಅಂಬಿಕಾ ಚರಣ) ಮಜುಂದಾರ್‌ರು ಅಧ್ಯಕ್ಷತೆಯಲ್ಲಿ ನಡೆದ 'ಲಕ್ನೋ' ಅಧಿವೇಶನದಲ್ಲಿ ತೀವ್ರಗಾಮಿಗಳು & ಮಂದಗಾಮಿಗಳು ಒಂದಾದರು.
- ಈ ಅಧಿವೇಶನದಲ್ಲಿ ನೆಹರೂರವರು ಗಾಂಧೀಜಿಯವರನ್ನು ಮೊಟ್ಟಮೊದಲ ಬಾರಿಗೆ ಭೇಟಿ ಮಾಡಿದರು.
- 'ಕಾಂಗ್ರೆಸ್ & ಮುಸ್ಲಿಂ ಲೀಗ್' ಸ್ವರಾಜ್ಯಗೋಸ್ಕರ' ಪರಸ್ಪರ ಸಹಕರಿಸುವ ಒಪ್ಪಂದಕ್ಕೆ ಸಹಿ ಹಾಕಿದರು.

**ಕ್ರಾಂತಿಕಾರಿಗಳು**

ಬ್ರಿಟೀಷರನ್ನು ಭಾರತದಿಂದ ಹೊರದೂಡಲು ಕ್ರಾಂತಿಕಾರಿಗಳು ಹಿಂಸಾತ್ಮಕ ಮಾರ್ಗ ಅನುಸರಿಸಿದರು. ಚಿಕ್ಕ ಗುಪ್ತ ಗುಂಪುಗಳನ್ನು ಕಟ್ಟಿಕೊಂಡರು.

a) ಚಾಪೇಕ್ ಸಹೋದರರು 1897 ರಲ್ಲಿ ಪ್ಲೇಗ್ ಕಮಿಷನರ್ ರ‍್ಯಾಂಡ್ & ಲೆಫ್ಟಿನೆಂಟ್ ಐಕಿಸ್ಟ್‌ರನ್ನು ಕೊಲೆಗೈದರು.
b) 1908 ರಲ್ಲಿ ಖುದಿರಾಂ ಬೋಸ್ & ಪ್ರಫುಲ್ಲಚುಕ್ಕಿ ಮುಜಾಫರದ ನ್ಯಾಯಾಧೀಶ 'ಕಿಂಗ್ಸ್ ಫೋರ್ಡ್' ರಥದಲ್ಲಿರುವನೆಂದು ತಪ್ಪಾಗಿ ತಿಳಿದ. ಎಸೆದ ಬಾಂಬಿನಿಂದ ಹಲವು ಇಂಗ್ಲೀಷರು ಮರಣ ಹೊಂದಿದರು.
c) ಪುಲಿನ್ ದಾಸ್ 1908 ರಲ್ಲಿ ಭಾರಹ್ ಡಕಾಯಿತಿಗೆ ಕಾರಣರಾದರು.
d) 1912 ರಲ್ಲಿ ದೆಹಲಿಯಲ್ಲಿ ರಾಸ್ ಬಿಹಾರಿ ಬೋಸ್ ಹಾಗೂ ಸಚಿನ್ ಸುನ್ಯಾಲರು ಬಾಂಬ ದಾಳಿಯಿಂದ 'ವೈಸರಾಯ್ ಹಾರ್ಡಿಂಜ್'ರನ್ನು ಗಾಯಗೊಳಿಸಿದರು.
e) ಮದನಲಾಲ್ ಡಿಂಗ್ರಾ 1909 ರಲ್ಲಿ 'ಕರ್ಜನ್ ವೈಲಿ'ನನ್ನು ಲಂಡನ್‌ನ ಕೊಲೆ ಮಾಡಿದರು.
f) ಕೆಲವು ರಹಸ್ಯ ಸಂಘಗಳು.
   1) ಅನುಶೀಲನ್ ಸಮಿತಿ – ಪ್ರೋಮಿತ್ ಮಿಲ್ಲರ್ – ಕಲ್ಕತ್ತಾ.
   2) ಯುಗಾಂತರ್,
   3) ಅಭಿನವ್ ಭಾರತ – ವಿ.ಡಿ.ಸಾವರ್ಕರ್,
   4) ಮಿತ್ರ ಮೇಳ – ವಿ.ಡಿ.ಸಾವರ್ಕರ್

**ಪ್ರಮುಖ ಕ್ರಾಂತಿಕಾರಿಗಳು:–** ಖುದಿರಾಂ ಬೋಸ್, ರಾಂ ಪ್ರಸಾದ್ ಬಿಸ್ಮಿಲಾ, ವಿ.ಡಿ.ಸಾವರ್ಕರ್, ಭಗತ್ ಸಿಂಗ್, ಚಂದ್ರಶೇಖರ ಆಜಾದ್, ರಾಜಗುರು, ಸುಖದೇವ, ಭಾಗಜತಿನಿ ಇತ್ಯಾದಿ.

**ಖಿಲಾಫತ್ ಚಳುವಳಿ – 1919**

1ನೇ ಮಹಾಯುದ್ಧದಲ್ಲಿ ಜರ್ಮನಿ & ಮಿತ್ರರಾಷ್ಟ್ರವಾದ ಟರ್ಕಿ ಸೋಲನುಭವಿಸಿದವು. ಪ್ರಪಂಚದ ಮುಸ್ಲಿಂ ಮುಖಂಡರು 'ಖಲೀಫರು' ಅವಮಾನಿತರಾದರು. ಖಲೀಫರಿಗಾದ ಅವಮಾನದಿಂದ ಬ್ರಿಟೀಷರ ವಿರುದ್ಧ ಜಗತ್ತಿನಾದ್ಯಂತ ಮುಸ್ಲಿಂರು ಕೋಪಗೊಂಡಿದ್ದರು.

- ಭಾರತದಲ್ಲಿ ಅಲಿ ಸಹೋದರರಾದ 'ಶೌಕತ್ ಅಲಿ & ಮಹ್ಮದ್ ಅಲಿ' ಎಂಬುವವರು 'ಖಿಲಾಫತ್ ಚಳುವಳಿಯನ್ನು ಆರಂಭಿಸಿದರು.
- ತಿಲಕ್‌ರು ಹಾಗೂ ಗಾಂಧೀಜಿಯವರು 'ಹಿಂದೂ–ಮುಸ್ಲಿಂ'ರ ಆತ್ಮೀಯರಾಗಲು ಸುವರ್ಣಾವಕಾಶವೆಂದು ಸಂಪೂರ್ಣವಾಗಿ ಬೆಂಬಲಿಸಿದರು. ಮೌಲಾನ್ ಆಜಾದ್, ಅಜಮಲ್ ಖಾನ್, ಹಜರತ್ ಮೊಹನಿ, ಮಾಳವೀಯ, ಅನಿಬೆಸೆಂಟ್, ಎಂ.ನೆಹರೂ ಹಾಗೂ ಬೆಂಬಲಿಸಿದ ಇತರ ನಾಯಕರು.
- ಆಲ್ ಇಂಡಿಯಾ ಖಿಲಾಫತ್ ಸಮಿತಿ ರಚನೆಗೊಂಡು ಇದು ಲಕ್ನೋ, ಬಾಂಬೆಗಳು ಸಭೆ ಸೇರಿತು. ನಾಗಪುರ ಕಾಂಗ್ರೆಸ್ ಅಧಿವೇಶನವು (1920) ಖಿಲಾಫತ್ ಚಳುವಳಿಯನ್ನು ಬೆಂಬಲಿಸಿ ನಿರ್ಣಯ ಹೊರಡಿಸಿತು. 1921 ರಲ್ಲಿ ಕರಾಚಿಯಲ್ಲಿ ಸೇರಿದ ಖಿಲಾಫತ್ ಸಮ್ಮೇಳನವು ಬ್ರಿಟೀಷ್ ಸೈನ್ಯದಲ್ಲಿದ್ದ ತಮ್ಮ ಮುಸ್ಲಿಂ ಸೈನಿಕರಿಗೆ ಹುದ್ದೆ ತ್ಯಜಿಸುವಂತೆ ಕೇಳಿಕೊಂಡಿತು. 1919 ರಲ್ಲಿ ದೆಹಲಿಯಲ್ಲಿ ಕೂಡಿದ ಅಖಿಲ ಭಾರತ ಖಿಲಾಫತ್ ಸಮ್ಮೇಳನವು ಟರ್ಕಿ ಸುಲ್ತಾನನಿಗೆ ಖಿಲಾಫತ್ ಬಿರುದು ಮರಳಿ ಕೊಡುವಂತೆ ಕೇಳಿತು. ಇಲ್ಲವಾದರೆ ಅಸಹಕಾರ ಚಳುವಳಿ ಹೂಡುವುದಾಗಿ ಹೇಳಿದರು.

**ರೌಲತ್ ಕಾಯ್ದೆ – 1919**

- ಖಿಲಾಫತ್ ಚಳುವಳಿಯನ್ನು ತಡೆಯಲು ಬ್ರಿಟೀಷರು ದಮನಕಾರಿಯಾದ 'ರೌಲತ್ ಕಾಯ್ದೆ' ಜಾರಿಗೆ ತಂದಿತು.
- ಈ ಮಸೂದೆಯು ಯಾರನ್ನಾದರೂ ಬಂಧಿಸುವ, ವಿಚಾರಣೆಯಿಲ್ಲದೇ ಸೆರೆಮನೆಗೆ ಕಳಿಸುವ ಅಧಿಕಾರವನ್ನು ಬ್ರಿಟೀಷ್ ಸರಕಾರಕ್ಕೆ ನೀಡಿತು.
- ಭಾರತೀಯರು ಗಾಂಧೀಜಿಯವರ ನಾಯಕತ್ವದಲ್ಲಿ ಈ ಕಾಯ್ದೆಯನ್ನು ವಿರೋಧಿಸಿದರು. ಇದರ ಪರಿಣಾಮ ದೇಶದಲ್ಲಿ 1919 ಏಪ್ರಿಲ್ 16 ರಂದು ಸತ್ಯಾಗ್ರಹ & ಹರಾಕಳ ನಡೆದವು.

INSTA KAS



Note : For reference purpose only, not for commercial purpose

- ಖಿಲಾಫತ್ ಚಳುವಳಿ ವಿಫಲ: 1923 ರಲ್ಲಿ ಟರ್ಕಿ 'ಕೆಮಲ್ ಪಾಷ' ನಾಯಕತ್ವದಲ್ಲಿ ಪ್ರಜಾಪ್ರಭುತ್ವ ರಾಷ್ಟ್ರವಾದಂತೆ, ಇದು ತನ್ನ ಮಹತ್ವ ಕಳೆದುಕೊಂಡಿತು.

**ಜಲಿಯಾನ್ ವಾಲಾಬಾಗ್ ಹತ್ಯಾಕಾಂಡ (1919)**

- 1919 ಏಪ್ರಿಲ್ 13 ರಂದು ಪಂಜಾಬಿನ ಪ್ರಮುಖ ನಾಯಕರಾದ ಡಾ॥ ಸತ್ಯಾಪಾಲ್ & ಡಾ॥ ಸೈ ಪುದ್ದೀನ್ ಕಿಚ್ಲು' ಇವರುಗಳನ್ನು ಬಂಧಿಸಿಟ್ಟರು. (ರೌಲತ್ ಕಾಯ್ದೆ ಪ್ರಕಾರ ಬಂಧಿಸಿದರು).
- ಇದನ್ನು ವಿರೋಧಿಸಿ ಸುಮಾರು 10 ಸಾವಿರ ಜನ 'ಅಮೃತಸರದಲ್ಲಿರುವ ಜಲಿಯಾನ ವಾಲಾಬಾಗ್‌ದಲ್ಲಿ' ಶಾಂತಿಸಭೆ ಸೇರಿದ್ದರು.
- ಈ ಉದ್ಯಾನವು 04 ಕಡೆ ಎತ್ತರದ ಗೋಡೆಗಳಿಂದ ಕಟ್ಟಲ್ಪಟ್ಟಿದ್ದು ಚಿಕ್ಕದಾದ ಪ್ರವೇಶದ್ವಾರವಿತ್ತು. ಅಲ್ಲದೇ ಅಲ್ಲಿ ಒಂದು ಬಾವಿ ಇತ್ತು.
- ಸೇನಾ ದಂಡನಾಯಕನಾದ ಜನರಲ್ ಡಯರ್‌ನು ಪ್ರವೇಶದ್ವಾರವನ್ನು ಮುಚ್ಚಿ ತಮ್ಮ ಸೈನಿಕರೊಡನೆ ಗುಂಡಿನ ಮಳೆಗರೆದನು. ಮಹಿಳೆ, ಮಕ್ಕಳು & ವೃದ್ಧರು ಸೇರಿದಂತೆ ಹಲವಾರು ಜನ ಸತ್ತರು. ಈ ಹತ್ಯಾಕಾಂಡವು ಭಾರತೀಯರನ್ನು ದು:ಖಕ್ಕೀಡು ಮಾಡಿತು. ಜನರಲ್ ಡೈಯರ್‌ನನ್ನು ಬ್ರಿಟೀಷ್ ಸರಕಾರ ಕೇವಲ ಹಿಂದಕ್ಕೆ ಕರೆಸಿಕೊಂಡಿತು & ಯಾವುದೇ ಶಿಕ್ಷೆ ವಿಧಿಸಲಿಲ್ಲ.
- ರವೀಂದ್ರನಾಥ ಠ್ಯಾಗೋರರು ತಮ್ಮ ನೈಟ್ ಹುಡ್ (Knighthood) ಪದವಿಯನ್ನು ತಿರಸ್ಕರಿಸಿದರು.
- ಬ್ರಿಟೀಷ್ ಸರಕಾರ 370 ಜನ ಸತ್ತಿದ್ದು, 1299 ಜನ ಗಾಯಗೊಂಡಿದ್ದಾರೆ ಎಂದು ವರದಿಯಲ್ಲಿ ತಿಳಿಸಿತು. ಆದರೆ ಸತ್ತವರ ಸಂಖ್ಯೆ ಸಾವಿರಕ್ಕಿಂತ ಹೆಚ್ಚಿದ್ದು, ಗಾಯಗೊಂಡವರ ಸಂಖ್ಯೆ ಲೆಕ್ಕಕ್ಕೇ ಇರಲಿಲ್ಲ.
- ಬೈಸಾಕಿ ಹಬ್ಬ ಆಚರಿಸಲಾಗುತ್ತಿತ್ತು. ಇದು ಸಿಖ್ಖರ ಪ್ರಮುಖ ಹಬ್ಬ.
- ಡಯರ್‌ನು 1650 ಸುತ್ತುಗಳ ಗುಂಡು ಹಾರಿಸಿದರ ಬಗ್ಗೆ ತಿಳಿಸಿದನು.

**ಲಿಟ್ಟನಿನ್ ಪ್ರತಿಗಾಮಿ ನೀತಿ:** 1877 ರಲ್ಲಿ ದೆಹಲಿಯಲ್ಲಿ ವಿಕ್ಟೋರಿಯಾ ರಾಣಿಯ ವಜ್ರಮಹೋತ್ಸವವನ್ನು ಅದ್ದೂರಿಯಾಗಿ ಆಚರಿಸಿದನು. ಭಾರತವು ಆಗ ಭೀಕರ ಕ್ಷಾಮದಿಂದ ತತ್ತರಿಸುತ್ತಿತ್ತು. ದುಬಾರಿ ವೆಚ್ಚವನ್ನು ಪತ್ರಿಕೆಗಳು ಟೀಕಿಸಿದಾಗ 1878 ರಲ್ಲಿ ದೇಶೀಯ ಭಾಷಾ ಪತ್ರಿಕಾ ಕಾಯ್ದೆ ಜಾರಿಗೆ ತಂದು ಇವುಗಳ ಮೇಲೆ ಸೇನ್ಸಾರ್ ಶಿಪ್ ಹೇರಿದನು. ಶಸ್ತ್ರಾಸ್ತ್ರ ಕಾಯಿದೆ ಜಾರಿ ಮಾಡಿದ. ICS ವಯಸ್ಸು 21–19ಕ್ಕೆ ಇಳಿಸಿದ. 2ನೇ ಅಫಘನ್ ಯುದ್ಧದ ಖರ್ಚು ಭಾರತದ ಖಜಾನೆಯಿಂದ ಭರ್ತಿ ಮಾಡಿದ ಇತ್ಯಾದಿ.

**ಇಲ್ಬರ್ಟ್ ಬಿಲ್ ವಿವಾದ:** 1883 ಗಿಂತ ಮೊದಲು ಐರೋಪ್ಯ ಪ್ರಜೆಗಳನ್ನು ಭಾರತೀಯ ನ್ಯಾಯಾಧೀಶರು ವಿಚಾರಿಸುವಂತಿರಲಿಲ್ಲ. ಹೀಗಾಗಿ ಉದಾರಿಯಾದ ಲಾರ್ಡ್ ರಿಪ್ಪನ್‌ನ ಕಾನೂನು ಸಲಹೆಗಾರ ಇಲ್ಬರ್ಟ್ ಹೆಸರಿನಲ್ಲಿ ಜಾರಿಗೆ ತಂದ. ಈ ಕಾಯ್ದೆ ಭಾರತೀಯ ಜಡ್ಜ್‌ಗಳು ಐರೋಪ್ಯ ಪ್ರಜೆಗಳನ್ನು ವಿಚಾರಿಸುವ ಅಧಿಕಾರ ನೀಡಿತು. ಆದರೆ ಲಾರ್ಡ್ ಲಿಪ್ಪನ್‌ನ ಐರೋಪ್ಯ ಅತೀವ ಪ್ರತಿರೋದದಿಂದ ಈ ಬಿಲ್‌ನ್ನು ಮಾರ್ಪಾಡು ಮಾಡಿಸಿ ಇವರ ಕೇಸುಗಳ ಅರ್ಧ ವಿಚಾರಣೆಯ ಐರೋಪ್ಯ ಜಡ್ಜ್‌ಗಳಿಂದ ಮಾಡಬೇಕು ಎಂದು ತಿದ್ದುಪಡಿ ಮಾಡಿಸಿದ.

**ಲಕ್ನೋ ಒಪ್ಪಂದ (1916)**

1916 ರಲ್ಲಿ ತಿಲಕ್ ಮತ್ತು ಅನಿಬೆಸೆಂಟರ ಪರಿಶ್ರಮದಿಂದಾಗಿ ಕಾಂಗ್ರೆಸ್ & ಮುಸ್ಲಿಂ ಲೀಗ್‌ಗಳು ಒಂದಾದವು. ಇದೇ ಲಕ್ನೋ ಒಪ್ಪಂದ. ಈ ಒಪ್ಪಂದದ ಪ್ರಕಾರ ಕಾಂಗ್ರೆಸ್ 1909 ರ ಕಾಯಿದೆ ಮುಸ್ಲಿಂರಿಗೆ ಕೊಟ್ಟಿದ ಪ್ರತ್ಯೇಕ ಮತೀಯ ಚುನಾವಣಾ ಕ್ಷೇತ್ರವನ್ನು ಒಪ್ಪಿಕೊಂಡಿತು. ಪ್ರತಿಯಾಗಿ ಮುಸ್ಲಿಂ ಲೀಗ್ ಕಾಂಗ್ರೆಸ್‌ನ ಸ್ವರಾಜ್ಯ ಬೇಡಿಕೆಗೆ ಜೊತೆಯಾಗಿ ಹೋರಾಡಲು ಒಪ್ಪಿತು. ಇದು ಹೋಂ ರೂಲ್ ಚಳುವಳಿ ಚಾಲನೆ ನೀಡಿತು.

**ಹೋಂ ರೂಲ್ ಚಳುವಳಿ**

- ಕನಾಟಕದ ಸಿಂಹ ಎಂದೇ ಹೆಸರಾದ ಗಂಗಾಧರ ದೇಶಪಾಂಡೆ ಹೋಂ ರೂಲ್ ಶಾಖೆಯನ್ನು 'ಧಾರವಾಡ'ದಲ್ಲಿ ತೆರೆದರು.

INSTA KAS

## ಭಾರತದ ಸ್ವಾತಂತ್ರ್ಯ ಚಳುವಳಿ – 2ನೇ ಹಂತ ಗಾಂಧಿಯುಗ (1920–47)

- ಬಾಲ ಗಂಗಾಧರ ತಿಲಕರು 1920 ರಲ್ಲಿ ಮರಣ ಹೊಂದಿದ ನಂತರ ಗಾಂಧೀಜಿಯವರ ನೇತೃತ್ವದಲ್ಲಿ ಭಾರತೀಯ ರಾಷ್ಟ್ರೀಯ ಚಳುವಳಿಯು ಸ್ವಾತಂತ್ರ್ಯಕ್ಕೆ ಮುಂದಾಯಿತು. ಗಾಂಧೀಜಿಯು ಆಫ್ರಿಕಾದ ನೆಟಾಲ್ ಟ್ರಾನ್ಸ್‌ವಾಲ್ ಪ್ರಾಂತ್ಯಗಳು ನೆಲೆಸಿದ್ದ ಭಾರತೀಯ ಸ್ಥಿತಿಗತಿ ಸುಧಾರಿಸಲು, ನೆಟಾಲ್ ಇಂಡಿಯನ್ ಕಾಂಗ್ರೆಸ್ ಸ್ಥಾಪಿಸಿ ಹೋರಾಟಕ್ಕಿಳಿದರು. ಏಷ್ಯಾಟಿಕ್ ಕಾಯಿದೆ ವಿರುದ್ಧ ತಿರುಗಿಬಿದ್ದರು.
- 'ಸ್ವಾತಂತ್ರ್ಯ ಹೋರಾಟದಲ್ಲಿ ಸತ್ಯಾಗ್ರಹ' ಎಂಬ ಪದವನ್ನು ಬಳಸಿದರು.
- ಗಾಂಧೀಜಿಯವರು 1893 ರಿಂದ 1914 ರವರೆಗೆ ದಕ್ಷಿಣ ಆಫ್ರಿಕಾದಲ್ಲಿ ವಕೀಲಿಕೆಯನ್ನು ನಡೆಸಿದರು. ಬೋಯರ್ಸ್ ಕದನದ ವೇಳೆ ಗಾಯಾಳುಗಳ ಶುಶ್ರೂಷೆ ಮಾಡಿ 'ನೈಟ್ ಹುಡ್' (ವಿಕ್ಟೋರಿಯಾ ಪದಕ) ಪಡೆದರು. ಜೋಹನ್ಸ್‌ಬರ್ಗ್‌ನಲ್ಲಿ ಫಿನಿಕ್ಸ್ ಫಾರಸ್ಟಾಯ್, ಟಾಲ್ಸ್ ಟಾಯ್ ಆಶ್ರಮ ನಿರ್ಮಿಸಿದರು(1910).

**ಗಾಂಧೀಜಿ**

ಅಕ್ಟೋಬರ್ 02, 1869 ರಲ್ಲಿ ಪೋರ್‌ಬಂದರ್(ಗುಜರಾತ್)ನಲ್ಲಿ ಜನನ.



Note : For reference purpose only, not for commercial purpose

- 1915 ಕ್ಕೆ ಭಾರತಕ್ಕೆ ವಾಪಸ್ಸು ಬಂದರು. ಇಡೀ ವರ್ಷ ಭಾರತ & ಭಾರತೀಯರ ಪರಿಸ್ಥಿತಿ ಅರ್ಥಮಾಡಿಕೊಳ್ಳಲು ಭಾರತದಾದ್ಯಂತ ಪ್ರವಾಸ ಮಾಡಿದರು.
- 1916 ರಲ್ಲಿ ಸಾಬರಮತಿಯಲ್ಲಿ ಆಶ್ರಮ ಸ್ಥಾಪಿಸಿದರು. ವಾರ್ಧಾ ಬಳಿ ಸೇವಾಗ್ರಾಮವನ್ನು ತೆರೆದರು.

**ಚಂಪಾರಣ ಸತ್ಯಾಗ್ರಹ: (1917)**

- ಗಾಂಧೀಜಿಯವರ ಸತ್ಯಾಗ್ರಹದ ಮೊದಲ ಪ್ರಯೋಗ 1917 ಬಿಹಾರದ ಜಿಲ್ಲೆಯಾದ 'ಚಂಪಾರಣ್ಯ'ದಲ್ಲಿ ಆಯಿತು. ಜಿಲ್ಲೆಯ ನೀಲಿ ತೋಟಗಾರರ ಮೇಲೆ ಯುರೋಪಿನ ಮಾಲೀಕರು, ಅಧಿಕ ಒತ್ತಡ ಹೇರುತ್ತಿದ್ದರು.
- ರೈತರು ತಮ್ಮ ಒಟ್ಟು ಭೂಮಿಯ 3/20 (ತಿನ್‌ಕಾತಿ ಪದ್ಧತಿ) ಭಾಗದಲ್ಲಿ ನೀಲಿ ಬೆಳೆ ಬೆಳೆದು ತೋಟದ ಮಾಲೀಕರು ನಿರ್ಧರಿಸಿದ ಬೆಲೆಗೆ ಮಾರಬೇಕೆಂದು ಬಲತ್ಕರಿಸಲಾಗುತ್ತಿತ್ತು.
- ಇದಕ್ಕೆ ಮೊದಲು ಬಂಗಾಳದಲ್ಲಿ 1859–61ರ ಅವಧಿಯಲ್ಲಿ ನೀಲಿ ಬೆಳೆಗಾರರು ಇಂತಹದೇ ಸಮಸ್ಯೆ ವಿರುದ್ಧ ಪ್ರತಿಭಟನೆ ನಡೆಸಿ ತೋಟಗಳ ಮಾಲೀಕರಿಂದ ಬಿಡುಗಡೆ ಪಡೆದರು. ರೈತರ ಚಳುವಳಿಯನ್ನು 'ಆಧುನಿಕ ಭಾರತದ ಬೃಹತ್ ರೈತರ ಚಳುವಳಿ' ಎಂದು ಪ್ರಸಿದ್ಧಿಯಾಗಿದೆ.
- ಗಾಂಧೀಜಿಯವರಲ್ಲಿಗೆ ಚಂಪಾರಣ ಜನ ಬಂದು ವಿನಂತಿಸಿಕೊಂಡರು. ಆಗ ಗಾಂಧೀಜಿಯವರು ಬಾಬು ರಾಜೇಂದ್ರಪ್ರಸಾದ್, ಮುಝರ್–ಉಲ್–ಹಕ್, J.B. ಕೃಪಲಾನಿ, ನರಹರಿ ಪರೇಖ್ & ಮಹಾದೇವ ದೇಸಾಯಿರೊಂದಿಗೆ ಚಂಪಾರಣ ತಲುಪಿ ರೈತರ ಸಮಸ್ಯೆ ವಿಚಾರಿಸಿ, ಸರ್ಕಾರದ ವಿರುದ್ಧ ಚಳುವಳಿ ನಡೆಸಿ ಗೆಲುವು ಕಂಡರು. (ಮೊದಲ ಕಾಯ್ದೆ ಭಂಗ ಚಳುವಳಿ)
- 1918 ರಲ್ಲಿ ಸರಕಾರ ಚಂಪಾರಣ್ಯ ಕೃಷಿ ಕಾಯಿದೆ ಜಾರಿಗೆ ತಂದು ರೈತರನ್ನು ರಕ್ಷಿಸಿತು.

**ಅಹ್ಮದಾಬಾದ್ ಗಿರಣಿ ಮುಷ್ಕರ:– 1918**

- ಅಹ್ಮದಾಬಾದ್‌ನಲ್ಲಿ ಗಿರಣಿ ಮಾಲೀಕರು & ಕಾರ್ಮಿಕರ ಮಧ್ಯೆ ವೇತನ & ಬೋನಸ್ ಕುರಿತಾಗಿ (ವೇತನ ಶೇ 35. ರೂ. ಹೆಚ್ಚಿಸಲು) ವ್ಯಾಜ್ಯ ತಲೆದೋರಿತು.
- ಗಾಂಧೀಜಿಯವರು ಅಮರಣಾಂತ ಉಪವಾಸ ಕೈಗೊಂಡರು(ಮೊದಲನೇ ಉಪವಾಸ ಸತ್ಯಾಗ್ರಹ) ಉಪವಾಸದ 4ನೇ ದಿನಕ್ಕೆ ಮಾಲೀಕರು ಕಾರ್ಮಿಕರಿಗೆ ವೇತನದ ಪ್ರತಿಶತ 35% ಹೆಚ್ಚಿಸಲು ಒಪ್ಪಿಕೊಂಡರು.

**ಖೇಡಾ ಸತ್ಯಾಗ್ರಹ – 1918**

- 1918 ರಲ್ಲಿ ಗುಜರಾತ್‌ನಲ್ಲಿ ರೈತರು ತೀವ್ರ ಕ್ಷಾಮ ಎದುರಿಸಿದರು. ಸಾಮಾನ್ಯ ಇಳುವರಿಗಿಂತ ¼ ಭಾಗದಷ್ಟು ಕಡಿಮೆ ಬೆಳೆಯ ಇಳುವರಿ ಬಂದಾಗ ಕಂದಾಯ–ಕಾನೂನುಗಳನ್ವಯ ರೈತರು ಕಂದಾಯ ತೆರಿಗೆ ಕಡಿತ ಇಲ್ಲವೇ ವಿನಾಯಿತಿಗೆ ಅರ್ಹರು. ಆದರೆ ಬ್ರಿಟೀಷ್ ಅಧಿಕಾರಿಗಳು ತೆರಿಗೆ ವಿನಾಯಿತಿ ನೀಡಲು ನಿರಾಕರಿಸಿದರು.
- ಗಾಂಧೀಜಿಯು ರೈತರ ನಾಯಕತ್ವ ವಹಿಸಿ ಕಂದಾಯ ಪಾವತಿಸದಿರುವಂತೆ(ಮೊದಲನೆ ಅಸಹಕಾರ ಚಳುವಳಿ) ಹಾಗೂ ಪರಿಣಾಮಗಳನ್ನು ಎದುರಿಸುವಂತೆ ತಿಳಿಸಿದರು. ಅಧಿಕಾರಿಗಳು ಅನಿವಾರ್ಯವಾಗಿ ಪಾವತಿಸಲು ಶಕ್ಯವಿರುವವರಿಂದ ಮಾತ್ರ ಕಂದಾಯ ಸಂಗ್ರಹಿಸಬೇಕಾಯಿತು.
- ಜನಸಮೂಹದೊಂದಿಗೆ ಬೆರೆತು ನಿಕಟ ಸಂಪರ್ಕ ಗಳಿಸಿದ ಪ್ರಥಮ ವ್ಯಕ್ತಿ. 'ಗಾಂಧೀಜಿ'ಯವರಾಗಿದ್ದಾರೆ.

- ಗಾಂಧೀಜಿ ಸ್ವತ: ಮಹದೇವ ದೇಸಾಯಿ, ಇಂದುಲಾಲ್ & ಶಂಕರ್‌ಲಾಲ್‌ರೊಂದಿಗೆ ಸತ್ಯಾಗ್ರಹ ಕೈಗೊಂಡರು.
- ಸರ್ದಾರ್ ವಲ್ಲಭಾಯಿ ಪಟೇಲರು ಸಹ ಸತ್ಯಾಗ್ರಹದಲ್ಲಿ ಪಾಲ್ಗೊಂಡು, ಗಾಂಧೀಜಿಯ ಅನುಯಾಯಿಯಾದರು.

**ಅಸಹಕಾರ ಚಳುವಳಿ (1920–22)**

- ರೌಲತ್ ಶಾಸನ, ಜಲಿಯನ್ ವಾಲಾಬಾಗ್ ಕಗ್ಗೊಲೆ, ಖಿಲಾಫತ್ ಚಳುವಳಿ... ಖಂಡಿಸಿಯಾ, ಮಾಂಟೆಗೂ–ಚೆಮ್ಸ್ ಫರ್ಡ್ ಸುಧಾರಣೆ ಕಾನೂನಿನ ಅನಾನುಕೂಲವನ್ನು ಬ್ರಿಟೀಷರಿಗೆ ಮನವರಿಕೆ ಮಾಡಿಕೊಡಲು 1920 ರಲ್ಲಿ ಕಲ್ಕತ್ತಾದಲ್ಲಿ ನಡೆದ ವಿಶೇಷ ಕಾಂಗ್ರೆಸ್ ಅಧಿವೇಶನದಲ್ಲಿ ಗಾಂಧೀಜಿಯವರು ಅಸಹಕಾರ ಚಳುವಳಿ ನಡೆಸುವುದೆಂದು ಪ್ರಕಟಿಸಿದರು. ನಾಗಪುರ ಅಧಿವೇಶನ ಸಮ್ಮತಿಸಿತು.
- ಇದರ ಪ್ರಕಾರ ಕಾಂಗ್ರೆಸ್ ಪಕ್ಷವು 1920 ರಲ್ಲಿ ಅಸಹಕಾರ ಚಳುವಳಿಯನ್ನು ಪ್ರಾರಂಭಿಸಿತು.
  a) ಮೊದಲನೇ ಹಂತವಾಗಿ ಬ್ರಿಟೀಷರು ನೀಡಿದ ಪದವಿ, ಬಿರುದುಗಳನ್ನು ಹಿಂದಿರುಗಿಸಲಾಯಿತು.
  b) 2ನೇ ಹಂತವಾಗಿ ಉದ್ಯೋಗಗಳನ್ನು ಬಹಿಷ್ಕರಿಸಲಾಯಿತು. ಎಲ್ಲಾ ಸರ್ಕಾರಿ ಕಛೇರಿ, ಶಾಲಾ ಕಾಲೇಜು & ನ್ಯಾಯಾಲಯಗಳ ಕಾರ್ಯ ಕಲಾಪಗಳೆಲ್ಲವನ್ನು ಬಹಿಷ್ಕರಿಸಲಾಯಿತು & ಹಲವು ಪ್ರಮುಖ ನಾಯಕರು ಬಂಧಿಸಲ್ಪಟ್ಟರು.
  c) 3ನೇ ಹಂತ ಪ್ರಮುಖವಾಗಿದ್ದು, & ಕೊನೆಯ ಹಂತ ತೆರಿಗೆ ಪಾವತಿಸದಿರುವ ಚಳುವಳಿಯನ್ನು ಪ್ರಾರಂಭಿಸಲಾಯಿತು.
- 1921 ರಲ್ಲಿ ಅಹಮದಾಬಾದ್‌ನಲ್ಲಿ ನಡೆದ ಕಾಂಗ್ರೆಸ್ ಸಮ್ಮೇಳನದಲ್ಲಿ ಸರಕಾರವು ಬೇಡಿಕೆಗಳನ್ನು ಈಡೇರಿಸುವವರೆಗೂ ಜನರು ಸರಕಾರಕ್ಕೆ ತೆರಿಗೆ ಸಲ್ಲಿಸಬಾರದೆಂಬ ತೀರ್ಮಾನ ಕೈಗೊಳ್ಳಲಾಯಿತು.
- ಉಗ್ರ ಹೋರಾಟಗಳು ತಲೆ ಎತ್ತಿದ್ದವು. ರಾಷ್ಟ್ರವ್ಯಾಪಿಯಾಗಿ ನಡೆದು ಬ್ರಿಟೀಷ್ ಸರಕಾರ ನಡುಗುವಂತಾಯಿತು.

**ಚೌರಿ–ಚೌರಾ ಘಟನೆ –1922**

- ಫೆಬ್ರುವರಿ 05, 1922 ರಂದು ಉತ್ತರಪ್ರದೇಶದ ಚೌರಿ–ಚೌರ ಎಂಬಲ್ಲಿ (ಗೋರಖಪುರ) ಒಂದು ಸಾವಿರ ಜನರ ರೈತರ ಚಳುವಳಿಯ ಮೇಲೆ ಪೊಲೀಸರು ಗುಂಡು ಹಾರಿಸಿದರು. ಇದರಿಂದ ಉದ್ರಿಕ್ತಗೊಂಡ ಜನ ಪೊಲೀಸ್ ಠಾಣೆ ಮುತ್ತಿಸಿ ಬೆಂಕಿ ಹಚ್ಚಿದರು. 22 ಜನ ಪೊಲೀಸರು ಸಜೀವ ಭಸ್ಮವಾದರು.
- ಈ ಘಟನೆಯಿಂದ ಗಾಂಧೀಜಿ ಮನನೊಂದು ಅಸಹಕಾರ ಚಳುವಳಿಯನ್ನು ತಕ್ಷಣವೇ ನಿಲ್ಲಿಸಿಬಿಟ್ಟರು. ಗಾಂಧೀಜಿಯವರು ತಕ್ಷಣವೇ ಬಂಧನಕ್ಕೊಳಗಾದರು.
- ಗುಜರಾತಿನ ಬಾರ್ಡೋಲಿಯಲ್ಲಿ ಸಭೆ ಸೇರಿ(ಫೆಬ್ರವರಿ 12 ರಂದು) ಗಾಂಧೀಜಿಯು ಚಳುವಳಿಯನ್ನು ನಿಲ್ಲಿಸಲು ಸೂಚಿಸಿದರು.

**ಸ್ವರಾಜ್ಯ ಪಕ್ಷ ಸ್ಥಾಪನೆ (1922–25) 1922 ಗಯಾ ಕಾಂಗ್ರೆಸ್ ಅಧಿವೇಶನದಲ್ಲಿ ನಿರ್ಣಯ**

ಗಾಂಧೀಜಿಯವರು ಅಸಹಕಾರ ಚಳುವಳಿಯನ್ನು ಸ್ಥಗಿತಗೊಳಿಸಿದ ರೀತಿ–ನೀತಿಯಿಂದ ಚಿತ್ತರಂಜನ್ ದಾಸ್ & ಮೋತಿಲಾಲ್ ನೆಹರೂರವರು **'ಸ್ವರಾಜ್ಯ ಪಕ್ಷವನ್ನು'** ಸ್ಥಾಪಿಸಿದರು. ರಾಜಾಜಿ & ಡಾ|| ಅನ್ಸಾರಿಯವರು ಇದನ್ನು ವಿರೋಧಿಸಿದರು.

INSTA KAS



Note : For reference purpose only, not for commercial purpose

- ಗಾಂಧೀಜಿಯ ಬಂಧನದ ನಂತರ ಸ್ವಾತಂತ್ರ್ಯ ಚಳುವಳಿಯ ಮುಂದಾಳತ್ವ ವಹಿಸಿತು.
- ಈ ಪಕ್ಷದ ಸದಸ್ಯರು ವಿಧಾನಸಭೆಗಳನ್ನು ಪ್ರವೇಶಿಸಿ ಬ್ರಿಟೀಷ್ ಸರಕಾರದ ವಿರುದ್ಧ ಹೋರಾಡಲು ನಿರ್ಧರಿಸಿದರು.
- 1920 ರಲ್ಲಿ C.R. ದಾಸರ ಮರಣಾನಂತರ ಈ ಪಕ್ಷ ತನ್ನ ಕಾರ್ಯಚಟುವಟಿಕೆಗಳನ್ನು ಸ್ಥಗಿತಗೊಳಿಸಿತು.
- 1923 ರಲ್ಲಿ ಕೇಂದ್ರ ಶಾಸನಸಭೆಗಳಿಗೆ ನಡೆದ ಚುನಾವಣೆಯಲ್ಲಿ 105 ಸ್ಥಾನಗಳಿಗೆ 45ನ್ನು ಪಡೆಯಿತು. ರಾಜ್ಯಾಂಗ ಸುಧಾರಣೆಗೆ ನೇಮಕವಾದ **'ಮಡ್ಡಿಮಾನ್'** ಸಮಿತಿ ರಚನೆ ಸ್ವರಾಜ್ಯ ಪಕ್ಷದ ಸಾಧನೆಯಾಗಿದೆ. ಈ ಪಕ್ಷವು 'ಫಾರ್ವರ್ಡ್' ಎಂಬ ಪತ್ರಿಕೆ ಹೊರಡಿಸಿತು.

### ಸೈಮನ್ ಆಯೋಗ – 1927

1919 ರ ಕಾಯ್ದೆ ಅನುಷ್ಠಾನದ ಬಗ್ಗೆ ತಿಳಿದುಕೊಳ್ಳಲು ಭಾರತದ ಆಡಳಿತ ಅಭಿವೃದ್ಧಿ ಬಗ್ಗೆ ಸೂಚಿಸಲು 07 ಜನರ ಸರ್.ಜಾನ್ ಸೈಮನ್ ನೇತೃತ್ವದಲ್ಲಿ ಸಮಿತಿ ರಚಿಸಿತು. 1928 ರಲ್ಲಿ ಭಾರತಕ್ಕೆ ಬಂದಾಗ ವಿರೋಧಿಸಲಾಯಿತು. ಪಂಜಾಬಿನ ಸಿಂಹ ಲಾಲಾ ಲಜಪತರಾಯ್ ಲಾಠಿ ಚಾರ್ಜ್‌ನಲ್ಲಿ ಮರಣವನ್ನಪ್ಪಿದರು.

### ಲಾಹೋರ ಅಧಿವೇಶನ (1929)

**ನೆಹರೂ ವರದಿ:–** ಭಾರತಕ್ಕೆ ಸೈಮನ್ ಬಂದಾಗ ಉಗ್ರ ಹೋರಾಟಗಳಾದವು. ಆಗ ಮೋತಿಲಾಲ್ ನೆಹರೂ ನೇತೃತ್ವದಲ್ಲಿ ಸಂವಿಧಾನದ ಕರಡನ್ನು ಕಾಂಗ್ರೆಸ್(1928) ರಲ್ಲಿ ರೂಪಿಸಿತು. ಈ ಆಯೋಗವು 'ಸಂಪೂರ್ಣ ಸ್ವಾತಂತ್ರ್ಯ' ಸೂಚಿಸಿತು. ಈ ವರದಿಯನ್ನು ಸರಕಾರ ಗಮನಿಸಲಿಲ್ಲ.

- Md ಜಿನ್ನಾ ಈ ವರದಿಗೆ ತಿದ್ದುಪಡಿ ಸೂಚಿಸಿದರು. ಇದು 14 ಬೇಡಿಕೆ ಎಂದು ಹೆಸರಾಗಿದೆ.
- ಇಂತಹ ಸನ್ನಿವೇಶದಲ್ಲಿ 1929 ರಲ್ಲಿ 'ಲಾಹೋರ್ ಕಾಂಗ್ರೆಸ್ ಅಧಿವೇಶನವು' ನೆಹರೂರವರ ಅಧ್ಯಕ್ಷತೆಯಲ್ಲಿ ಜರುಗಿತು.
- ಈ ಅಧಿವೇಶನ ಗಾಂಧೀಜಿಯವರಿಗೆ ಕಾನೂನು ಭಂಗ ಚಳುವಳಿ ನೇತೃತ್ವ ವಹಿಸುವ ಅಧಿಕಾರ ವಹಿಸಿತು.
- ಅಧಿವೇಶನದಲ್ಲಿ 'ಸಂಪೂರ್ಣ ಸ್ವರಾಜ್ಯವೇ ಗುರಿ' ಎಂದು ಘೋಷಿಸಲಾಯಿತು. 1930 ಜನವರಿ 26 ರಂದು ಭಾರತದ ಸ್ವಾತಂತ್ರ್ಯ ದಿನವೆಂದು ಆಚರಿಸಿತು.

### ಕಾನೂನು ಭಂಗ ಚಳುವಳಿ – (1930–31)

- ಸಂಪೂರ್ಣ ಸ್ವಾತಂತ್ರ್ಯ ಪಡೆಯುವ ಉದ್ದೇಶದಿಂದ ಗಾಂಧೀಜಿ ಈ ಚಳುವಳಿ ಆರಂಭಿಸಿದರು. ಗಾಂಧೀಜಿಯವರಿಗೆ ವೈಸರಾಯ್ ಮುಂದೆ 11 ಬೇಡಿಕೆಗಳನ್ನಿಟ್ಟರು. ಒಪ್ಪಲು ಅಥವಾ ತಿರಸ್ಕರಿಸಲು 31 ಜನರಿ 1930 ರ ಗಡುವು ನೀಡಿದರು.
- ಸಕರಾತ್ಮಕ ಪ್ರತಿಕ್ರಿಯೆ ಬರದಿದ್ದಾಗ ಗಾಂಧೀಜಿಯವರು 1930 ಮಾರ್ಚ್ 12 ರಂದು ಸರೋಜಿನಿ ನಾಯ್ಡು ಸೇರಿದಂತೆ '78' ಜನರೊಂದಿಗೆ ಅಹ್ಮದಾಬಾದ್‌ನ ಸಬರಮತಿ ಆಶ್ರಮದಿಂದ ಪಾದಯಾತ್ರೆ ಆರಂಭಿಸಿ 400 ಕಿ.ಮೀ. ಪ್ರಯಾಣ ಬೆಳೆಸಿ ಗುಜರಾತಿನ ಸಮುದ್ರ ತೀರದಲ್ಲಿರುವ 'ದಂಡಿ'ಯನ್ನು ತಲುಪಿದರು. ಇದನ್ನು 'ದಂಡಿ ಸತ್ಯಾಗ್ರಹ / ಉಪ್ಪಿನ ಸತ್ಯಾಗ್ರಹ' ಎಂದು ಕರೆಯಲಾಗುತ್ತದೆ.
- ದಂಡಿಯಲ್ಲಿ ಸಮುದ್ರದ ನೀರಿನಿಂದ ಉಪ್ಪನ್ನು ತಯಾರಿಸಿ ಏಪ್ರಿಲ್ 06 ರಂದು 'ಉಪ್ಪಿನ ಕಾಯ್ದೆ' ಮುರಿದರು. ಗಾಂಧೀಜಿಯವರನ್ನು ಬಂಧಿಸಿ ಸೆರೆಮನೆಗೆ ಹಾಕಲಾಯಿತು.

### ದುಂಡು ಮೇಜಿನ ಸಮ್ಮೇಳನಗಳು (1930–32)

- ಕಾನೂನು ಭಂಗ ಚಳುವಳಿಯನ್ನು ಬ್ರಿಟೀಷರು ನಿಯಂತ್ರಿಸಲಾಗಲಿಲ್ಲ. ಆದ್ದರಿಂದಲೇ ರಾಜಕೀಯ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ನಿಟ್ಟಿನಲ್ಲಿ ಬ್ರಿಟೀಷ್ ಸರ್ಕಾರ ತೊಡಗಿಕೊಂಡಿತು. ಹೀಗಾಗಿ ಅದು 1930 ಲಂಡನ್‌ನಲ್ಲಿ ಮೊದಲನೇ ದುಂಡು ಮೇಜಿನ ಸಮ್ಮೇಳನ ಏರ್ಪಡಿಸಲಾಯಿತು. INC ಭಾಗವಹಿಸಿದ್ದರಿಂದ ಸಮ್ಮೇಳನ ವಿಫಲವಾಯಿತು.
- ಗಾಂಧೀಜಿ ಹಾಗೂ ಇತರೆ INC ಸದಸ್ಯರನ್ನು ಬ್ರಿಟೀಷರು ಬೇಷರತ್ತಾಗಿ ಜೈಲಿನಿಂದ ಬಿಡುಗಡೆಗೊಳಿಸಿದ್ದರಿಂದ ಫೆಬ್ರವರಿ 14 1931 ರಂದು 'ಗಾಂಧಿ–ಇರ್ವಿನ್' ಒಪ್ಪಂದವಾಯಿತು. ಇದು 'ದೆಹಲಿ ಒಪ್ಪಂದ'ವೆಂದೇ ಹೆಸರಾಗಿದೆ.

### ದ್ವಿತೀಯ ದುಂಡು ಮೇಜಿನ ಸಮ್ಮೇಳನ – 1931

- 2ನೇ ದುಂಡು ಮೇಜಿನ ಸಮ್ಮೇಳನನ 1931 ರಲ್ಲಿ ಲಂಡನ್‌ನಲ್ಲಿ ನಡೆಯಿತು. ಗಾಂಧಿ–ಈರ್ವಿನ್ ಒಪ್ಪಂದದಂತೆ ಗಾಂಧೀಜಿ ಈ ಸಮ್ಮೇಳನಕ್ಕೆ ತೆರಳಿದರು.
- ಗಾಂಧೀಜಿಯವರ ಬೇಡಿಕೆಗಳಾದ ಪೂರ್ಣ ಸ್ವರಾಜ್ಯ, ವರ್ಣಬೇಧ ಸಮಸ್ಯೆಗಳಿಗೆ ಪರಿಹಾರ ಸಿಗಲಿಲ್ಲ. ಗಾಂಧೀಜಿಯವರು ಬೇಸರದಿಂದ ಭಾರತಕ್ಕೆ ಹಿಂದಿರುಗಿದರು. ಒಡನೆಯೇ ಗಾಂಧೀಜಿಯವರನ್ನು ಬಂಧಿಸಲಾಯಿತು. ಕಾಂಗ್ರೆಸ್ ಪಕ್ಷಕ್ಕೆ ತಡೆ ಹಾಕಲಾಯಿತು. ಇದರಿಂದ ಭಾರತದಲ್ಲಿ ಕಾನೂನು ಭಂಗ ಚಳುವಳಿ ಪುನ: ಆರಂಭವಾಯಿತು.

### ಪೂನಾ ಒಪ್ಪಂದ – 1932

- 2ನೇ ದುಂಡು ಮೇಜಿನ ಸಮ್ಮೇಳನದಲ್ಲಿ ಪ್ರಧಾನಿ 'ರಾಮ್ಸೆ ಮ್ಯಾಕ್ ಡೋನಾಲ್ಡ್' ಕೋಮುವಾದ ಪ್ರಾತಿನಿಧ್ಯ ವರದಿ – 1932ನ್ನು ಪ್ರಕಟಿಸಿದನು. ಆ ವರದಿಯಲ್ಲಿ ಅಲ್ಪಸಂಖ್ಯಾತರಿಗೂ, ಪರಿಶಿಷ್ಟ ಜನಾಂಗದವರಿಗೂ, ಪ್ರತ್ಯೇಕ ಮೀಸಲಾತಿ ಪ್ರಕಟಿಸಲಾಯಿತು.
- ಈ ಯೋಜನೆ ಪರಿಶಿಷ್ಟ ನೇತರರಾದ 'ಅಂಬೇಡ್ಕರ್'ರವರನ್ನು ಸ್ವಾಗತಿಸಿದರು. ಇದನ್ನು ಒಪ್ಪದೇ ಗಾಂಧೀಜಿ 'ಯಾರವಾಡ' ಜೈಲಿನಲ್ಲಿ ಅಮರಣಾಂತ ಉಪವಾಸ ಸತ್ಯಾಗ್ರಹ ಕೈಗೊಂಡರು.
- 1932 ರಲ್ಲಿ ಅಂಬೇಡ್ಕರ್‌ರವರೊಂದಿಗೆ **'ಪೂನಾ ಒಪ್ಪಂದ'** ಏರ್ಪಟ್ಟಿತು. ಇದರಂತೆ ಪ್ರತ್ಯೇಕ ಮೀಸಲಾತಿಯನ್ನು ಕೈಬಿಟ್ಟು, ಮೀಸಲಾತಿ ಪ್ರಾತಿನಿಧ್ಯವನ್ನು ಹೆಚ್ಚಿಸಲಾಯಿತು.

### 3ನೇ ದುಂಡು ಮೇಜಿನ ಸಮ್ಮೇಳನ – 1932

- (ಲಂಡನ್) ಕಾಂಗ್ರೆಸ್ ಈ ಸಮ್ಮೇಳನದಲ್ಲಿ ಭಾಗವಹಿಸಲಿಲ್ಲವಾದ್ದರಿಂದ ಈ ಸಮ್ಮೇಳನಕ್ಕೆ ಸೋಲಾಯಿತು.

### 1935 ರ ಭಾರತ ಸರ್ಕಾರ ಕಾಯ್ದೆ:–

- ಸೈಮನ್ ವರದಿ & 03 ದುಂಡು ಮೇಜಿನ ಸಮ್ಮೇಳನಗಳಲ್ಲಿ ಕೈಗೊಂಡು ತೀರ್ಮಾನಗಳ ಆಧಾರದ ಮೇಲೆ ರಚಿಸಲ್ಪಟ್ಟಿತು.

### 1937 ರ ಚುನಾವಣೆ:–

- 1935 ರ ಕಾಯ್ದೆಯನ್ನು ಸಂಪೂರ್ಣವಾಗಿ ತಿರಸ್ಕರಿಸಲು ಕಾಂಗ್ರೆಸ್ ಈ ಚುನಾವಣೆಯಲ್ಲಿ ಭಾಗವಹಿಸಿತು. ಕಾಂಗ್ರೆಸ್ ಚುನಾವಣೆಯಲ್ಲಿ ಬ್ರಿಟೀಷ್‌ರ 11 ಪ್ರಾಂತ್ಯಗಳಲ್ಲಿ 07 ಪ್ರಾಂತ್ಯ ಗೆದ್ದು ಅಧಿಕಾರಕ್ಕೆ ಬಂತು. ಇನ್ನು 02 ಪ್ರಾಂತ್ಯಗಳಲ್ಲಿ ಸಮ್ಮಿಶ್ರ ಸರಕಾರ ರಚನೆಯಾಯಿತು.
- ತನ್ನೆಲ್ಲಾ ಮಿತಿಗಳೊಂದಿಗೆ ಕಾಂಗ್ರೆಸ್ ತುರ್ತು ಅಧಿಕಾರ ನೀಡುವ ಕಾನೂನುಗಳ ವಾಪಾಸಾತಿ, ವಿವಿಧ ಸಂಘಟನೆಗಳಿಗೆ ವಿಧಿಸಿದ್ದ

INSTA KAS



Note : For reference purpose only, not for commercial purpose

ನಿಷೇಧ ಹಿಂಪಡೆಯುವಿಕೆ, ಗುಪ್ತದಳ(CID)ದಿಂದ ರಾಜಕಾರಣಿಗಳ ನಿಗಾ ವಹಿಸುವಿಕೆ ತಡೆ, ಪತ್ರಿಕೆಗಳ ನಿರ್ಬಂಧಗಳ ಮೇಲೆ ರದ್ದತಿ, ಮುಂತಾದ ಸುಧಾರಣೆಗಳನ್ನು ತರುವಲ್ಲಿ ಯಶಸ್ವಿಯಾಯಿತು.

- 1939 ರಲ್ಲಿ ದ್ವಿತೀಯ ಜಾಗತಿಕ ಯುದ್ಧದಲ್ಲಿ ಬ್ರಿಟೀಷರು ಭಾರತೀಯರ ಒಪ್ಪಿಗೆ ಇಲ್ಲದೇ ಭಾರತವು ಮಿತ್ರ ರಾಷ್ಟ್ರಗಳ ಪರವಾಗಿ ಯುದ್ಧದಲ್ಲಿ ಭಾಗವಹಿಸುವುದೆಂದು ಘೋಷಿಸಿದರು. ಇದನ್ನು ವಿರೋಧಿಸಿ 1939 ರಲ್ಲಿ ಕಾಂಗ್ರೆಸ್ ಎಲ್ಲಾ ಮಂತ್ರಿಮಂಡಳಗಳಿಗೆ ರಾಜೀನಾಮೆ ನೀಡಿತು.
- ಮಹ್ಮದ್ ಅಲಿ ಜಿನ್ನಾ ಇದನ್ನು ಸ್ವಾಗತಿಸಿ ಅವರು ಆ ದಿನವನ್ನು 1939 ಡಿಸೆಂಬರ್ 22ನ್ನು ಸ್ವಾತಂತ್ರ್ಯ ದಿನವನ್ನಾಗಿ ಆಚರಿಸಿದರು. ಮುಸ್ಲೀಂರಿಗೆ ಪ್ರತ್ಯೇಕ ರಾಷ್ಟ್ರ ಅಗತ್ಯವೆಂದು ಹೇಳಿದರು.
- ಗಾಂಧೀಜಿಯವರು ಬ್ರಿಟೀಷರ ವಿರುದ್ಧ ವೈಯಕ್ತಿಕ ಸತ್ಯಾಗ್ರಹ ಆರಂಭಿಸಿದರು. ಹೀಗಾಗಿ ಬ್ರಿಟೀಷರು ಭಾರತೀಯರ ನಡುವೆ ಭಿನ್ನಾಭಿಪ್ರಾಯವನ್ನುಂಟು ಮಾಡಲು ಪ್ರಯತ್ನಿಸಿದರು.
- 23 ಮಾರ್ಚ್ 1940 ರಂದು ಲಾಹೋರ್‌ನಲ್ಲಿ ನಡೆದ ಮುಸ್ಲೀಂ ಲೀಗ್ ಪಕ್ಷದ ಅಧಿವೇಶನದಲ್ಲಿ ಪಾಕಿಸ್ತಾನದ ಬೇಡಿಕೆಯನ್ನಿಟ್ಟರು. (PAKISTAN) (P–ಪಂಜಾಬ್, A–ಅಫಘಾನಿಸ್ತಾನ, K–ಕಾಶ್ಮೀರ, S–ಸಿಂಧ್ & TAN– ಬಲೂಚಿಸ್ಥಾನ)

### ಆಗಸ್ಟ್ ಕೊಡುಗೆ – 1940

- ಬ್ರಿಟೀಷ್ ಸರಕಾರದ ಪ್ರತಿನಿಧಿ 'ಲಿನ್‌ಲಿತ್‌ಗೋ' 02 ಜಾಗತಿಕ ಯುದ್ಧದ ನಂತರ ಭಾರತಕ್ಕೆ ಸಂವಿಧಾನ ರಚನಾ ಸಭೆ ಸ್ಥಾಪಿಸಲು ಅವಕಾಶ ನೀಡುವುದಾಗಿ ಇತ್ಯಾದಿ. 1940 ರ ಆಗಸ್ಟ್ ತಿಂಗಳಲ್ಲಿ ಪ್ರಕಟಿಸಿದನು. ಇದೇ 'August Offer'(ಆಗಸ್ಟ್ ಕೊಡುಗೆ) ಆಗಿದೆ. ಇದನ್ನು ನಿರಾಕರಿಸಿತು.
- ಅಟ್ಲಾಂಟಿಕ್ ಪ್ರಣಾಳಿಕೆ (1914 Aug 04): ಬ್ರಿಟನ್ ಪ್ರಧಾನಿ ಚರ್ಚಿಲ್‌ರವರು ಅಟ್ಲಾಂಟಿಕ್ ಸಾಗರದ ಹಡಗಿನಲ್ಲಿ ಅಮೇರಿಕಾದ ಅಧ್ಯಕ್ಷ ರೂಸವೆಲ್ಟ್‌ರನ್ನು ಭೇಟಿಯಾಗಿ ಚಾರ್ಟರ್‌ಗೆ ಸಹಿ ಹಾಕಿ ಯುದ್ಧದಲ್ಲಿ ಭಾರತೀಯರ ನೆರವು ಯಾಚಿಸಿ, ಭಾರತೀಯರು ಯಾವ ತರಹದ ಮಾದರಿ ಸರ್ಕಾರ ಬಯಸುತ್ತಾರೋ ಆ ಹಕ್ಕು ನೀಡುವುದಾಗಿ ಹೇಳಿದ. ಕಾಂಗ್ರೆಸ್ ಪ್ರಜಾಪ್ರಭುತ್ವ ಬಯಸಿದ್ದಕ್ಕೆ ಈ ಅಟ್ಲಾಂಟಿಕ್ ಪ್ರಣಾಳಿಕೆ ತತ್ವ ಐರೋಪ್ಯ ರಾಷ್ಟ್ರಗಳಿಗೆ ಅನ್ವಯಿಸಲ್ಲ ಎಂದು ನಿರಾಸೆಗೊಳಿಸಿದ.
- ಕ್ರಿಫ್ಸ್ ರಾಯಭಾರ ಸಮಿತಿ – 1942
  ಬ್ರಿಟೀಷ್ ಸರ್ಕಾರ ಜಪಾನ್ ವಿರುದ್ಧವಾಗಿ ಭಾರತದ ನೆರವನ್ನು ಪಡೆಯಲು, ಭಾರತದ ರಾಜಕೀಯ ಸಮಸ್ಯೆಗಳು, ಪರಿಹಾರ ಕಾಣಲು 1942 ರಲ್ಲಿ ಸರ್ 'ಸ್ಟಾಪೋರ್ಡ್ ಕ್ರಿಫ್ಸ್' ರವರ ನಾಯಕತ್ವದಲ್ಲಿ 'ಕ್ರಿಫ್ಸ್ ರಾಯಭಾರ ಸಮಿತಿಯನ್ನು' ಭಾರತಕ್ಕೆ ಕಳಿಸಿತು. ಈ ಸಮಿತಿಯು ಯುದ್ಧದ ನಂತರ ಭಾರತಕ್ಕೆ 'ಡೋಮಿನಿಯನ್ ಸ್ಟೇಟಸ್' ನೀಡಲಾಗುವುದೆಂದು ತಿಳಿಸಿತು.
- ಗಾಂಧೀಜಿಯವರು ಈ ಸಮಿತಿಯ ಶಿಫಾರಸ್ಸನ್ನು 'ದಿವಾಳಿಯಾಗುತ್ತಿರುವ ಬ್ಯಾಂಕಿಂಗ್ ಮುಂದಿನ ದಿನಾಂಕದ ಚೆಕ್ಕನ್ನು ನೀಡಿದಂತಾಯಿತು' ಎಂದು ಟೀಕಿಸಿದರು. ಈ ಸಮಿತಿಗೆ ಸೋಲುಂಟಾಯಿತು.
- ಯುದ್ಧ ಮುಗಿದ ನಂತರ ಭಾರತದ ಒಕ್ಕೂಟವನ್ನು ರಚಿಸಲಾಗುವುದು. ಭಾರತದ ಒಕ್ಕೂಟದಲ್ಲಿ ಸೇರುವ/ಬಿಡುವ ಸ್ವತಂತ್ರ ಆಯಾ ರಾಜ್ಯಗಳಿಗೆ ಬಿಟ್ಟಿದ್ದು.
- ಸರ್ವಪಕ್ಷಗಳು ಸಭೆ/ರಚಿಸಿದ ಸಂವಿಧಾನ ಒಪ್ಪುವುದು. ಯುದ್ಧ ಖಾತೆ ಉಳಿದು, ಉಳಿದ ಖಾತೆಗಳು ಭಾರತೀಯರ ಕೈಯಲ್ಲಿರುವುದು.

### ಭಾರತ ಬಿಟ್ಟು ತೊಲಗಿ ಚಳುವಳಿ – 1942

INC ಯ 1942 August 08 ರಂದು ಬಾಂಬೆಯಲ್ಲಿ ಸಭೆ ಸೇರಿ 'ಭಾರತ ಬಿಟ್ಟು ತೊಲಗಿ' ಠರಾವನ್ನು ಸ್ವೀಕರಿಸಿ ಗಾಂಧೀಜಿಯವರನ್ನು ನೇತೃತ್ವ ವಹಿಸಲು ಕೋರಿತು.

- ಗಾಂಧೀಜಿಯವರು ಮಾಡು ಇಲ್ಲವೇ ಮಡಿ (Do or Die) ಎಂಬ ಪ್ರಸಿದ್ಧ ಘೋಷಣೆ ನೀಡಿದರು.
- ಮಹ್ಮದ್ ಅಲಿ ಜಿನ್ನಾ ಮುಸ್ಲೀಂರಿಗೆ ಈ ಚಳುವಳಿಯಲ್ಲಿ ಭಾಗವಹಿಸದಂತೆ ಕರೆ ನೀಡಿದನು.
- ಸರ್ಕಾರ ತಕ್ಷಣವೇ(9 Aug) ಗಾಂಧೀಜಿ ಸೇರಿದಂತೆ ಎಲ್ಲಾ ಕಾಂಗ್ರೆಸ್ ನಾಯಕರನ್ನು ಬಂಧಿಸಿತು. ನಾಯಕರಿಲ್ಲದೇ ಜನತೆ ತಮಗಿಷ್ಟ ಬಂದಂತೆ ವರ್ತಿಸತೊಡಗಿ ಹಿಂಸಾಚಾರಕ್ಕೆ ಕಾರಣವಾಯಿತು.
- 2ನೇ ಮಹಾಯುದ್ಧವು 1945 ರಲ್ಲಿ ಕೊನೆಗೊಂಡು ಯುದ್ಧದ ನಂತರ ಇಂಗ್ಲೇಂಡಿನಲ್ಲಿ ಕ್ಲೈಮೆಂಟ್ ಆಟ್ಲಿ ಅಧ್ಯಕ್ಷತೆಯ 'ಲೇಬರ್ ಪಕ್ಷ' ಸರ್ಕಾರ ರಚಿಸಿತು. ಆಟ್ಲಿಯು ಭಾರತಕ್ಕೆ ಸ್ವಾತಂತ್ರ್ಯಕ್ಕಾಗಿ ಸಮಿತಿಯನ್ನು ರಚಿಸಿದನು.
- (ಕ್ರಿಪ್ಸ್ ಸಲಹೆಗಳನ್ನು ಗಾಂಧೀಜಿ ತೀವ್ರವಾಗಿ ವಿರೋಧಿಸಿದ್ದರಿಂದ ಮಹಾಂಕಾರಿ ಚರ್ಚಿಲ್‌ರು ಗಾಂಧೀಜಿಯವರನ್ನು ಕುರಿತು ವ್ಯಂಗ್ಯವಾಗಿ 'ಅರೆಚಿತ್ತತೆಯ ಫಕೀರ' ಎಂದು ಟೀಕಿಸಿದನು).

## ನೇತಾಜಿ ಸುಭಾಷ್ ಚಂದ್ರ ಬೋಸ್

- ಜನನ – Jan 23, 1897 ಒರಿಸ್ಸಾದ ಕಟಕ್, ತಂದೆ–ಜಾನಕಿನಾಥ್ ಬೋಸ್, ತಾಯಿ–ಪ್ರಭಾವತಿ.
- 1927 ರಲ್ಲಿ INC ಸೇರಿದರು.
- 1938 ರಲ್ಲಿ INC ಅಧ್ಯಕ್ಷರಾದರು.
- 1939 ರಲ್ಲಿ ಫಾರ್ವರ್ಡ್ ಬ್ಲಾಕ್ ಪಕ್ಷ ಸ್ಥಾಪಿಸಿದರು.
- ಕಲ್ಕತ್ತಾದಲ್ಲಿ ಗೃಹಬಂಧನದಲ್ಲಿಟ್ಟಾಗ Jan 26 1941 ರಂದು ಅಫಘಾನಿಸ್ತಾನದ ಮುಖಾಂತರ ಭೂಗತರಾಗಿ, 'ಜರ್ಮನಿಗೆ' ಹೋದರು. ಭಾರತದ ಸ್ವಾತಂತ್ರ್ಯಕ್ಕಾಗಿ 'ಹಿಟ್ಲರ್ & ಮುಸೊಲೋನಿ' ಸಹಾಯ ಕೇಳಿದರು.
- ಜರ್ಮನಿಯಿಂದ ಜಪಾನ್‌ಗೆ ಜಲಾಂತರ್ಗಾಮಿಯಾಗಿ ತೆರಳಿದರು. ಅಲ್ಲಿ ರಾಸ್ ಬಿಹಾರಿ ಬೋಸ್ ಎಂಬ ಕ್ರಾಂತಿಕಾರಿಯ ಸಹಾಯ ಪಡೆದು ಆಗ್ನೇಯ ಏಷ್ಯಾ ದೇಶ ವಾಸಿಸುತ್ತಿದ್ದ ಹಾಗೂ ಮಲೇಷಿಯಾ, ಬರ್ಮಾ, ಸಿಂಗಾಪುರಗಳಲ್ಲಿ ಜಪಾನಿಯರಿಗೆ ಶರಣಾದ ಭಾರತೀಯ ಸೈನಿಕರನ್ನು(ಬ್ರಿಟೀಷ್ ಸೈನ್ಯದಲ್ಲಿರುವರು) ಸೇರಿಸಿಕೊಂಡು ಸು.60, ಸಾವಿರ ಸೈನಪಡೆ ನಿರ್ಮಿಸಿ ಅದಕ್ಕೆ (Indian National Army (I.N.A) ಎಂದು ಹೆಸರಿಟ್ಟರು. ಈ ಸೇನೆಯ ಮಹಿಳಾ ವಿಭಾಗದಲ್ಲಿ 'ಕ್ಯಾಪ್ಟನ್ ಲಕ್ಷ್ಮಿ' ನಾಯಕಿಯಾಗಿದ್ದಳು.
- ಜೈ ಹಿಂದ್ & ದೆಹಲಿ ಚಲೋ' ನೇತಾಜಿಯವರ ಪ್ರಸಿದ್ಧ ಘೋಷಣೆಗಳಾಗಿವೆ. INA ಲಾಂಛನ ಹುಲಿ, ಜರ್ಮನಿಯಲ್ಲಿ ಹಿಟ್ಲರ್‌ನ ಸಹಾಯ ಪಡೆದ ಅಲ್ಲಿ ಯುದ್ಧ ಖೈದಿಗಳಾಗಿದ್ದ 3,500ಜನ ಭಾರತೀಯರನ್ನು ಬಿಡಿಸಿ ಸೇನೆ ಕಟ್ಟಿದರು. ಮುಸೊಲೋನಿ ಸಹಾಯ ಪಡೆದು, 'ಯುಬೋಟ್' ಜಲಾಂತರ್ಗಾಮಿ ಹಡಗಿನಲ್ಲಿ ಜಪಾನಿಗೆ ತೆರಳಿದ.
- 2ನೇ ಮಹಾಯುದ್ಧದಲ್ಲಿ ಜಪಾನ್ ಸೋಲಲ್ಪಟ್ಟಿತು. ಆದ್ದರಿಂದ ನೇತಾಜಿ ಬ್ಯಾಕಾಂಕ್‌ನಿಂದ ಟೋಕಿಯೋಗೆ ತಪ್ಪಿಸಿಕೊಂಡು ಓಡಿ ಹೋಗುವಾಗ ಮಾರ್ಗ ಮಧ್ಯೆಯಲ್ಲಿ ಮರಣ ಹೊಂದಿದರು. ಕಲ್ಕತ್ತಾ ನ್ಯಾಷನಲ್ ಕಾಲೇಜಿನ ಪ್ರಿನ್ಸಿಪಾಲರಾಗಿ, ಕಲ್ಕತ್ತಿನ ಕಾರ್ಪೊರೇಷನ್ ಮೇಯರ್ ಆಗಿ ಸೇವೆ ಮಾಡಿದ್ದರು.
- I.N.A ಸೈನಿಕರು 1943 ರಲ್ಲಿ ಅಂಡಮಾನ್ & ನಿಕೋಬಾರ್ (ಸ್ವಾತಂತ್ರ್ಯ ಹೋರಾಟದಲ್ಲಿ ಹುತಾತ್ಮರಾದವರಿಗೆ 'ಶಾಹೀದ್' &

INSTA KAS



Note : For reference purpose only, not for commercial purpose

ಸ್ವರಾಜ್ಯ 'ದ್ವೀಪಗಳೆಂದು ಹೆಸರಿಡಲಾಯಿತು). ದ್ವೀಪಗಳಲ್ಲಿ ತ್ರಿವರ್ಣ ಧ್ವಜ ಹಾರಿಸಿತು. 1944 ರಲ್ಲಿ ಭಾರತದ ಗಡಿ ಪ್ರವೇಶಿಸಿ ಕೋಹಿಮಾ & ಇಂಫಾಲ್‌ಗಳನ್ನು ವಶಪಡಿಸಿಕೊಂಡಿತು. 10 ಸಾವಿರ ಚದುರ ಮೈಲುಗಳ ಮಣಿಪುರ ಪ್ರದೇಶವನ್ನು ಸ್ವತಂತ್ರಗೊಳಿಸಿದರು.

- ಬ್ರಿಟೀಷರು ದೇಶದ್ರೋಹದ ಆರೋಪದ ಮೇಲೆ I.N.A ಸೈನಿಕರನ್ನು ಬಂಧಿಸಿತು. ಪ್ರಥಮ ವಿಚಾರಣೆಯು ದೆಹಲಿಯ ಕೆಂಪು ಕೋಟೆಯಲ್ಲಿ ನಡೆಯಿತು. ಇದು 'I.N.A ಟ್ರಯಲ್ಸ್' ಎಂದು ಪ್ರಸಿದ್ಧಿಯಾಗಿದೆ. ಭಾರತೀಯರ ತೀವ್ರ ವಿರೋಧದ ನಡುವೆ I.N.A ಸೈನಿಕರನ್ನು ಗಲ್ಲಿಗೇರಿಸಲಿಲ್ಲ. ಷನವಾಜ್ ಖಾನ್ ನೇತೃತ್ವದಲ್ಲಿ I.N.A ಪಡೆ ಫೆಬ್ರವರಿ 04, 1944 ರಂದು ಬರ್ಮಾ ಗಡಿ ದಾಟಿ ಭಾರತದ ಮೇಲೆ ದಾಳಿಯಿಟ್ಟಿತು. ಕೊಹಿಮಾ, ಇಂಫಾಲ್, ಮೌದಕ್, ಕಾಕಿನಾಡ್ I.N.A ವಶವಾದವು. 'ಟೋಜೋ'ರವರು ಜಪಾನಿನ ಪ್ರಧಾನಿಯಾಗಿದ್ದರು.
- ಮಂತ್ರಿಮಂಡಲ ರಾಯಭಾರ ಸಮಿತಿ – 1946. 1946 ರಲ್ಲಿ ಫೆತಿಕ್ ಲಾರೆನ್ಸ್, ಎ.ವಿ. ಅಲೆಕ್ಸಾಂಡರ್, ಸರ್ ಸ್ಟ್ಯಾಫೊರ್ಡ್ ಕ್ರಿಪ್ಸ್ 03 ಸದಸ್ಯರನ್ನೊಳಗೊಂಡ ಕ್ಯಾಬಿನೆಟ್ ಸಮಿತಿಯು ಒಕ್ಕೂಟ ಸರ್ಕಾರದ ರಚನೆಯ ಶಿಫಾರಸ್ಸನ್ನು ಮಾಡಿತು. ರಾಜಕೀಯ ನಿರ್ಣಯ ಸಭೆ ಆಯ್ಕೆ ಮಾಡಿ ಭಾರತದ ಸಂವಿಧಾನ ರಚನೆ ಆಗಬೇಕೆಂದು ಹಾಗೂ ಅದರ ರಚನೆ ಆಗುವವರೆಗೂ ಸರ್ವಪಕ್ಷಗಳ ಪ್ರತಿನಿಧಿಗಳನ್ನೊಳಗೊಂಡ 'ಮಧ್ಯಂತರ ಸರ್ಕಾರ' ಕೇಂದ್ರದಲ್ಲಿ ರಚನೆ ಆಗಬೇಕೆಂದು ತಿಳಿಸಿತು.
- ನೆಹರೂರವರನ್ನು ಪ್ರಧಾನಿಯನ್ನಾಗಿಸಿ ಮಧ್ಯಂತರ ಸರ್ಕಾರವು 1946 ರಲ್ಲಿ ರಚನೆಗೊಂಡಿತು. ಸರ್ಕಾರ ರಚಿಸಲು, ನೆಹರೂ ಜಿನ್ನಾ ಸಹಾಯ ಕೋರಿದರು. ಆದರೆ ಜಿನ್ನಾ ನಿರಾಕರಿಸಿದರು. ಆದ್ದರಿಂದ ಭಾರತದ ವಿಭಜನೆ ಅನಿವಾರ್ಯವಾಯಿತು. ಜಿನ್ನಾ ಆಗಸ್ಟ್ 16, 1946 ರಂದು ಮುಸ್ಲಿಂರು ನೇರ ಕಾರ್ಯಾಚರಣೆ ದಿನ (Direct Action Day) ಆಚರಿಸಬೇಕೆಂದು ಹೇಳಿದರು.
- 'ಲೇಕರ್ ರಹೆಂಗೆ ಪಾಕಿಸ್ತಾನ್' ಲೀಗಿನ ಘೋಷಣೆಯಾಯ್ತು. ಇದರ ಪರಿಣಾಮವಾಗಿ ಅನೇಕ ಕಡೆ ಕೋಮು ಗಲಭೆ, ರಕ್ತಪಾತ, ಕೊಲೆ & ಸುಲಿಗೆಗಳು ಉಂಟಾದವು.

### ಬ್ಯಾಟನ್ ಯೋಜನೆ – 1947 (ಜೂನ್ ಪ್ಲಾನ್)

ಬ್ರಿಟೀಷ್ ಸರಕಾರದ ಕೊನೆಯ ಗೌರ್ನರ್. ಇವರು 1947 ಜೂನ್ 03 ರಂದು ಒಂದು ಪ್ರಮುಖ ಪ್ರಕಟಣೆ ಪ್ರಕಟಿಸಿದರು. ಇದು 'ಬ್ಯಾಟನ್ ಪ್ಲಾನ್ ಅಥವಾ ಜೂನ್ ಪ್ಲಾನ್' ಎಂದು ಹೆಸರಾಗಿದೆ.

- ಈ ಯೋಜನೆಯಂತೆ ಭಾರತವು ಭಾರತ ಯುನಿಯನ್ ಎಂದೂ, ಪಾಕಿಸ್ತಾನ ಯೂನಿಯನ್ ಎಂದು 02 ಭಾಗಗಳಾಗಿ, 02 ರಾಷ್ಟ್ರಗಳಾಗಿ ವಿಂಗಡಣೆ ಎಂಬುದಾಗಿತ್ತು.
- ಇದನ್ನು ಬ್ರಿಟನ್ ಸಂಸತ್ತಿನಲ್ಲಿ 05 ಜುಲೈ 1947 ರಂದು ಮಂಡಿಸಲಾಯಿತು. ಹಾಗೂ ಜುಲೈ 18 ರಂದು 'ಭಾರತದ ಸ್ವಾತಂತ್ರ್ಯ ಕಾಯ್ದೆ–1947' ಎಂದು ಊರ್ಜಿತವಾಯಿತು.
- ಭಾರತ & ಪಾಕಿಸ್ತಾನ ನಡುವೆ ರ್‍ಯಾಡ್‌ಕ್ಲಿಫ್ ರೇಖೆಯು ಗಡಿಯನ್ನು ಗುರುತಿಸುತ್ತದೆ.
- 14 ಆಗಸ್ಟ್ 1947 ರಂದು ಪಾಕಿಸ್ತಾನ್ ಹಾಗೂ 15 ಆಗಸ್ಟ್ 1947 ರಂದು ಭಾರತ ಸ್ವಾತಂತ್ರ್ಯಗೊಂಡವು.
- ಜವಾಹರಲಾಲ್ ನೆಹರು ಪ್ರಥಮ ಪ್ರಧಾನಿ ಹಾಗೂ ಲಾರ್ಡ್ ಮೌಂಟ್ ಬ್ಯಾಟನ್ ಪ್ರಥಮ ಗವರ್ನರ್ ಜನರಲ್ ಆದರು. ನಂತರ ಸ್ವತಂತ್ರ ಭಾರತದ ಗವರ್ನರಾಗಿ ಸಿ.ರಾಜಗೋಪಾಲಾಚಾರಿ ಆಯ್ಕೆಯಾದರು.
- ಗಾಂಧೀಜಿಯು 15 ಆಗಸ್ಟ್ 1947 ರಂದು ಸ್ವಾತಂತ್ರ್ಯಗೊಳ್ಳುವಾಗ ಕಲ್ಕತ್ತಾದಲ್ಲಿ ಗಲಭೆಗಳ ನಿಯಂತ್ರಿಸಲು, (ಜನರ ನಿಯಂತ್ರಿಸಲು) ಹೋಗಿದ್ದರು.
- ಭಾರತದಲ್ಲಿ ಒಟ್ಟು 565 ಸ್ವದೇಶಿ ಸಂಸ್ಥಾನಗಳಿದ್ದವು. 562 ವಿಲೀನಗೊಂಡವು. ಕಾಶ್ಮೀರ, ಜುನಾಗಡ್, ಹೈದ್ರಾಬಾದ್ ಸಂಸ್ಥಾನಗಳು ವಿಲೀನವಾಗಲು ನಿರಾಕರಿಸಿದವು.
ಸರ್ದಾರ್ ಪಟೇಲರು ತಮ್ಮ ರಾಜಕೀಯ ಚಾಣಾಕ್ಷತನದಿಂದ ಆ ಪ್ರಾಂತ್ಯಗಳನ್ನು ಭಾರತದೊಡನೆ ವಿಲೀನಗೊಳಿಸಿಕೊಂಡರು. 'ಭಾರತದ ಬಿಸ್ಮಾರ್ಕ್, ಉಕ್ಕಿನ ಮನುಷ್ಯ' ಎಂದು ಇವರನ್ನು ಕರೆಯಲಾಗುತ್ತದೆ.
- ಬಲೂಚಿಸ್ತಾನದ ಫಕ್ತೂನಿ ಪಂಗಡದ ಮುಸ್ಲಿಂರು ಪ್ರತ್ಯೇಕ 'ಫಕ್ತೂನಿ' ರಾಷ್ಟ್ರ ಬೇಕೆಂಬ ಬೇಡಿಕೆಯಿಟ್ಟರು. ಆದರೆ ಖಾನ್ ಗಫರ್ ಅಬ್ದುಲ್ ಖಾನ್ ವಿರೋಧದಿಂದ ಪಾಕಿಸ್ತಾನದಲ್ಲೇ ಉಳಿಯಿತು.

### ಫ್ರೆಂಚ್ ಭಾಗಗಳ ವಿಲೀನಗೊಳಿಸುವಿಕೆ – 1954

- ಫ್ರೆಂಚ್ ಸರಕಾರದ ಅನುಮತಿಯೊಡನೆ ಪಾಂಡಿಚೇರಿ, ಕಾರೈಕಲ್, ಮಾಹೆ, ಏನಾಂ ಮತ್ತು ಚಂದ್ರನಾಗೂರ್‌ಗಳನ್ನು 1954ರಲ್ಲಿ ವಿಲೀನಗೊಳಿಸಿಕೊಳ್ಳಲಾಯಿತು.

### ಪೋರ್ಚುಗೀಸರ ಭಾಗಗಳ ವಿಲೀನ – 1961.

- ಗೋವಾ, ದಿಯು & ದಾಮನ್ ಪೋರ್ಚುಗೀಸರ ವಶದಲ್ಲಿದ್ದವು. ಈ ಭಾಗದ ಜನರು ವಿಲೀನವಾಗಲು ಇಚ್ಛಿಸಿದರು. ಆದ್ದರಿಂದ ಸೇನಾ ಕಾರ್ಯಾಚರಣೆಯ ಮೂಲಕ 1961 ರಲ್ಲಿ ವಿಲೀನಗೊಳಿಸಿಕೊಳ್ಳಲಾಯಿತು.

### ಇತರೆ ಮಾಹಿತಿ:

ಯುರೋಪಿನಲ್ಲಿ ಹಾಲೆಂಡ್ ಹೊರತುಪಡಿಸಿ ಉಳಿದ ಎಲ್ಲಾ ದೇಶಗಳು ಭಾರತೀಯ ಬಟ್ಟೆಗಳ ಆಮದನ್ನು ನಿಷೇಧಿಸಿದ್ದವು ಅಥವಾ ಅಧಿಕ ಸುಂಕ ವಿಧಿಸಿದವು.

- 1813 ರಲ್ಲಿ ಬ್ರಿಟೀಷರು ಅಂತಿಮವಾಗಿ ಭಾರತೀಯ ವ್ಯಾಪಾರದ ಏಕಸ್ವಾಮ್ಯವನ್ನು ರದ್ದುಗೊಳಿಸುವಲ್ಲಿ ಯಶಸ್ವಿಯಾದರು.
- 1824 ರಲ್ಲಿ ಭಾರತೀಯ ಹತ್ತಿ ಬಟ್ಟೆಗಳ ಮೇಲೆ ಶೇ 67.5 & ಮಸ್ಲಿನ್ ಬಟ್ಟೆಗಳ ಮೇಲೆ ಶೇ. 37.5 ರಷ್ಟು ಸುಂಕ ವಿಧಿಸಲಾಗಿತ್ತು. ಸಕ್ಕರೆ ಮೇಲೆ ಅದರ ಮೂಲ ವೆಚ್ಚಕ್ಕಿಂತ 03 ಪಟ್ಟು ಅಧಿಕವಾಗಿ ಸುಂಕ ನೀಡಬೇಕಾಗಿತ್ತು.
- ಚೀನಾ ಅಫೀಮು ವಿಷಯುಕ್ತವಾದುದರಿಂದ ಅದು ನಿಷೇಧಿಸಿತ್ತು. ಆದರೆ ಬ್ರಿಟೀಷರು ಭಾರತದ ಅಫೀಮು ಚೀನಾ ದೇಶಕ್ಕೆ ಮಾರಾಟ ಪ್ರೋತ್ಸಾಹಿಸಿದರು. ಆದರೆ ಸ್ವತ: ತಾವೇ ಅಫೀಮಿನ ಆಮದನ್ನು ಕಠಿಣವಾಗಿ ನಿಷೇಧಿಸಿಕೊಂಡಿದ್ದರು.
- ಕಲ್ಕತ್ತಾದಿಂದ ದೆಹಲಿಯವರೆಗೆ ಗ್ರಾಂಡ್ ಟ್ರಂಕ್‌ನ ರೋಡ್‌ನ ಕೆಲಸವನ್ನು 1839 ರಲ್ಲಿ ಪ್ರಾರಂಭಿಸಿ 1850 ರಲ್ಲಿ ಪೂರ್ಣಗೊಳಿಸಿದರು.
- ಜಾರ್ಜ್ ಸ್ಟಿಫನ್ ಸನ್ ವಿನ್ಯಾಸಗೊಳಿಸಿದ ಮೊದಲು ರೈಲ್ವೇ ಇಂಜಿನ್‌ನ್ನು 1814 ರಲ್ಲಿ ಹಳಿಗಳ ಮೇಲೆ ಬಿಡಲಾಯಿತು.
- ಭಾರತದಲ್ಲಿ ರೈಲ್ವೆ ನಿರ್ಮಾಣಕ್ಕೆ ಮೊದಲ ಸಲಹೆಯು 1831 ರಲ್ಲಿ ಮದ್ರಾಸ್‌ನಲ್ಲಿ ದೊರೆಯಿತು.
- ಭಾರತದಲ್ಲಿ ಉಗಿ ಚಾಲಿತ ರೈಲ್ವೆಗಳ ನಿರ್ಮಾಣಕ್ಕೆ ಇಂಗ್ಲೆಂಡ್‌ನಲ್ಲಿ 1834 ರಲ್ಲಿ ಪ್ರಸ್ತಾಪಿಸಲಾಯಿತು.
- ಬೊಂಬಾಯಿಯಿಂದ ಠಾಣಾವರೆಗೆ ಚಲಿಸುವ ಮೊದಲು ರೈಲನ್ನು 1853 ರಲ್ಲಿ ಸಂಚಾರಕ್ಕೆ ಬಿಡಲಾಯಿತು.
- ಅಂಚೆ ತಂತಿ ವ್ಯವಸ್ಥೆ – ಕಲ್ಕತ್ತಾದಿಂದ ಆಗ್ರಾಕ್ಕೆ 1853 ರಲ್ಲಿ ಮೊದಲ ತಂತಿ ಮಾರ್ಗ.

INSTA KAS



Note : For reference purpose only, not for commercial purpose

- ಲಾರ್ಡ್ ಡಾಲ್‌ಹೌಸಿಯು ಅಂಚೆ ಚೀಟಿಗಳನ್ನು ಜಾರಿಗೆ ತಂದ.
- ವಾರನ್ ಹೇಸ್ಟಿಂಗ್ಸ್‌ನು ಭೂ ಕಂದಾಯವನ್ನು ಸಂಗ್ರಹಿಸುವ ಹಕ್ಕನ್ನು ಹೆಚ್ಚು ಹರಾಜು ಕೂಗಿದವರಿಗೆ ನೀಡಿದ.
- ಲಾರ್ಡ್ ಕಾರ್ನ್‌ವಾಲಿಸ್‌ನು 1973 ರಿಂದ ಬಂಗಾಳ & ಬಿಹಾರಗಳಲ್ಲಿ ಖಾಯಂ ಜಮೀನ್ದಾರಿ ಪದ್ಧತಿ ಜಾರಿಗೆ ತಂದನು.
- ಈ ಪದ್ಧತಿಯನ್ನು ಮುಂದೆ ಓರಿಸ್ಸಾ, ಮದ್ರಾಸ್‌ನ ಉತ್ತರ ಜಿಲ್ಲೆಗಳು & ವಾರಣಾಸಿ ಜಿಲ್ಲೆಗಳಿಗೂ ವಿಸ್ತರಿಸಲಾಯಿತು.

**ರೈತವಾರಿ ಪದ್ಧತಿ:–** ರಿಡ್ & ಹೆಕ್ಕರ್ ಮನ್ರೋ ನೇತೃತ್ವದ ಮದ್ರಾಸ್ ಅಧಿಕಾರಿಗಳು. ಈ ಪದ್ಧತಿಯನ್ನು ಮದ್ರಾಸ್ & ಬೊಂಬಾಯಿ ಪ್ರಾಂತ್ಯಗಳಲ್ಲಿ ಮೊದಲಿಗೆ ಜಾರಿ ತಂದರು.

**ಮಹಲ್ವಾರಿ ಪದ್ಧತಿ:–** ಮಹಲ್–ತಾಲ್ಲೂಕು ಎಂದರ್ಥ.

- ಗಂಗಾನದಿ ಬಯಲುಪ್ರದೇಶ ವಾಯುವ್ಯಪ್ರಾಂತ್ಯ, ಮಧ್ಯಭಾರತದ ಕೆಲವು ಭಾಗಗಳು & ಪಂಜಾಬ್‌ಗಳಲ್ಲಿ ಜಾರಿಗೊಳಿಸಲಾಯಿತು.
- ಪರಿಷ್ಕೃತ ಜಮೀನ್ದಾರಿ ಪದ್ಧತಿಯ ಒಪ್ಪಂದವನ್ನೆ 'ಮಹಲ್ವಾರಿ ಪದ್ಧತಿ' ಎಂದು ಕರೆಯಲಾಗಿದೆ. ಇದರಲ್ಲಿ ಮಹಲ್‌ದಾರರು ರೈತರ ಜೊತೆಗೂಡಿ ಕಂದಾಯ ಪಾವತಿ ಮಾಡುವ ಜಂಟಿ ಜವಾಬ್ದಾರಿ ಹೊಂದಿದರು.
- ಪಂಜಾಬ್‌ನಲ್ಲಿ ಮಹಲ್ವಾರಿ ಪದ್ಧತಿಯ ಪರಿಷ್ಕೃತ ರೂಪವಾದ ಗ್ರಾಮಪದ್ಧತಿಯನ್ನು ಜಾರಿಗೆ ತರಲಾಯಿತು.
- ಜಮೀನ್ದಾರಿ ಪದ್ಧತಿಯ ತರಹ ರೈತರು ಶೋಷಣೆಗೆ ಒಳಗಾಗಲಿಲ್ಲ.

**ನಾಗರಿಕ ಸೇವೆಗಳು**

- ಲಾರ್ಡ್ ಕಾರ್ನ್‌ವಾಲೀಸ್‌ನು ನಾಗರಿಕ ಸೇವೆಗಳನ್ನು ಭಾರತದಲ್ಲಿ ಜಾರಿಗೆ ತಂದನು.
- 1800 ರಲ್ಲಿ ಲಾರ್ಡ್ ವೆಲ್ಲೆಸ್ಲಿಯು ICS ಸೇರಬಯಸುವ ತರುಣರ ಶಿಕ್ಷಣಕ್ಕಾಗಿ ಕಲ್ಕತ್ತಾದ ಪೋರ್ಟ್ ವಿಲಿಯಂ ಕಾಲೇಜು ಸ್ಥಾಪಿಸಿದನು.
- 1806 ರಲ್ಲಿ ಬದಲಿಗೆ, ತಮ್ಮದೇ ಆದ ಈಸ್ಟ್ ಇಂಡಿಯಾ ಕಾಲೇಜನ್ನು 'ಇಂಗ್ಲೇಂಡ್‌ನ ಹೈಲಬರಿಯಲ್ಲಿ' ಆರಂಭಿಸಿದರು.
- 1853 ರವರೆಗೆ ICS ಗೆ ಸೇರಿದ ಎಲ್ಲಾ ನೇಮಕಾತಿಗಳನ್ನು ಈಸ್ಟ್ – ಇಂಡಿಯಾ ಕಂಪೆನಿಯ ನಿರ್ದೇಶಕರೇ ಮಾಡಿದರು. ಈ ICS ಯಿಂದ ಭಾರತೀಯರನ್ನು ಸಂಪೂರ್ಣವಾಗಿ ಹೊರಗಿಡಲಾಯಿತು. ಕಾರಣ 1793 ರಲ್ಲಿ ವಾರ್ಷಿಕ 500 ಪೌಂಡ್ ಗಳಿಗಿಂತ ಹೆಚ್ಚು ವೇತನದ ಆಡಳಿತದ ಹುದ್ದೆಗಳನ್ನು ಇಂಗ್ಲೀಷರೇ ಹೊಂದಿರತಕ್ಕದು ಎಂದು ಅಧಿಕೃತವಾಗಿ ಆದೇಶಿಸಲಾಯಿತು.
- 1853 ರಲ್ಲಿ ICS ನೇಮಕಾತಿ ಎಲ್ಲವೂ ಸ್ಪರ್ಧಾತ್ಮಕ ಪರೀಕ್ಷೆ ಮೂಲಕವೇ ಆಯ್ಕೆ ಮಾಡಬೇಕು ಎಂದು ಶಾಸನಬದ್ಧ ತೀರ್ಮಾಯಿತು.
- ಲಾರ್ಡ್ ಕಾರ್ನ್‌ವಾಲೀಸ್‌ನು ಭಾರತದಲ್ಲಿ ಪೊಲೀಸ್ ಇಲಾಖೆಯನ್ನು ಸ್ಥಾಪಿಸಿದನು.
- 1791 ರಲ್ಲಿ ಜೋನಾಥನ್ ಡಂಕ್‌ನು ಹಿಂದೂ ಕಾನೂನು & ತತ್ವಶಾಸ್ತ್ರದ ಅಧ್ಯಯನಕ್ಕೆಂದು ವಾರಣಾಸಿಯಲ್ಲಿ ಸಂಸ್ಕೃತ ಕಾಲೇಜನ್ನು ಆರಂಭಿಸಿದ.
- 1854 ರ ಚಾರ್ಲ್ಸ್‌ವುಡ್ ನಮೂದು ಭಾರತದ ಶಿಕ್ಷಣ ಅಭಿವೃದ್ಧಿಗೆ ತೆಗೆದುಕೊಂಡ ಮಹತ್ವದ ಹೆಜ್ಜೆ. ಸರ್ಕಾರವು ಎಲ್ಲಾ ಸಂಸ್ಥಾನಗಳಲ್ಲೂ ಶಿಕ್ಷಣ ಇಲಾಖೆಯನ್ನು ಆರಂಭಿಸಿತು. 1857 ರಲ್ಲಿ ಕಲ್ಕತ್ತಾ, ಬೊಂಬಾಯಿ, ಮದ್ರಾಸ್, ಪ್ರಾಂತ್ಯಗಳಲ್ಲಿ ಅಂಗೀಕೃತ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲಾಯಿತು. ಬಂಗಾಳದ ಪ್ರಸಿದ್ಧ ಕಾದಂಬರಿಕಾರನಾದ ಬಂಕಿಂ ಚಂದ್ರ ಚಟರ್ಜಿಯು ಕಲ್ಕತ್ತಾ ವಿಶ್ವವಿದ್ಯಾಲಯದಿಂದ 1858 ರಲ್ಲಿ ಪದವಿ ಪಡೆದ ಮೊದಲಿಗರಲ್ಲಿ ಒಬ್ಬರಾಗಿದ್ದಾರೆ.

**ಡೆರಜಿಯೋ & ತರುಣ ಬಂಗಾಳ**

- ಆಂಗ್ಲೋ ಇಂಡಿಯನ್ ಹೆನ್ರಿ ವಿವಿಯನ್ ಡೆರೆಜಿಯೊ ತರುಣ ಬಂಗಾಳದ ಮುಖ್ಯಸ್ಥ. ಆಧುನಿಕ ಭಾರತದ ಮೊಟ್ಟ ಮೊದಲ ದೇಶಭಕ್ತ ಕವಿ. 'ಬಂಗಾಳದ ಬುದ್ಧಿ ಜೀವಿಗಳ ಸಂಘ'.
- 1821 ರಲ್ಲಿ ತೀವ್ರ ಸುಧಾರಣಾವಧಿ ಮನೋಭಾವದ ಕಾರಣ ಈತನನ್ನು ಹಿಂದೂ ಕಾಲೇಜು ಕೆಲಸದಿಂದ ತೆಗೆದು ಹಾಕಿತು.
- 22ನೇ ವಯಸ್ಸಿನಲ್ಲಿ ಕಾಲರ ರೋಗದಿಂದ ತೀರಿಕೊಂಡ.
- ಈ ಗುಂಪನ್ನು ಡೆರೋಜಿಯನ್ನರು ಎನ್ನುತ್ತಾರೆ.
- ಸುರೇಂದ್ರನಾಥ ಬ್ಯಾನರ್ಜಿಯವರು 'ಬಂಗಾಳದ ಆಧುನಿಕ ಸಂಸ್ಕೃತಿಯ ಆದ್ಯ ಪ್ರವರ್ತಕರ' ಎಂದಿದ್ದಾರೆ.

**ದೇವೇಂದ್ರನಾಥ ಟ್ಯಾಗೋರ್**

- ರವೀಂದ್ರನಾಥ ಟ್ಯಾಗೋರರ ತಂದೆ. ಇವರು ಬ್ರಹ್ಮಸಮಾಜವನ್ನು ಪುನಶ್ಚೇತನಗೊಳಿಸಿದರು.
- 1829 ರಲ್ಲಿ R.R.M. ರಾಯರ್ ಅಭಿಪ್ರಾಯಗಳನ್ನು ಪ್ರಚಾರ ಮಾಡುವ ಸಲುವಾಗಿ 'ತತ್ವಬೋಧಿನಿ ಸಭಾ' ಸ್ಥಾಪಿಸಿದರು. 'ತತ್ವಬೋಧಿನಿ ಪತ್ರಿಕಾ'ವು ಭಾರತದ ಗತಕಾಲದ ವ್ಯವಸ್ಥಿತ ಅಧ್ಯಯನವನ್ನು ಬಂಗಾಳಿ ಭಾಷೆಯಲ್ಲಿ ಪ್ರಸ್ತುತ ಪಡಿಸಿದರು.
- 1843 ದೇವೇಂದ್ರನಾಥರು ಬ್ರಹ್ಮಸಮಾಜವನ್ನು ಪುನರ್ ಸಂಘಟನೆ ಮಾಡಿದರು.

**ಈಶ್ವರಚಂದ್ರ ವಿದ್ಯಾಸಾಗರ**

- 1820 ರಲ್ಲಿ ಜನನ. 1851 ರಲ್ಲಿ ಸಂಸ್ಕೃತ ಕಾಲೇಜಿನ ಪ್ರಾಂಶುಪಾಲರ ಪದವಿಗೆ ಏರಿದರು.
- ಬಂಗಾಳಿಯಲ್ಲಿ ಪ್ರಾಥಮಿಕ 'ಬಾಲಬೋಧೆ'ಯೊಂದನ್ನು ಬರೆದರು. ಅದು ಇಂದಿಗೂ ಬಳಕೆಯಲ್ಲಿದೆ.
- ರಾಜರಾಮಮೋಹನ್‌ರಾಯ್‌ರ ಯೋಗ್ಯ ಉತ್ತರಾಧಿಕಾರಿ ಎಂದು ಇವರಿಗೆ ಕರೆಯಲಾಗುತ್ತದೆ.
- 1856 ಡಿಸೆಂಬರ್ 07 ರಂದು ಕಲ್ಕತ್ತಾದಲ್ಲಿ ಕಾನೂನುಬದ್ಧ ವಿಧವಾ ಪುನರ್ ವಿವಾಹವನ್ನು ಇವರ ಮಾರ್ಗದರ್ಶನದಲ್ಲಿ ಆಚರಿಸಲಾಯಿತು.
- 1855–60 ರ ನಡುವೆ 25 ವಿಧವಾ ಪುನರ್ ವಿವಾಹಗಳನ್ನು ಮಾಡಿಸಿದರು. ಅಲ್ಲದೇ ಕಾನೂನು ಬದ್ಧಗೊಳಿಸಲು ಅವಿರತವಾಗಿ ಶ್ರಮಿಸಿದರು.
- 1849 ಕಲ್ಕತ್ತಾದಲ್ಲಿ ಬೆಥ್ಯುನ್ ಶಾಲೆಯು ಸ್ಥಾಪಿಸಿದರು & ಇದು 1840–50 ನಡುವಿನ ಅವಧಿಯಲ್ಲಿ ಮಹಿಳಾ ಶಿಕ್ಷಣದ ಸಲುವಾಗಿ ನಡೆದ ಪ್ರಬಲ ಚಳುವಳಿಯ ಮೊದಲ ಫಲ.
- ಪಶ್ಚಿಮ ಬೊಂಬಾಯಿಯಲ್ಲಿ ಮೊದಲ ಸುಧಾರಕರಲ್ಲಿ 'ಬಾಲಶಾಸ್ತ್ರಿ ಜಂಬೇಕರ್' ಒಬ್ಬರು.
  ಇವರು 1832 ರಲ್ಲಿ 'ದರ್ಪಣ್' ಎಂಬ ವಾರಪತ್ರಿಕೆಯನ್ನು ಆರಂಭಿಸಿದರು.
- 1849 ಮಹಾರಾಷ್ಟ್ರದಲ್ಲಿ 'ಪರಮಹಂಸ ಮಂಡಳಿ' ಸ್ಥಾಪಿಸಿದರು. 'ಪೂನಾ, ಸತಾರಾ'ಗಳಲ್ಲಿ ಶಾಖೆಗಳಾದವು.
- ಗೋಪಾಲ್ ಹರಿ ದೇಶಮುಖ್ – 'ಲೋಕಹಿತವಾದಿ' ಎಂಬ ಕಾವ್ಯನಾಮದಿಂದ ಪ್ರಸಿದ್ಧರು(ಬಾಂಬೆ ಸುಧಾರಕರು).

**1858ರ ನಂತರ ಭಾರತದ ವ್ಯವಸ್ಥೆ**

INSTA KAS



Note : For reference purpose only, not for commercial purpose

- ಕೇಂದ್ರ & ಪ್ರಾದೇಶಿಕ ಅರ್ಥ ವ್ಯವಸ್ಥೆಯನ್ನು ಪ್ರತ್ಯೇಕಿಸುವ ನಿಟ್ಟಿನಲ್ಲಿ ಮೊದಲ ಹೆಜ್ಜೆ ಇಟ್ಟವನು 'ಲಾರ್ಡ್ ಮೆಯೋ'( 1870)
- ಸ್ಥಳೀಯ ಸಂಸ್ಥೆಗಳನ್ನು 1864–68ರ ನಡುವಿನ ಅವಧಿಯಲ್ಲಿ ರಚಿಸಲಾಯಿತು.
- ಲಾರ್ಡ್ ರಿಪ್ಪನ್‌ರು ಸ್ಥಳೀಯ ಸಂಸ್ಥೆಗಳಲ್ಲಿ ಹಲವು ಬದಲಾವಣೆ ತಂದನು.
- 1857 ರ ಬಂಡಾಯದಲ್ಲಿ ಭಾಗವಹಿಸಿದ ಪ್ರಾಂತ್ಯಗಳ ಸೈನಿಕರನ್ನು ಯುದ್ಧೋಚಿತರಲ್ಲವೆಂದು ಸೈನ್ಯಕ್ಕೆ ಭರ್ತಿ ಮಾಡಿಕೊಳ್ಳುತ್ತಿರಲಿಲ್ಲ.
- ಬಂಡಾಯ ದಮನಕ್ಕೆ ನೆರವಾಗಿದ್ದ ಪಂಜಾಬಿಗಳ ಗೂರ್ಖರು, ಪಠಾಣರನ್ನು ಬಹುಸಂಖ್ಯೆಯಲ್ಲಿ ಸೈನ್ಯದಲ್ಲಿ ನೇಮಿಸಿಕೊಂಡರು.
- 1875 ರ ವೇಳೆಗೆ ಪಂಜಾಬಿನಿಂದ ಬ್ರಿಟೀಷ್ ಭಾರತದ ಅರ್ಧಭಾಗ ಸೈನ್ಯಕ್ಕೆ ಭರ್ತಿ ಮಾಡಿಕೊಳ್ಳಲಾಗುತ್ತಿತ್ತು.
- ಲಂಡನ್‌ನಲ್ಲಿ ಪ್ರತಿವರ್ಷ ICS ಪರೀಕ್ಷೆಗಳು ನಡೆಯುತ್ತಿದ್ದವು. 1863 ರಲ್ಲಿ ಮೊದಲಿಗೆ ರವೀಂದ್ರನಾಥ ಟ್ಯಾಗೋರರ ತಮ್ಮ ಸತ್ಯೇಂದ್ರನಾಥ ಟ್ಯಾಗೋರ್ ತೇರ್ಗಡೆ ಹೊಂದಿದ ಭಾರತೀಯರಾಗಿದ್ದಾರೆ.
- ಭಾರತೀಯರ ಒತ್ತಾಯದಿಂದ 1918 ರಲ್ಲಿ ಭಾರತೀಕರಣ ಮಾಡಲಾಯಿತು.
- ಭಾರತದ ಕಾರ್ಖಾನೆಯ ಮೊದಲ ಅಧಿನಿಯಮ 1891 ರಲ್ಲಿ ಒಪ್ಪಿಗೆ ದೊರೆತಿತ್ತು. ಬಾಲಕಾರ್ಮಿಕ ಸಮಸ್ಯೆ ಬಗ್ಗೆ ಗಮನಹರಿಸಿ,
  "7–12 ವರ್ಷದ ಮಕ್ಕಳು ದಿನಕ್ಕೆ 09 ಗಂಟೆಗಳಿಗಿಂತ ಹೆಚ್ಚಿಗೆ ಕೆಲಸ ಮಾಡಬಾರದೆಂದು ಆದೇಶಿಸಿತು. ಜೊತೆಗೆ ಮಕ್ಕಳಿಗೆ 01 ತಿಂಗಳಿಗೆ 04 ದಿನಗಳ ರಜೆ ನೀಡಲಾಯಿತು.

  ಕಾರ್ಖಾನೆಗಳ 02 ನೇ ಅಧಿನಿಯಮ 1891 – ಎಲ್ಲಾ ಕೆಲಸಗಾರರಿಗೂ ವಾರಕ್ಕೆ ಒಂದು ದಿನ ರಜೆ ಅವಕಾಶ & ಮಹಿಳೆಯರ ಕೆಲಸದ ಅವಧಿ 11 ಗಂಟೆಗೆ, ಬಾಲಕರ ಕೆಲಸದ ಅವದಿ 07 ಗಂಟೆಗೆ ಇಳಿಸಿತು. ಆದರೆ ಈ 02 ಅಧಿನಿಯಮಗಳು ಬ್ರಿಟೀಷರ ಮಾಲಿಕತ್ವದ ಟೀ–ಕಾಫಿ ತೋಟಗಳಿಗೆ ಅನ್ವಯಿಸುತ್ತಿರಲಿಲ್ಲ.
- ಬ್ರಿಟೀಷ್ ಭಾರತ ಸರ್ಕಾರವು 1863, 1865, 1870, 1873, 1882 ದಂಡ ಕಾನೂನು ಜಾರಿಗೊಳಿಸಿತು. ಕೆಲಸಗಾರರು ಒಮ್ಮೆ ಒಪ್ಪಂದಕ್ಕೆ ಸಹಿ ಹಾಕಿದರೆ ಅದನ್ನು ನಿರಾಕರಿಸುವಂತಿರಲಿಲ್ಲ. ಅದು ದಂಡನಾರ್ಹ ಅಪರಾಧವಾಗುತ್ತಿತ್ತು. ಬಂಧನದ ಸಾಧ್ಯತೆಯೂ ಇತ್ತು.

**ಪತ್ರಿಕೋದ್ಯಮ**

- ಭಾರತದಲ್ಲಿ ಮೊಟ್ಟಮೊದಲ ಮುದ್ರಣ ಯಂತ್ರ ಪ್ರವೇಶಿಸಿ 1556 (ಗೋವಾದಲ್ಲಿ)
- ಭಾರತದ ಮೊದಲ ವರ್ತಮಾನ ಪತ್ರಿಕೆ 'ದಿ ಬೆಂಗಾಲ್ ಗೆಜೆಟ್ – 1780' ರಲ್ಲಿ ಪ್ರಕಟವಾಯಿತು.
  ಇತರ ಪತ್ರಿಕೆಗಳೆಂದರೆ, ದಿ ಬೆಂಗಾಲ್, ಇಂಡಿಯನ್ ಮಿರರ್, ಅಮೃತ್ ಬಜಾರ್ ಪತ್ರಿಕಾ (ಬಂಗಾಳ)
- 'ಬಾಂಬೆ ಕ್ರೌನಿಕಲ್', 'ದಿ ಹಿಂದು ಪೆಟ್ರಿಯಟ್', 'ಮರಾಠಾ', ಕೇಸರಿ(ಮರಾಠಿ).
- ಸುಭೋಧ ಪತ್ರಿಕಾ, ಇಂದು ಪ್ರಕಾಶ, ಸುಧಾರಕ, 'ಆಂಧ್ರಪ್ರಕಾಶಿಕಾ', 'ದಿ ಹಿಂದೂ' ಇತ್ಯಾದಿ.
- ಕನ್ನಡದ ಮೊದಲ ಪತ್ರಿಕೆ 'ಮಂಗಳೂರು ಸಮಾಚಾರ'(1843)ರಲ್ಲಿ 'ಮೋಗ್ಲಿಂಗ್' ಎಂಬ ಮಿಷನರಿ ಸ್ಥಾಪಿಸಿದರು.
  ಕರ್ನಾಟಕದ ಇತರ ಮುಖ್ಯ ಪತ್ರಿಕೆಗಳೆಂದರೆ, 'ಮೈಸೂರು ರೆಕಾರ್ಡರ್', & 'ಕರ್ನಾಟಕ ಪ್ರಾದೇಶಿಕ'.

- ಭಾರತೀಯ ಪತ್ರಿಕಾ ಮಾಧ್ಯಮದ ಮೇಲಿನ ನಿರ್ಬಂಧಗಳು '1853 ರಲ್ಲಿ ಚಾರ್ಲ್ಸ್ ಮೆಟಾಕಾಫ್' ರದ್ದುಗೊಳಿಸಿದ.
- 1878 ರಲ್ಲಿ ದೇಶಭಾಷಾ ಪತ್ರಿಕಾ ಕಾಯ್ದೆ ಜಾರಿಗೆ ಬಂತು.
- 1908 & 1910 ರಲ್ಲಿ ಸ್ವಾತಂತ್ರ್ಯ ಚಳುವಳಿ & ಬಹಿಷ್ಕಾರ ಚಳುವಳಿಗಳ ಪರಿಣಾಮ ಪತ್ರಿಕಾ ನಿರ್ಬಂಧ ಕಾಯಿದೆ ಮರು ಜಾರಿಗೆ ಬಂದಿತು.

**ವಿದೇಶಾಂಗ ನೀತಿ:–**

**ನೇಪಾಳದೊಡನೆ ಯುದ್ಧ – 1814**

ಪ್ರಾಕೃತಿಕ ಗಡಿಗಳ ವಿಸ್ತರಣೆಗೆ ಬ್ರಿಟೀಷರು 1814 ಅಕ್ಟೋಬರ್ ನೇಪಾಳದೊಡನೆ ಯುದ್ಧ ಹೂಡಿತು. ನೇಪಾಳ ಸರ್ಕಾರವು ಬ್ರಿಟೀಷರೊಡನೆ ಒಪ್ಪಂದ ಮಾಡಿಕೊಂಡು, ಒಬ್ಬ ಬ್ರಿಟೀಷ್ ರೆಸಿಡೆಂಟ್‌ನನ್ನು ಒಪ್ಪಿಕೊಂಡಿತು. 'ಗುರ್ವಾಂವಾಲಾ & ಕುಮಾಂವ್ ತರೈ ಪ್ರದೇಶಗಳನ್ನು ಬ್ರಿಟೀಷರಿಗೆ ಬಿಟ್ಟುಕೊಟ್ಟಿತು. ಸಿಕ್ಕಿಂನಿಂದಲೂ ದೂರ ಸರಿಯಿತು.

ಶಿಮ್ಲಾ, ಮಸ್ಸೂರಿ, ನೈನಿತಾಲ್‌ಗಳಂತಹ ಗಿರಿಧಾಮಗಳಲ್ಲಿ ನಿವೇಶನಗಳನ್ನು ಪಡೆದರು.

**ಬರ್ಮಾದ ಗೆಲುವು**

- 1824 ರಲ್ಲಿ ಬ್ರಿಟೀಷರು ಬರ್ಮಾದ ಮೇಲೆ ಯುದ್ಧ ಘೋಷಿಸಿದರು. ಅಸ್ಸಾಂ, ಕಾಚಾರ್, ಮಣಿಪುರ & ಅರಾಕಾನ್‌ಗಳಿಂದ ಬರ್ಮಿಯನ್ನರನ್ನು ಓಡಿಸಿತು. 'ರಂಗೂನ್'ನ್ನು ವಶಪಡಿಸಿಕೊಂಡಿತು.
  'ಯದಾಂಬೋ ಒಪ್ಪಂದ(1826 ಫೆಬ್ರವರಿ)ವಾಗಿ ಶಾಂತಿ ನೆಲೆಸಿತು.
- 1852 ರಲ್ಲಿ 2ನೇ ಯುದ್ಧ, ಬ್ರಿಟೀಷರು ಸಮುದ್ರ ತೀರದ ರಾಜ್ಯವಾದ 'ಪೆಗು'ವನ್ನು ವಶಪಡಿಸಿಕೊಂಡರು.
- 1885 ರಲ್ಲಿ ರಾಜ 'ಥಿಬಾಬ್' ಫ್ರೆಂಚ್‌ರೊಡನೆ ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕಿದ. ಇದರಿಂದ ಬ್ರಿಟೀಷರು ಬರ್ಮಾವನ್ನು 1885 ನವೆಂಬರ್ 13 ರಂದು ಆಕ್ರಮಿಸಿದರು. ರಾಜ ಥಿಬಾವ್ ಶರಣಾದನು. ಅವನ ರಾಜ್ಯವನ್ನು ತಕ್ಷಣ ಭಾರತಕ್ಕೆ ಸೇರಿಸಿಕೊಳ್ಳಲಾಯಿತು.
- ಬ್ರಿಟೀಷರು 1935 ರಲ್ಲಿ ಬರ್ಮಾವನ್ನು ಭಾರತದಿಂದ ಪ್ರತ್ಯೇಕಿಸಿತು. 'ಯು ಆಂಗ್ ಸಾನ್'ನ ನೇತೃತ್ವದಲ್ಲಿ ರಾಷ್ಟ್ರೀಯವಾದವು. ಎತ್ತರಕ್ಕೇರಿತು. ಅಂತಿಮವಾಗಿ 1948 ಜನವರಿ 04 ರಂದು ಬರ್ಮಾ ಸ್ವಾತಂತ್ರ್ಯಗೊಂಡಿತು.

**ಅಫಘನ್‌ನೊಡನೆ ಯುದ್ಧ:– 02 ಯುದ್ಧಗಳು**

- 1829 ಆಗಸ್ಟ್ 07 ರಂದು ಬ್ರಿಟೀಷರು ಕಾಬೂಲ್ ವಶಪಡಿಸಿಕೊಂಡು ತಕ್ಷಣ 'ಷಾ ಶುಜಾ'ನನ್ನು ಸಿಂಹಾಸನಕ್ಕೇರಿಸಿದರು. ಇದರಿಂದ ಬಂಡಾಯವುಂಟಾಗಿ 1841 ನವೆಂಬರ್ 02 ರಂದು ಅಫಘನ್ನರು ಬ್ರಿಟೀಷ್ ಸೈನ್ಯದ ಮೇಲೆ ಬಿದ್ದರು.
- 1841 ಡಿಸೆಂಬರ್ 11 ರಂದು ಬ್ರಿಟೀಷರು ಅಫಘನ್‌ರೊಡನೆ ಒಪ್ಪಂದ ಮಾಡಿಕೊಂಡು 'ದೋಸ್ತ್ ಮಹ್ಮದ್‌ನನ್ನು' ಪುನ: ಸಿಂಹಾಸನದಲ್ಲಿ ಕೂರಿಸಲು ಒಪ್ಪಿದರು.
- ಈ ಯುದ್ಧದಲ್ಲಿ ಬ್ರಿಟೀಷರು ಅಪಾರ ಸೈನ್ಯ ಹಾನಿ, ವೆಚ್ಚ ಆಯಿತು.

**1878 ರಲ್ಲಿ 2ನೇ ಯುದ್ಧ ಘೋಷಿಸಲಾಯಿತು.**

- 1879 ಮೇ ಯಲ್ಲಿ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಷೇರ್ ಅಲಿಯ ಮಗ 'ಯಾಕೂಬ್ ಖಾನ್ ಗಂಡಮಾಕ್' ಬ್ರಿಟೀಷರ ಆಸೆ ಈಡೇರಿಸಿದನು.


Note : For reference purpose only, not for commercial purpose
INSTA KAS

- 1879 ಸೆಪ್ಟೆಂಬರ್ 03 ರಂದು ಅಫ್ಘನ ಸೈನ್ಯ ಬ್ರಿಟೀಷ್ ರೆಸಿಡೆಂಟ್ 'ಮೇಜರ್ ಕವಗ್ನಿರಿ'ಯನ್ನು ಕೊಂದರು. ಆದರೆ ಪುನ: ಅಫ್ಘನ್ನರ ಮೇಲೆ ಆಕ್ರಮಣ ಮಾಡಿ ವಶಪಡಿಸಿಕೊಳ್ಳಲಾಯಿತು.

**ಕೈಗಾರಿಕೆಗಳು:–**

- ಬೊಂಬಾಯಿಯಲ್ಲಿ 1853 ರಲ್ಲಿ 'ಕಾವ್ವಸ್ಸಿ ನಾನಾಭೋಯ್' ಅವರಿಂದ ಮೊದಲ ಬಟ್ಟೆ ಗಿರಣಿಯು ಸ್ಥಾಪನೆಯಾಯಿತು.
- ರಿಷಾ(ಬಂಗಾಳ) ಮೊದಲ ಸೆಣಬಿನ ಗಿರಣಿ 1855 ರಲ್ಲಿ ಸ್ಥಾಪನೆಯಾಯಿತು.
- 1879 ರಲ್ಲಿ 56 ಹತ್ತಿ ಗಿರಣಿಗಳು, 1882 ಬಂಗಾಳದಲ್ಲಿ 20 ಸೆಣಬಿನ ಗಿರಣಿಗಳು.
- 1905 ರ ಹೊತ್ತಿಗೆ 206 ಹತ್ತಿ ಗಿರಣಿಗಳು, 1901 ರಲ್ಲಿ 36 ಸೆಣಬಿನ ಗಿರಣಿಗಳಿದ್ದವು.
- 1930 ಭಾರತೀಯರೇ ಸಕ್ಕರೆ ಕೈಗಾರಿಕೆ ಅಭಿವೃದ್ಧಿಗೊಳಿಸಿದ್ದು, ಅಲ್ಲದೇ ಅನೇಕ ವಿವಿಧ ಕೈಗಾರಿಕೆಗಳು ಉಂಟಾದವು.
- ಭಾರತವು 1913 ರಲ್ಲಿ ಮೊದಲು ಕಬ್ಬಿಣವನ್ನು ಉತ್ಪಾದಿಸಿತು.

**ಬಡತನ ಮತ್ತು ಕ್ಷಾಮಗಳು**

- 1860–61 ಉತ್ತರ ಪ್ರದೇಶದಲ್ಲಿ ಕ್ಷಾಮ, 2 ಲಕ್ಷ ಹೆಚ್ಚು ಜನ ಬಲಿ.
- 1865–66 ಓರಿಸ್ಸಾ, ಬಂಗಾಳ, ಬಿಹಾರ & ಮದ್ರಾಸ್, 20 ಲಕ್ಷ ಜನ ಬಲಿ, (ಓರಿಸ್ಸಾ ಒಂದರಲ್ಲೇ 0 ಲಕ್ಷ ಜನ ಬಲಿ).
- 1876–78 ರಲ್ಲಿ ಭಾರತ ಇತಿಹಾಸಲ್ಲೇ ಅತ್ಯಂತ ಭೀಕರ ಕ್ಷಾಮ, ಮದ್ರಾಸ್ 35 ಲಕ್ಷ, ಮೈಸೂರು ಶೇ.20 ರಷ್ಟು, ಹೈದ್ರಾಬಾದ್, ಮಹಾರಾಷ್ಟ್ರ, 8 ಲಕ್ಷ, ಉತ್ತರಪ್ರದೇಶ 12 ಲಕ್ಷ, ಪಂಜಾಬ್‌ಗಳಲ್ಲಿ ಸಂಭವಿಸಿತು.
- 1899–1900 ಅನುಸರಿಸಿದ ಕ್ಷಾಮವು ವ್ಯಾಪಕ ವಿನಾಶಕ್ಕೆ ಕಾರಣವಾಯಿತು.
- 1943 ಬಂಗಾಳದಲ್ಲಿ ಕ್ಷಾಮ 03 ಲಕ್ಷ ಜನರ ಬಲಿ.
- 1890 ರಲ್ಲಿ ಕಲ್ಕತ್ತಾ ವಿಶ್ವವಿದ್ಯಾಲಯದ ಮೊಟ್ಟಮೊದಲ ಮಹಿಳಾ ಪದವೀಧರೆ 'ಕಾದಂಬಿನಿ ಗಂಗೂಲಿ', ಕಾಂಗ್ರೆಸ್ ಅಧಿವೇಶನ ಉದ್ದೇಶಿಸಿ ಭಾಷಣ ಮಾಡಿದರು.

**ಮಹ್ಮದ್ ಇಕ್ಬಾಲ್ (1876–1938)**

- ಆಧುನಿಕ ಭಾರತದ ಶ್ರೇಷ್ಠ ಕವಿಗಳಲ್ಲಿ ಒಬ್ಬರು. ತಮ್ಮ ಕಾವ್ಯದಿಂದ ಹಿಂದೂ–ಮುಸ್ಲಿಂ ತರುಣರಿಬ್ಬರ ಮೇಲೂ ಪ್ರಭಾವ ಬೀರಿದರು. **'ಸಾರೇ ಜಹಾನ್ ಸೇ ಅಚ್ಛಾ'** ಗೀತೆ ರಚನೆಕಾರರು.

**ಪಾರ್ಸಿಗಳಲ್ಲಿ ಧಾರ್ಮಿಕ ಸುಧಾರಣೆ**

- ಹತ್ತೊಂಬತ್ತನೇ ಶತಮಾನದ ಮಧ್ಯಭಾಗದಲ್ಲಿ ಆಯಿತು(ಮುಂಬೈಯಲ್ಲಿ).
- 1851 ರಲ್ಲಿ ರೆಹ್ನುಮಾಯ್ ಮಜ್ದಯಾಸನ್ ಸಭಾ ಅಥವಾ ಧಾರ್ಮಿಕ ಸುಧಾರಣಾ ಸಂಸ್ಥೆಯು ನವರೋಜಿ ಪರ್ಧೂಜಿ, ದಾದಾಬಾಯಿ ನವರೋಜಿ, ಎಸ್.ಎಸ್. ಬೆಂಗಾಲಿ ಇತರರಿಂದ ಸ್ಥಾಪಿಸಲ್ಪಟ್ಟಿತು.

**ಸಿಖ್ಖ್‌ರಲ್ಲಿ ಧಾರ್ಮಿಕ ಸುಧಾರಣೆ:–**

- ಇವರಲ್ಲಿ 'ಖಾಲ್ಸಾ' ಕಾಲೇಜಿನ ಸ್ಥಾಪನೆಯೊಂದಿಗೆ (ಅಮೃತಸರದಲ್ಲಿ) ಧಾರ್ಮಿಕ ಸುಧಾರಣಾ ಚಳುವಳಿ ಆರಂಭವಾಯಿತು. ಆದರೆ ಪಂಜಾಬಿನಲ್ಲಿ ಅಕಾಲಿ ಚಳುವಳಿಯು 1920 ರಲ್ಲಿ ಆರಂಭಗೊಂಡು ನಂತರ ಸುಧಾರಣಾ ಪ್ರಕ್ರಿಯಾ ಚಾಲನೆ ಪಡೆಯಿತು.
- ಅಕಾಲಿಗಳ ನೇತೃತ್ವದಲ್ಲಿ ಸಿಖ್ಖ್ ಜನಾಂಗವು 1921 ರಲ್ಲಿ ಮಹಂತರ ವಿರುದ್ಧ ಪ್ರಬಲ ಸತ್ಯಾಗ್ರಹ ಕೈಗೊಂಡಿತು.
- ಅಕಾಲಿಗಳ ಒತ್ತಡದಿಂದ ಸರ್ಕಾರವು 1922 ರಲ್ಲಿ ಗುರುದ್ವಾರ ಅಧಿನಿಯಮ ಜಾರಿಗೆ ತಂದು, ಅದಕ್ಕೆ 1925 ರಲ್ಲಿ ತಿದ್ದುಪಡಿ ಮಾಡಿತು.
- 1880 ಡಫರಿನ್ ಆಸ್ಪತ್ರೆ (ವೈಸರಾಯ್ ಡಫರಿನ್ ಹೆಂಡತಿ ಹೆಸರಿನಲ್ಲಿ ಲೇಡಿ ಡಫರಿನ್ ಎಂದೇ ಹೆಸರಾಗಿದೆ). ನಂತರ ಮಹಿಳೆಯರಿಗೆ ಆಧುನಿಕ ಔಷಧಿಗಳ ತಯಾರಿಕೆಯಿಂದ ಬಳಕೆ ಹಾಗೂ ಮಕ್ಕಳ ಪ್ರಸವಗಳಲ್ಲಿ ಹೊಸತಂತ್ರಗಳ ಅಳವಡಿಕೆ ಲಭಿಸುವಂತಾಯಿತು.
- ಗಾಂಧೀಜಿಯವರು ಅಸ್ಪೃಶ್ಯತೆಯನ್ನು ಬೇರು ಸಹಿತ ತೊಡೆದುಹಾಕಲು '1932 ರಲ್ಲಿ ಅಖಿಲ ಭಾರತ ಹರಿಜನ ಸಂಘ' ಸ್ಥಾಪಿಸಿದರು.

**ಬಾಲಗಂಗಾಧರ ತಿಲಕರು**

- 1880 ರಲ್ಲಿ ನ್ಯೂ ಇಂಗ್ಲೀಷ್ ಸ್ಕೂಲ್‌ನ ಸ್ಥಾಪನೆಗೆ ಶ್ರಮಿಸಿದರು. ಮುಂದೆ ಇದೇ 'ಫರ್ಗ್ಯೂಸನ್ ಕಾಲೇಜು' ಎಂದು ಹೆಸರಾಯಿತು.
  ಕೇಸರಿ ಪತ್ರಿಕೆಯನ್ನು (ಮರಾಠಿ) 1889 ರಿಂದ ಸಂಪಾದಿಸಿದರು. ಮರಾಠ ಇಂಗ್ಲೀಷ್ ಭಾಷೆ ಪತ್ರಿಕೆಯಾಗಿತ್ತು.
- 1893 ರಿಂದ ಧಾರ್ಮಿಕ ಸಂಪ್ರದಾಯದ ಗಣೇಶ ಹಬ್ಬವನ್ನು ಬಳಸಿಕೊಂಡರು. 1895 ರಿಂದ ಮಹಾರಾಷ್ಟ್ರದಲ್ಲಿ 'ಶಿವಾಜಿ' ಉತ್ಸವವನ್ನು ಜಾರಿಗೆ ತಂದರು.
- 1896–97 ರ ಅವಧಿಯಲ್ಲಿ ಮಹಾರಾಷ್ಟ್ರದಲ್ಲಿ 'ಕೊಡವು ಚಳುವಳಿ' ಆರಂಭಿಸಿದರು.

**ಬಂಗಾಳದ ವಿಭಜನಾ ವಿರೋಧ ಚಳುವಳಿ:–**

- 1905 ಆಗಸ್ಟ್ 07 ರಂದು ಚಾಲನೆ ದೊರೆಯಿತು. ಆರಂಭದಲ್ಲಿ ಸುರೇಂದ್ರನಾಥ ಬ್ಯಾನರ್ಜಿ & ಕೃಷ್ಣಕುಮಾರರಂತಹ ಸೌಮ್ಯವಾದಿಗಳು, ನಂತರದಲ್ಲಿ ತೀವ್ರಗಾಮಿಗಳು, ಕ್ರಾಂತಿಕಾರಿಗಳು, ನಾಯಕತ್ವ ವಹಿಸಿಕೊಂಡರು.
- 1905 ಅಕ್ಟೋಬರ್ 16 ಬಂಗಾಳದಾದ್ಯಂತ 'ರಾಷ್ಟ್ರೀಯ ಶೋಕ ದಿನ' ಆಚರಿಸಲಾಯಿತು.
- ರವೀಂದ್ರನಾಥ ಟ್ಯಾಗೋರ್‌ರವರು ರಚಿಸಿದ್ದ 'ಅಮರ್ ಸೊನಾರ್ ಬಾಂಗ್ಲಾ' ರಾಷ್ಟ್ರೀಯ ಗೀತೆಯನ್ನು ಬೀದಿಗಳಲ್ಲಿ ಅಂದು ಹಾಡತೊಡಗಿದರು. ಮುಂದೆ ಇದೇ ಗೀತೆ ಸ್ವಾತಂತ್ರ್ಯ ನಂತರ(1971) ಬಾಂಗ್ಲಾ ದೇಶವು ತನ್ನ ರಾಷ್ಟ್ರಗೀತೆಯನ್ನಾಗಿ ಅಳವಡಿಸಿಕೊಂಡಿತು. ಆದರೆ ಕಲ್ಕತ್ತಾದ ಬೀದಿಗಳಲ್ಲಿ 'ವಂದೇ ಮಾತರಂ' ಎಂಬ ಘೋಷ ತುಂಬಿ ಹೋಗಿತ್ತು.
- ಮೌಲಾನ ಅಬ್ದುಲ್ ಕಲಾಂ ಅಜಾದ್ ತಮ್ಮ 24ನೇ ವಯಸ್ಸಿನಲ್ಲಿ(1912) ರಲ್ಲಿ 'ಅಹಿಲಾಲ್ ಪತ್ರಿಕೆಯ' ಮೂಲಕ ಕ್ರಾಂತಿಕಾರಿ ವಿಚಾರಗಳನ್ನು ಪ್ರಚಾರ ಮಾಡತೊಡಗಿದರು.
- 'ಅಹ್ರರ್ ಚಳುವಳಿಯು' ಕ್ರಾಂತಿಕಾರಿ ರಾಷ್ಟ್ರೀಯವಾದಿಗಳಾದ ಮೌಲಾನಾ ಮಹ್ಮದ್ ಅಲಿ, ಹಕೀಂ ಅಜಮಲ್ ಖಾನ್, ಹಸನ್ ಇಮಾಂ, ಮೌಲಾನಾ ಜಫಾರ್ ಅಲಿಖಾನ್, ಮಝರ್ ಉಲ್ ಹಕ್‌ರಿಂದ ಸ್ಥಾಪನೆ ಆಯಿತು.

**ಗದ್ದರ್ ಪಕ್ಷ – 1913 & (ಗದ್ದರ್ ಪತ್ರಿಕೆ 1913)**

- U.S.A & ಕೆನಡಾದಲ್ಲಿ ನೆಲೆಗೊಂಡಿದ್ದ ಭಾರತೀಯ ಕ್ರಾಂತಿಕಾರಿಗಳು ಗದ್ದರ(ಬಂಡಾಯ) ಪಕ್ಷವನ್ನು ಸ್ಥಾಪಿಸಿದರು.



Note : For reference purpose only, not for commercial purpose

INSTA KAS

ಪಂಜಾಬಿನ ಸಿಖ್ಖ್ ರೈತರು & ಮಾಜಿ ಸೈನಿಕರು ಅತಿ ಹೆಚ್ಚಾಗಿದ ಇದರ ಸದಸ್ಯತ್ವ ಹೊಂದಿದ್ದರು.

- ಇವರುಗಳು ಬದುಕನ್ನು ಹುಡುಕುತ್ತಾ ವಲಸೆ ಹೋಗಿದ್ದರು. ಜನಾಂಗೀಯ, ಆರ್ಥಿಕ ಕಾರ್ಯಕ್ಕೆ ಬಲಿಯಾಗಿದ್ದರು. ಲಾಲಹರ ದಯಾಳ, ಮಹ್ಮದ್ ಬರ್ಖತುಲ್ಲಾ, ಭಗವಾನ್ ಸಿಂಗ್, ರಾಮಚಂದ್ರ & ಸೋಹನ್ ಸಿಂಗ್ ಗದ್ದರ್ ಪಕ್ಷದ ಕೆಲವು ಪ್ರಮುಖ ನಾಯಕರಾಗಿದ್ದರು. ತಾರಖ್ ನಾಥರು (U.S.A)
- ಗದ್ದರ್ ವಾರಪತ್ರಿಕೆಯ ಸುತ್ತ ನಿರ್ಮಾಣಗೊಂಡಿತ್ತು. ಪತ್ರಿಕೆಯ ಮುಖಪುಟದ ಶಿರೋನಾಮೆಯಲ್ಲಿ 'ಅಂಗ್ರೇಜಿ ರಾಜ್ ಕಾ ದುಷ್ಮನ್' ಎಂಬ ಉದ್ಘೋಷವಿತ್ತು.
- ಗದ್ದರ್‌ನ ಒಂದು ಪ್ರಕಟಣೆಯು ಭಾರತದಲ್ಲಿ ಬಂಡಾಯ ಮಾಡಲು ಧೈರ್ಯಶಾಲಿ ಸಿಪಾಯಿಗಳು ಬೇಕಾಗಿದ್ದಾರೆ. 'ವೇತನ–ಸಾವು', 'ಬೆಲೆ–ವೀರಮರಣ', 'ನಿವೃತ್ತಿ ವೇತನ–ಸ್ವಾತಂತ್ರ್ಯ', 'ಯುದ್ಧ ಕ್ಷೇತ್ರ–ಭಾರತ' ಎಂಬ ತತ್ವವು ಪ್ರಬಲ ಜಾತ್ಯಾತೀತ ತತ್ವವಾಗಿತು.
- ಈ ಪಕ್ಷವು 'ಮೆಕ್ಸಿಕೋ, ಚೀನಾ, ಜಪಾನ್, ಫಿಲಿಪೈನ್ಸ್, ಮಲಯಾ, ಸಿಂಗಾಪುರ್, ಥಾಯ್ಲೆಂಡ್, ಇಂಡೋ–ಚೀನಾ & ಪೂರ್ವ & ದಕ್ಷಿಣ ಆಫ್ರಿಕಾಗಳಲ್ಲಿ ತನ್ನ ಸಕ್ರಿಯ ಸದಸ್ಯರನ್ನು ಹೊಂದಿತ್ತು.
- ಪಂಜಾಬಿನಲ್ಲಿ ಶಸ್ತ್ರಸಜ್ಜಿತ ಬಂಡಾಯದ ಆರಂಭಕ್ಕೆ 1915 ಫೆಬ್ರವರಿ 21 ದಿನಾಂಕ ನಿರ್ಧರಿಸಲಾಗಿತ್ತು. ಆದರೆ ದುರಾದೃಷ್ಟವಶಾತ್ ಈ ಯೋಜನೆಗಳ ವಿಚಾರ ಅಧಿಕಾರಿಗಳ ಗಮನಕ್ಕೆ ಬಂದು ಸೂಕ್ತಕ್ರಮಗಳನ್ನು ಕೈಗೊಂಡರು. ಅನೇಕ ಜನರನ್ನು ಬಂಧಿಸಲಾಯಿತು. ಇಲ್ಲವೇ ಗಲ್ಲಿಗೇರಿಸಲಾಯಿತು.
- ಅನೇಕರು ಬಿಡುಗಡೆಯ ನಂತರ ಪಂಜಾಬ್‌ನಲ್ಲಿ ಕೀರ್ತಿ & ಕಮ್ಯುನಿಸ್ಟ್ ಚಳುವಳಿಗಳನ್ನು ಆರಂಭಿಸಿದರು.
- 1915 ರ ವಿಫಲಗೊಂಡ ಕ್ರಾಂತಿಕಾರಿ ಘಟನೆಯ ಸಂದರ್ಭ 'ಭಾಘಾ ಜತಿನ್' ಎಂದೇ ಪ್ರಖ್ಯಾತನಾಗಿದ್ದ 'ಜತಿನ್ ಮುಖರ್ಜಿ' ಪೊಲೀಸ್‌ರೊಡನೆ ಹೋರಾಡುತ್ತಾ 'ಬಾಲ್‌ಸೊರ್' ಬಳಿ ಪ್ರಾಣ ಕಳೆದುಕೊಂಡ.
- 1925 ರಲ್ಲಿ ಸ್ವರಾಜ್ಯ ಪಕ್ಷದವರು ಚುನಾವಣೆಯಲ್ಲಿ ಸ್ಪರ್ಧಿಸಿ 101 ಸ್ಥಾನಗಳಲ್ಲಿ 42 ಸ್ಥಾನಗಳನ್ನು ಗಳಿಸಿಕೊಂಡರು. & ಕೇಂದ್ರ ಶಾಸನ ಸಭೆಗೆ ಅಧ್ಯಕ್ಷರನ್ನಾಗಿ(ಸಭಾಪತಿ) ವಿಠಲ್‌ಬಾಯಿ ಜಿ ಪಟೇಲ್‌ರವರನ್ನು ಆಯ್ಕೆ ಮಾಡುವಲ್ಲಿ ಸಫಲರಾದರು.
- ಗದ್ದಾರ್ ಪಕ್ಷದ ಕೇಂದ್ರ ಕಛೇರಿ ಸ್ಯಾನ್ ಫ್ರಾನ್ಸಿಸ್ಕೋದ ನಂ. 436 ಹಿಲ್‌ಸ್ಟ್ರೀಟ್‌ನಲ್ಲಿತ್ತು.
- ಕಲ್ಕತ್ತಾದಲ್ಲಿ ಯುಗಾಂತರ್ ಪತ್ರಿಕೆಯ ಸ್ಥಾಪನೆಯ ಜ್ಞಾಪಕಾರ್ಥವಾಗಿ ಈ ಕೇಂದ್ರಕ್ಕೆ ಯುಗಾಂತರ ಆಶ್ರಮವೆಂದು ಹೆಸರಿಡಲಾಯಿತು. (ಸ್ಯಾನ್‌ಫ್ರಾನ್ಸಿಸ್ಕೋ ಕೇಂದ್ರ ಕಛೇರಿಗೆ)
- ಎಂ.ಎನ್. ರಾಯ್‌ರವರು ಜರ್ಮನಿ ರಾಯಭಾರಿಯೊಡನೆ ಸೇರಿ 'ಅನಿಲಾರ್ಸನ್' ಎಂಬ ಹಡಗಿನಲ್ಲಿ 1915 ಜನವರಿಯಲ್ಲಿ ಮಾವರಿಕ್ ಎಂಬ ಹಡಗಿನ ಪೆಟ್ರೋಲ್ ಟ್ಯಾಂಕರ್‌ನಲ್ಲಿ ಶಸ್ತ್ರಾಸ್ತ್ರಗಳು ತುಂಬಿ ಕಳಿಸಲಾಯಿತು. ಆದರೆ ಮಾವೆರಿಕ್ ನೀರಿನ ತೊಂದರೆಯಿಂದ 'ಹವಾಯಿ' ಬಳಿ ಸಿಕ್ಕಿ ಬಿತ್ತು. ಶಸ್ತ್ರಾಸ್ತ್ರಗಳು ಇಳಿಸಿಕೊಳ್ಳಲು ಒರಿಸ್ಸಾದ ಬಾಲ್‌ಸೂರಿನಲ್ಲಿ ಜತಿನ್ ಮುಖರ್ಜಿ'ಯವರ ನೇತೃತ್ವದಲ್ಲಿ ಸಿದ್ಧವಿದ್ದ ಕ್ರಾಂತಿಕಾರಿಗಳು ಪೊಲೀಸ್ ಪಡೆಯೊಂದಿಗೆ ಹೋರಾಡಿ ನಿಧನ ಹೊಂದಿದರು. ಹೀಗೆ ಇಡೀ ಯೋಜನೆ ವಿಫಲವಾಯಿತು.
- 'ಉದಾಮ್ ಸಿಂಗ್‌ನು ಜನರಲ್ ಡೈಯಲ್‌ನನ್ನು 1940 ಮಾರ್ಚ್ 13 ರಂದು ಲಂಡನ್‌ನ ಕಾಕ್ಸ್‌ಟನ್ ಹಾಲ್‌ನಲ್ಲಿ ಕೊಂದನು'.

**ಬಾರ್ಡೋಲಿ ಸತ್ಯಾಗ್ರಹ – 1928**

- ಬಾರ್ಡೋಲಿಯಲ್ಲಿ ರೈತರ ಕಂದಾಯವನ್ನು ಹೆಚ್ಚಿಸಲಾಯಿತು. ಹೀಗಾಗಿ ರೈತರೆಲ್ಲರೂ ಸರ್ದಾರ್ ವಲ್ಲಭಬಾಯಿ ಪಟೇಲರ ಮೊರೆ ಹೋದರು.
- ಪಟೇಲರು ತೆರಿಗೆ ನಿರಾಕರಣೆಯ ಚಳುವಳಿಯನ್ನು ಸಂಘಟಿಸಿ, ಅಂತ್ಯದಲ್ಲಿ ಗೆಲುವು ಪಡೆದುಕೊಂಡರು.
- ಜಮ್‌ಷೆಡ್‌ಪುರದಲ್ಲಿ ಟಾಟಾ ಕಬ್ಬಿಣ & ಉಕ್ಕಿನ ಕಾರ್ಖಾನೆಯ ಮುಷ್ಕರದಲ್ಲಿ 'ಸುಭಾಷಚಂದ್ರಬೋಸ್'ರು ಈ ಮುಷ್ಕರದ ಒಪ್ಪಂದದಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದರು.
- ಅಖಿಲ ಭಾರತದ ಸಮ್ಮೇಳನದ ನಂತರ ಅಕ್ಟೋಬರ್ 1924 ರಲ್ಲಿ ಸಶಸ್ತ್ರ ಕ್ರಾಂತಿಯನ್ನು ಸಂಘಟಿಸುವ ಸಲುವಾಗಿ(HRA) ಹಿಂದೂಸ್ತಾನ್ ರಿಪಬ್ಲಿಕ್ ಅಸೋಸಿಯೇಷನ್ ಸ್ಥಾಪಿಸಲಾಯಿತು. 'ಕಾಕೋರಿ' ಸಂಚಿನ ಪ್ರಕರಣದಲ್ಲಿ ಈ ಸಂಘದ ಹಲವು ಸದಸ್ಯರಿಗೆ ಬಂಧಿಸಲಾಯಿತು.
- 1928 ರಲ್ಲಿ ಚಂದ್ರಶೇಖರ್ ಆಜಾದ್‌ರವರ ನಾಯಕತ್ವದಲ್ಲಿ HSRA ಹಿಂದೂಸ್ತಾನ್ ಸೋಶಿಯಾಲಿಸ್ಟ್ ರಿಪಬ್ಲಿಕನ್ ಅಸೋಸಿಯೇಶನ್ ಸ್ಥಾಪಿಸಲಾಯಿತು.
- ಸೈಮನ್ ಆಯೋಗದ ವಿರೋಧಿ ಪ್ರತಿಭಟನೆಯಲ್ಲಿ ಲಾಲ ಲಜಪತ್‌ರಾಯ್ ಮರಣ ಹೊಂದಿದರಿಂದ ಬ್ರಿಟೀಷ್ ಅಧಿಕಾರಿ 'ಸ್ಯಾಂಡರ್ಸ್‌ನ್ನು ಭಗತ್ ಸಿಂಗ್, ಆಜಾದ್ & ರಾಜಗುರು ಗುಂಡಿಟ್ಟು ಕೊಂದನು.
- ಬಂಗಾಳದ ಚಿತ್ತಗಾಂಗ್‌ನಲ್ಲಿ 1930 ಏಪ್ರಿಲ್ ಸೂರ್ಯಸೇನ್‌ರ ನೇತೃತ್ವದಲ್ಲಿ ಸರ್ಕಾರಿ ಶಸ್ತ್ರಾಗಾರದ ಮೇಲೆ ದೊಡ್ಡ ಪ್ರಮಾಣದಲ್ಲಿ ಯೋಜಿತವಾಗಿ ದಾಳಿ ಮಾಡಲಾಯಿತು.
- ಸೆರೆಮನೆಗಳಲ್ಲಿನ ದಾರುಣ ಪರಿಸ್ಥಿತಿಯ ಪ್ರತಿಭಟನೆಗೆ ಉಪವಾಸ ಸತ್ಯಾಗ್ರಹ ಕೈಗೊಳ್ಳಲಾಯಿತು(ಭಗಗ್, ಆಜಾದ, ರಾಜಗುರು) ಈ ಉಪವಾಸ ಸತ್ಯಾಗ್ರಹದ ಸಂದರ್ಭದಲ್ಲಿ 'ಜತಿನ್ ದಾಸ್' ಎಂಬ ಕೃಶ ದೇಹದ ಯುವ, 63 ದಿನಗಳಷ್ಟು ದೀರ್ಘವಾದ ಉಪವಾಸದ ನಂತರ ಹುತಾತ್ಮನಾದನು.
- ಭಗತ್‌ಸಿಂಗ್, ರಾಜಗುರು, ಸುಖದೇವನನ್ನು ಜನರ ವಿರೋಧದ ನಡುವೆಯೂ 1931 ಮಾರ್ಚ್ 23ರಂದು ಗಲ್ಲಿಗೇರಿಸಲಾಯಿತು.
- 1931 ಫೆಬ್ರವರಿಯಲ್ಲಿ ಅಲಹಾಬಾದ್‌ನ ಒಂದು ಸಾರ್ವಜನಿಕ ಪಾರ್ಕ್‌ನಲ್ಲಿ ಪೊಲೀಸ್ ಮುಖಾಮುಖಿ ಗುಂಡಿನ ಕಾಳಗದಲ್ಲಿ ಚಂದ್ರಶೇಖರ್ ಆಜಾದ್ ಕೊಲ್ಲಲ್ಪಟ್ಟರು. ನಂತರ ಈ ಪಾರ್ಕ್‌ಗೆ 'ಆಜಾದ್ ಪಾರ್ಕ್' ಎಂದು ಮರುನಾಮಕರಣ ಮಾಡಲಾಯಿತು.
- 1927 ರ ಮದ್ರಾಸಿನಲ್ಲಿ INC ಸಭೆಯು ಡಾ|| ಅನ್ಸಾರಿ ಅವರ ಅಧ್ಯಕ್ಷತೆಯಲ್ಲಿ ನಡೆದು ಸೈಮನ್ ಆಯೋಗವನ್ನು ಪ್ರತಿಹಂತದಲ್ಲೂ ಬಹಿಷ್ಕರಿಸಲು ತೀರ್ಮಾನಿಸಿತು.
- INA ಯಲ್ಲಿ ಅಧಿಕಾರಿಗಳಾಗಿದ್ದ 'ಷಾ ನವಾಜ್ ಖಾನ್, ಗುರುದಯಾಳ್‌ಸಿಂಗ್ ಬಿಲ್ಲೋನ್ & ಪ್ರೇಮ್ ಸಹಗಲ್‌ರವರ ವಿಚಾರಣೆಯು ದೆಹಲಿಯ ಕೆಂಪುಕೋಟೆಯಲ್ಲಿ ನಡೆದು ಜನರ ಒತ್ತಾಯದಿಂದಾಗಿ ಅವರನ್ನು ಬಂಧಿಸದೇ ಬಿಡುಗಡೆ ಮಾಡಿತು.

**ಸೈಮನ್ ಕಮಿಷನ್(1927–30) ವರದಿಯ ಅಂಶಗಳು ಇಂತಿವೆ.**

- ಪ್ರಾಂತ್ಯಗಳಲ್ಲಿ ದ್ವಿಸರಕಾರ ರದ್ದುಪಡಿಸಿ ಜವಾಬ್ದಾರಿ ಸರಕಾರ ಸ್ಥಾಪಿಸುವುದು.
- ಫೆಡರಲ್ ಸರ್ಕಾರ & ಸಂವಿಧಾನವನ್ನು ರಚಿಸುವುದು.
- ಹೈಕೋರ್ಟ್‌ಗಳು ಭಾರತ ಸರ್ಕಾರದ ಅಧೀನದಲ್ಲಿರುವುದು.
- ಭಾರತದಿಂದ ಬರ್ಮಾವನ್ನು ಬಾಂಬೆಯಿಂದ ಸಿಂಧ್‌ನ್ನು ಪ್ರತ್ಯೇಕಿಸುವುದು.
- ಕೇಂದ್ರ ಶಾಸಕಾಂಗ ದ್ವಿಸದನಗಳಿಂದ ಕೂಡಿರುವುದು.
- ಭಾರತದ ಸೈನ್ಯ ಭಾರತೀಕರಣಗೊಳಿಸುವುದು.

INSTA KAS

Note : For reference purpose only, not for commercial purpose

- ಮತೀಯ ಮತಕ್ಷೇತ್ರವನ್ನು ಮುಂದುವರೆಸುವುದು.
- 10 ವರ್ಷಗಳ ನಂತರ ಸಂವಿಧಾನ ಸುಧಾರಣೆಗೆ ಮತ್ತೊಂದು ಆಯೋಗ ನೇಮಿಸುವುದು.

ಇದರ ವರದಿಗಳು 1935 ರ ಸರಕಾರದ ಕಾಯಿದೆ ರೂಪದಲ್ಲಿ ಜಾರಿಗೆ ಬಂದವು.

**ಮೋತಿಲಾಲ್ ನೆಹರು ವರದಿ(1928)** 1928 ರಲ್ಲಿ ಡಾ॥ ಅನ್ಸರಿ ಅಧ್ಯಕ್ಷತೆಯಲ್ಲಿ ನಡೆದ ಸರ್ವಪಕ್ಷ ಸಮ್ಮೇಳನವು ಒಂದು ಸಂವಿಧಾನ ರಚನಾ ಸಮಿತಿಯನ್ನು ರಚಿಸಿತು. ಮೋತಿಲಾಲ್ ನೆಹರೂ ಅಧ್ಯಕ್ಷರಾಗಿದ್ದರೆ, ಮಗ ನೆಹರು ಕಾರ್ಯದರ್ಶಿಯಾಗಿದ್ದರು. ಬೋಸ್, ತೇಜ್ ಬಹದ್ದೂರ್ ಸಪ್ರು, ಜಯಕರ್, ಎನ್.ಎಂ.ಆಣೆ, ಜಿ.ಆರ್.ಪ್ರಧಾನ್, ಆಲಿ ಇಮಾಮ್ ಸೇರಿದಂತೆ 28 ಸದಸ್ಯರಿದ್ದರು. ಇದರ ವರದಿಗಳು ಇಲ್ಲಿವೆ.

ಎ) ಭಾರತಕ್ಕೆ ಫೆಡರಲ್ ಮಾದರಿ ಸಂವಿಧಾನ ಸೂಕ್ತ.
ಬಿ) ವೈಸ್ರಾಯ್‌ನ್ನು ಬ್ರಿಟನ್ ಸರ್ಕಾರವೇ ನೇಮಿಸುವುದು, ವೇತನ ಭಾರತದ ಖಜಾನೆಯಿಂದ.
ಸಿ) ಕೇಂದ್ರ ಶಾಸನಸಭೆ ದ್ವಿ ಸದನದಿಂದ ಕೂಡಿರತಕ್ಕದ್ದು. ಮೇಲ್ಮನೆ ಸೆನೆಟ್ 200, ಕೆಳಮನೆ 500 ಸದಸ್ಯರಿಂದ ಕೂಡಿರುವುದು. ಕಾಲಾವಧಿ 7 & 5 ವರ್ಷಗಳು.
ಡಿ) ವೈಸ್ರಾಯ್‌ಗೆ ರಾಯಭಾರಿ & ಹೈ ಕಮೀಷನರ್‌ನ್ನು ನೇಮಿಸುವುದು.
ಇ) ವಯಸ್ಕ ಮತದಾನ ಪದ್ಧತಿ, ಭಾಷಾವಾರು ಪ್ರಾಂತ್ಯ ರಚನೆ, 19 ಮೂಲಭೂತ ಹಕ್ಕುಗಳಿರಬೇಕು. ಭಾರತದ ಸೈನ್ಯ ಭಾರತದ ಮಂತ್ರಿಯ ಅಧೀನದಲ್ಲಿರಬೇಕು. ಆದರೆ ವರದಿ ತನ್ನ ಉದ್ದೇಶ ಸಾಧಿಸುವಲ್ಲಿ ವಿಫಲವಾಯಿತು.

ಈ ವರದಿಯನ್ನು ಜಿನ್ನಾ ವಿರೋಧಿಸಿ ಮಾರ್ಚ್ 28, 1929 ರಂದು ದೆಹಲಿಯ ಮುಸ್ಲಿಂಲೀಗ್ ಸಭೆಯಲ್ಲಿ ಸನ್ನದೇ ಆದ 14 ಅಂಶಗಳು ಬರೀ ಕೋಮು ಭಾವನೆಯನ್ನು ಹೊಂದಿದ್ದರಿಂದ ಇದನ್ನು ಯಾರು ಒಪ್ಪಲಿಲ್ಲ.

- 1928 ರ ಸಕಲ ರಾಜಕೀಯ ಪಕ್ಷಗಳ ಸಮ್ಮೇಳನವು ಕಲ್ಕತ್ತಾದಲ್ಲಿ ನಡೆದಿದ್ದು, ಜಿನ್ನಾ ಮುಸ್ಲೀಂರಿಗೆ ಪ್ರತ್ಯೇಕ ಮೀಸಲಾತಿ ಸೌಲಭ್ಯ ಕೇಳಿದರು. ಇವರ ಬೇಡಿಕೆ ತಳ್ಳಿ ಹಾಕಿದ್ದರಿಂದ ರಾಷ್ಟ್ರೀಯ ರಾಜಕೀಯದಿಂದ ದೂರವಾಗಿ 'ಮುಸ್ಲಿಂಲೀಗ್‌ನ್ನು' ಬಲಪಡಿಸುವುದರಲ್ಲಿ ನಿರತನಾದನು.

**ಆಂಗ್ಲೋ– ಅಫ್ಘನ್ ಸಂಬಂಧಗಳು**

- ಬ್ರಿಟೀಷರು ಅಫಘಾನಿಸ್ತಾನವನ್ನು ಪ್ರವೇಶಿಸಲು ಕಾರಣ ವಾಣಿಜ್ಯ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವುದು, ಸೈನಿಕ ನೆಲೆಗಳನ್ನು ಸ್ಥಾಪಿಸಿಕೊಳ್ಳುವುದು. ರಷ್ಯಾದ ಪ್ರಭಾವ ತಡೆಗಳು ಅದನ್ನು ಇಂಗ್ಲೇಂಡ್ & ರಷ್ಯಾ ನಡುವೆ ತಡೆ ರಾಷ್ಟ್ರವಾಗಿಡುವುದು ಹಾಗೂ ವಿಭಜಿಸಿ ದುರ್ಬಲವಾಗಿಡುವುದು ಆಗಿದ್ದವು. ಈ ಉದ್ದೇಶಗಳ ಸಾಧನೆಗೆ 03 ಅಫಘನ್ ಯುದ್ಧಗಳಾದವು.

**1. ಮೊದಲ ಆಂಗ್ಲೋ–ಅಫಘನ್ ಯುದ್ಧ (1839–42)**

**ಕಾರಣಗಳು:** ಇಂಗ್ಲೀಷರಿಗೆ ರಷ್ಯಾ ದಾಳಿಯ ಭಯದಿಂದ ಅಫಘಾನಿಸ್ತಾನವನ್ನು ಆಳುತ್ತಿದ್ದ 'ಬದಕ್ಷಾಯಿ' ಮನೆತನದ 'ದೋಸ್ತ್ ಮಹ್ಮದ್'ನ ಸ್ನೇಹ ಬಯಸಿ ಗೌರ್ನರ್ ಜನರಲ್ 'ಲಾರ್ಡ್ ಆಕ್ಲೆಂಡ್'ನು ಕಾಬೂಲಿಗೆ 'ಅಲೆಗ್ಸಾಂಡರ್ ಬರ್ನ್ಸ್' ಎಂಬ ರಾಯಭಾರಿಯನ್ನು ಕಳಿಸಿದ. ಈ ಹಿಂದೆ ದೋಸ್ತ್ ಮಹ್ಮದ್‌ನು ರಣಜಿತ್ ಸಿಂಗ್ ಗೆದ್ದಿದ್ದ ಪೇಷಾವರ ಮರಳಿ ಕೊಡಿಸುವಂತೆ ಬ್ರಿಟೀಷರ ಸಹಾಯ ಕೇಳಿದಾಗ, ರಣಜಿತ್ ಸಿಂಗ್‌ನ ಸ್ನೇಹ ಬಿಟ್ಟುಕೊಡದ ಬ್ರಿಟೀಷರು ದೋಸ್ತ್ ಮಹ್ಮದ್‌ನ ಬೇಡಿಕೆ ತಿರಸ್ಕರಿಸಿದರು.

- ಹೀಗಾಗಿ ಅಷ್ಟರಲ್ಲೇ ರಷ್ಯಾದ ರಾಯಭಾರಿಯೂ ದೋಸ್ತ್ ಮಹ್ಮದ್‌ನ ಆಸ್ಥಾನ ತಲುಪಿದನು. ಹೀಗಾಗಿ ಈತ ತನಗೆ ಯಾರುಪೇಷಾವರ ದೊರಕಿಸಿಕೊಡುವರೋ ಅವರೊಡನೆ ಒಪ್ಪಂದ ಮಾಡಿಕೊಳ್ಳುವುದಾಗಿ ಹೇಳಿದನು. ಅದಕ್ಕೆ ಬರ್ನ್ಸ್‌ನು ಸ್ವತಂತ್ರ ರಾಜ್ಯಗಳ ವ್ಯವಹಾರಗಳಲ್ಲಿ (ರಣಜಿತ್ ಸಿಂಗ್) ಬ್ರಿಟೀಷ್ ಹಸ್ತಕ್ಷೇಪ ಮಾಡುವುದು ಸರಿಯಾದ ಧೋರಣವಲ್ಲವೆಂದು ಹೇಳಿದ. ಹೀಗಾಗಿ ದೋಸ್ತ್‌ನು ರಷ್ಯಾದೊಡನೆ ಸ್ನೇಹ ಸಂಬಂಧ ಬೆಳೆಸಿದನು.
- ಬ್ರಿಟೀಷರು ಪಾಶುಜಾ & ರಣಜಿತ್ ಸಿಂಗ್ ರೊಡನೆ 1838 ರಂದು ಫಿರೋಜ್ ಪುರ ಒಪ್ಪಂದ / ತ್ರಿಪಕ್ಷೀಯ ಒಪ್ಪಂದ ಮಾಡಿಕೊಂಡು ಪಾಶುಜಾನನ್ನು ಅಧಿಕಾರಕ್ಕೆ ತಂದರು.
- ಪಾಶುಜಾ ಬ್ರಿಟೀಷ್ ಸೈನ್ಯ & ರೆಸಿಡೆಂಟ್ ಇಟ್ಟುಕೊಳ್ಳಲು, ಒಪ್ಪಿದನು. ಈ ತ್ರಿಪಕ್ಷೀಯ ಒಪ್ಪಂದವೇ ಮೊದಲ ಆಂಗ್ಲೋ ಅಫಘನ್ ಯುದ್ಧಕ್ಕೆ ಕಾರಣ.
- ಅಫಘನ್ನರು ಸ್ವಾತಂತ್ರ್ಯ ಪ್ರಿಯರಾಗಿದ್ದು, ಪರಕೀಯರ ಆಡಳಿತ ಹಸ್ತಕ್ಷೇಪ ಒಪ್ಪಲಿಲ್ಲ. ಪಾಶುಜಾನನ್ನು ದೇಶದ ಸ್ವಾತಂತ್ರ್ಯವನ್ನು ಪರಕೀಯರಿಗೆ ಮಾರಿದ ದ್ರೋಹಿ ಎಂದು ದೂಷಿಸಿದರು. ಹೀಗಾಗಿ ಅಫಘನ್ನರು ದೋಸ್ತ್ ಮಹ್ಮದನ ಹಿರಿಯ ಮಗ 'ಅಕ್ಬರ್ ಖಾನ್' ನೇತೃತ್ವದಲ್ಲಿ ದಂಗೆ ಎದ್ದರು.
- 1839 ರಲ್ಲಿ 'ಸರ್ ಜಾನ್ ಕೀನ್ & ಸರ್, ವಿರೋಭಿ' ನೇತೃತ್ವದಲ್ಲಿ ಸೈನ್ಯ ಅಫಘನ್ನರ ಮೇಲೆ ದಾಳಿ ಪ್ರಾರಂಭಿಸಿತು. ಅಫಘನ್ನರು ದಂಗೆ ಎದ್ದು ಇಂಗ್ಲೀಷ್ ಅಧಿಕಾರಿಗಳನ್ನು ಕೊಂದು ಹಾಕಿದರು.
- ಕಾಬೂಲಿನ ರೆಸಿಡೆಂಟ್' ಮ್ಯಾಕ್ನಾಟನ್' & ದಂಡನಾಯಕ' ಎಲ್ಲಿನ್ ಸ್ಟೋನ್‌ರು 1841 ರಲ್ಲಿ ಅಕ್ಬರ್ ಖಾನ್ ನೊಡನೆ ಅವಮಾನಕರ ಒಪ್ಪಂದಕ್ಕೆ ಸಹಿ ಹಾಕಿದರು. ಇದರಂತೆ ದೋಸ್ತ್ ಮಹ್ಮದ್ ಬಿಡುಗಡೆ ಹೊಂದಿದ. ಸಿಂಹಾಸನವನ್ನೇರಿದನು. ಅಫಘಾನಿಸ್ತಾನದಿಂದ ಬ್ರಿಟೀಷ್ ಸೈನ್ಯ ವಾಪಸ್ಸು ಕರೆಸಲಾಯಿತು. ಬ್ರಿಟೀಷರು ಅಪಾರ ಹಣ & ಅಪಾರ ಸೈನಿಕರನ್ನು ಕಳೆದುಕೊಂಡಿತು. ಹೀಗಾಗಿ ಅಕ್ಲೆಂಡ್‌ರನ್ನು ವಾಪಸ್ಸು ಕರೆದುಕೊಂಡು 'ಎಲ್ಲೆನ್ ಬರೋ'ನನ್ನು ಗೌರ್ನರ್ ಜನರಲ್ ಆಗಿ ಕಳಿಸಲಾಯಿತು.

**2ನೇ ಆಂಗ್ಲೋ–ಅಫ್ಘನ್ ಯುದ್ಧ (1878–79)**

- 1855 ರಲ್ಲಿ ಬ್ರಿಟೀಷರು ದೋಸ್ತ್ ಮಹ್ಮದನೊಡನೆ ಸ್ನೇಹ ಸಹಕಾರ ಒಪ್ಪಂದ ಮಾಡಿಕೊಂಡು ಪರಸ್ಪರ ಹಸ್ತಕ್ಷೇಪ ನೀತಿ ಅನುಸರಿಸಿದರು. ಆದರೆ ವೈಸ್ರಾಯ್ ಲಾರ್ಡ್ ಲಿಟ್ಟನ್‌ನು 1878 ರಲ್ಲಿ ದೋಸ್ತ್‌ನ ಮಗ 'ಷೇರ್ ಅಲಿ'ಯನ್ನು ಒಪ್ಪಂದಕ್ಕೆ ಸಹಿ ಹಾಕುವಂತೆ ಕೇಳಲಾಯಿತು. ನಿರಾಕರಿಸಲಾಗಿ ಬ್ರಿಟೀಷರು ದಾಳಿ ಮಾಡಿದರು. ಸೋತ ಯಾಕೋಬ್ ಖಾನನು ಬ್ರಿಟೀಷರೊಡನೆ 'ಗಂಡಮಕ್' (1879) ಒಪ್ಪಂದ ಮಾಡಿಕೊಂಡರು. ಬ್ರಿಟೀಷರು ರೆಸಿಡೆಂಟ್‌ನನ್ನು ಇಟ್ಟರು. ಆದರೆ ಅಫಘನ್ನರು ದಂಗೆ ಎದ್ದು, ರೆಸಿಡೆಂಟ್‌ನನ್ನು ಕೊಂದರು. ಬ್ರಿಟೀಷರು ದಂಗೆಯನ್ನು ಅಡಗಿಸಿ ದೋಸ್ತ್‌ನ ಮೊಮ್ಮಗ ಅಬ್ದುಲ್ ರೆಹಮಾನ್‌ನೊಡನೆ ಒಪ್ಪಂದ ಮಾಡಿಕೊಂಡು ಅವನನ್ನು ಕಾಬೂಲಿನ ಅರಸನನ್ನಾಗಿ ಮಾಡಿ, ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪುವಂತೆ ಮಾಡಿದರು.

**3ನೇ ಆಂಗ್ಲೋ–ಅಫಘನ್ ಯುದ್ಧ(1919)**

- ಮೊದಲ ಜಾಗತಿಕ ಯುದ್ಧ & ರಷ್ಯಾ ಕ್ರಾಂತಿಗಳಿಂದ ಪ್ರಭಾವಿತರಾದ ಅಫಘನ್‌ರು ಬ್ರಿಟೀಷರಿಂದ ಮುಕ್ತರಾಗಲು ಪೂರ್ಣ ಸ್ವಾತಂತ್ರ್ಯ ಬೇಡಿದರು. ಅಬ್ದುಲ್ ರಹಮಾನ್ ಸ್ಥಾನದಲ್ಲಿದ್ದ ಅಮೀರ್ ಹಬಿಬುಲ್ಲಾನು (1919) ಕೊಲೆಯಾದನು. ಅವನ ಮಗ ಅಮಾನುಲ್ಲ ಹೊಸ ಅಮೀರನಾಗಿ ಬ್ರಿಟೀಷರ ವಿರುದ್ಧ ಯುದ್ಧ ಸಾರಿದನು.

INSTA KAS



Note : For reference purpose only, not for commercial purpose

- 1919ರ ರಾವಲ್ಪಿಂಡಿ ಒಪ್ಪಂದದ ಪ್ರಕಾರ ಅಫಘಾನಿಸ್ತಾನ ಬ್ರಿಟೀಷರಿಂದ ಸಂಪೂರ್ಣ ಮುಕ್ತಗೊಂಡು ಸ್ವಾತಂತ್ರ್ಯ ಪಡೆಯಿತು.

**ಬರ್ಮಾದೊಂದಿಗೆ ಆಂಗ್ಲರ ಸಂಬಂಧ**

ಮೊದಲ ಆಂಗ್ಲೋ–ಬರ್ಮೀಸ್ ಯುದ್ಧ (1824–26)

**ಕಾರಣಗಳು:**

1) ಬರ್ಮೀಯರು ಅರಕಾನ ಪ್ರದೇಶವನ್ನು ವಶಪಡಿಸಿಕೊಂಡು ಚಿತ್ತಗಾಂಗ್ ಗಡಿಯವರೆಗೂ ನುಗ್ಗಿ ಬಂದರು. ಅಲ್ಲಿಂದ ಪಲಾಯನಗೈದ ಜನ ಬ್ರಿಟೀಷರ ರಕ್ಷಣೆ ಪಡೆದರು. ಬ್ರಿಟೀಷರು ಅವರನ್ನು ಬರ್ಮಾ ಸರಕಾರಕ್ಕೆ ಒಪ್ಪಿಸಲು ನಿರಾಕರಿಸಿತು.
2) ಬರ್ಮೀಯರು ಚಿತ್ತಗಾಂಗ್ ಬಳಿಯ 'ಷಾಪುರಿ' ಎಂಬ ಪುಟ್ಟ ದ್ವೀಪವನ್ನು ವಶಪಡಿಸಿಕೊಂಡು ಬಂಗಾಳದ ಮೇಲೆ ದಾಳಿ ಮಾಡುವ ಬೆದರಿಕೆ ಒಡ್ಡಿದರು.

**ಘಟನೆಗಳು:** ಬ್ರಿಟೀಷ್ ವೈಸ್ರಾಯ್ ಲಾರ್ಡ್ ಅಮಹರ್ಸ್‌ನು ಬರ್ಮೀಯರ ಮೇಲೆ ಯುದ್ಧ ಸಾರಿ, ರಂಗೂನ್ ವಶಪಡಿಸಿಕೊಂಡರು. ಯಾದಂಬೋವನ್ನು ಆಕ್ರಮಿಸಿ 'ಯಾದಂಬೋ ಒಪ್ಪಂದ' ಮಾಡಿಕೊಂಡರು. ಬರ್ಮೀಯರು 1 ಕೋಟಿ ಯುದ್ಧ ಪರಿಹಾರ & ಬ್ರಿಟೀಷ ರೆಸಿಡೆಂಟ್ ಇಟ್ಟುಕೊಳ್ಳಲು ಒಪ್ಪಿದರು.

**2ನೇ ಆಂಗ್ಲೋ–ಬರ್ಮೀಸ್ ಯುದ್ಧ (1852)**

- ಆನಂತರ ಬಂದ ರಾಜಧಾನಿ ಥೆರಾವಡಿ & ಪಾಗಾನ್‌ರು ಯಾರಂಬೋ ಒಪ್ಪಂದವನ್ನು ಉಲ್ಲಂಘಿಸಿ, ಬ್ರಿಟೀಷ್ ವರ್ತಕರಿಗೆ ಹಿಂಸೆ ನೀಡಲಾರಂಭಿಸಿದರು. ಡಾಲ್‌ಹೌಸಿಯು ಈ ಒಪ್ಪಂದದ ಉಲ್ಲಂಘನೆಯ ಪರಿಶೀಲನೆಗೆ ನೌಕಾಧಿಪತಿ 'ಯಾಂಬರ್ಟ್'ನನ್ನು ಕಳಿಸಿದ. ಈತ ಬರ್ಮಿ ದೊರೆಗೆ ಸೇರಿದ ದೋಣಿಯನ್ನು ವಶಪಡಿಸಿಕೊಂಡಿದ್ದು ಯುದ್ಧಕ್ಕೆ ಕಾರಣ.
- ಗೋಡ್ವಿನ್ ನೇತೃತ್ವದಲ್ಲಿ ಬಂದ ಬ್ರಿಟೀಷ್ ಸೈನ್ಯ ಬರ್ಮೀಯರನ್ನು ಸೋಲಿಸಿತು. ನಂತರ ಬರ್ಮೀಯರು 02 ದಶಕಗಳ ಕಾಲ ಬ್ರಿಟೀಷರೊಂದಿಗೆ ಶಾಂತಿಯಿಂದ ಇದ್ದರು.

**3ನೇ ಆಂಗ್ಲೋ–ಬರ್ಮಿಸ್ ಯುದ್ಧ (1885)**

- 2ನೇ ಬರ್ಮಿ ಯುದ್ಧದಲ್ಲಿ ಕೇವಲ ದಕ್ಷಿಣ ಬರ್ಮಾ ಮಾತ್ರ ಬ್ರಿಟೀಷರ ವಶವಾಯಿತು. ಹೀಗಾಗಿ ಬ್ರಿಟೀಷರು ಉತ್ತರ ಭಾರತದ ಮೇಲೂ ಹಿಡಿತ ಸಾಧಿಸಲು ಯತ್ನಿಸಿದರು. ಆದರೆ ಅರಸ ಥಿಬಾನು ಇದಕ್ಕೆ ಅವಕಾಶ ನೀಡಲಿಲ್ಲ.
- ಬರ್ಮಾದ ರಾಜ ಫ್ರಾನ್ಸ್‌ನೊಂದಿಗೆ ವಾಣಿಜ್ಯ ಸಂಬಂಧ ಹೊಂದಲು ಹವಣಿಸಿ ಬ್ರಿಟೀಷ್ ವ್ಯಾಪಾರಿ ಕಂಪೆನಿಯ ಮೇಲೆ ಹೆಚ್ಚಿನ ತೆರಿಗೆ ವಿಧಿಸಿದ್ದು ಈ ಯುದ್ಧಾರಂಭಕ್ಕೆ ನೇರ ಕಾರಣವಾಯಿತು.
- ಬ್ರಿಟೀಷರು ಪೂರ್ಣ ಬರ್ಮಾವನ್ನು ವಶಪಡಿಸಿಕೊಂಡು ಅದಕ್ಕೆ ಲೆಫ್ಟಿನೆಂಟ್ ಗೌರ್ನರ್‌ನ್ನು ನೇಮಿಸಲಾಯಿತು. ರಂಗೂನ್ ಅದರ ರಾಜಧಾನಿಯಾಯಿತು. ಬ್ರಿಟೀಷ್ ಸಾಮ್ರಾಜ್ಯ ಚೀನಾದವರೆಗೂ ವಿಸ್ತರಿಸಿತು.
- ಬರ್ಮಾ 1935 ರಲ್ಲಿ ಭಾರತದಿಂದ ಪ್ರತ್ಯೇಕವಾಯಿತು.

**ನೇಪಾಳದೊಂದಿಗೆ ಬ್ರಿಟೀಷ್ ಸಂಬಂಧಗಳು**

**ನೇಪಾಳಿ ಯುದ್ಧ (1814–16)**

- ಗೂರ್ಖಾಗಳು ಬ್ರಿಟೀಷರ ವಶದಲ್ಲಿದ್ದ ಬತ್ವಾಲ & ಶೂಯರೆಜ್ ಜಿಲ್ಲೆಗಳನ್ನು ವಶಪಡಿಸಿಕೊಂಡು ಔಧ್ & ಬಂಗಾಳದ ಮೇಲೆ ಪ್ರಭುತ್ವ ಸಾಧಿಸಲು ನುಗಿಬಂತು. ಬ್ರಿಟೀಷರು ಅವರನ್ನು ಮುತ್ತಿಕ್ಕಿದರು. ಆದರೆ ಗೂರ್ಖಾಗಳು ಬ್ರಿಟೀಷ್ ಸೇನಾನಿ ಗಿಲಿಸ್ಪಿಯನ್ನು ಕೊಂದರು. ಗೌರ್ನರ್ ಹೇಸ್ಟಿಂಗ್ಸ್‌ನು ಸುಸಜ್ಜಿತ ಸೈನ್ಯ ಕಳಿಸಿ ಗೂರ್ಖಾ ಸೇನಾನಿ ಅಮರ್ ಸಿಂಗ್‌ನನ್ನು ಸೋಲಿಸಿ 'ಸಗೌಲಿ ಒಪ್ಪಂದ 1816 ಮಾಡಿಕೊಂಡರು.
- ಒಪ್ಪಂದದಂತೆ, ಬ್ರಿಟೀಷರು ನೈನಿತಾಲ್, ಮಸ್ಸೂರಿ, ಸಿಮ್ಲಾ, ಡೆಹರಾಡೂನ್, ಅಲೆಧಿಷಾ ರಾಣಿಖೇತ್ ಗಿರಿಧಾಮಗಳನ್ನು ಪಡೆದು, ಖಠ್ಮಂಡುವಿನಲ್ಲಿ ರೆಸಿಡೆಂಟ್‌ನನ್ನು ಇಟ್ಟರು. ಸಿಕ್ಕಿಂ ಪೂರ್ಣ ಬ್ರಿಟೀಷರ ವಶವಾಯಿತು.

**ಟಿಬೆಟ್‌ನೊಂದಿಗೆ ಬ್ರಿಟೀಷರ ಸಂಬಂಧಗಳು**

- ಲಾಮ ಪುರೋಹಿತ ಟಿಬೇಟಿನ ಸಾರ್ವಭೌಮನಾಗಿದ್ದ. ಓಬೆಟ್ ನಾಮಮಾತ್ರಕೆ ಚೀನಾದ ಸಾರ್ವಭೌಮತ್ವಕ್ಕೆ ಒಳಗಾಗಿತ್ತು.
- 1887 ರಲ್ಲಿ ಬ್ರಿಟೀಷರು ಟಿಬೆಟಿನಲ್ಲಿ ವ್ಯಾಪಾರ ಸೌಲಭ್ಯ ಗಿಟ್ಟಿಸಿಕೊಳ್ಳಲು 'ಬೊಗ್ಲೆ' ನೇತೃತ್ವದಲ್ಲಿ 'ತಷಿಲಾಮ' ಬಳಿಗೆ ನಿಯೋಗ ಕಳಿಸಿದರು. ಬ್ರಿಟೀಷ್ ವ್ಯಾಪಾರವನ್ನು ವಿರೋಧಿಸಿ ಸಿಕ್ಕಿಂ ವಶಪಡಿಸಿಕೊಂಡರು. ಆದರೆ ಬ್ರಿಟೀಷರು ಹಿಮ್ಮೆಟಿಸಿದರು.
- ಟಿಬೆಟ್ ಕ್ರಮೇಣ ರಷ್ಯಾ ಪ್ರಭಾವಕ್ಕೆ ಬರುತ್ತಿದೆ ಎಂದು ಭಾವಿಸಿ ಬ್ರಿಟೀಷರು 1903 ರಲ್ಲಿ ವೈಸ್ರಾಯ್ ಲಾರ್ಡ್ ಕರ್ಜನ್, ಕರ್ನಲ್ ಯಂಗ್ ಹಸ್ಬೆಡ್ ನೇತೃತ್ವದಲ್ಲಿ ನಿಯೋಗ ಕಳಿಸಿ ಟಿಬೆಟರ ಪ್ರತಿಭಟನೆಯ ನಡುವೆಯೇ 'ಲ್ಹಾಸಾ' ಒಪ್ಪಂದವಾಯಿತು.

**ಒಪ್ಪಂದಗಳು:** ಟಿಬೆಟ್ಟಿನ ಆಡಳಿತದಲ್ಲಿ ತಲೆ ಹಾಕುವುದಿಲ್ಲವೆಂದು ಹೇಳಿ ಗ್ಯಾಂಗಿಟ್ಟಿಯಲ್ಲಿ ಬ್ರಿಟೀಷ್ ನಿಯೋಗವನ್ನು ತೆರೆಯಲಾಯಿತು. ಇದಕ್ಕೆ ಪ್ರತಿಯಾಗಿ ಟಿಬೇಟಿಯನ್ನರು ಟಿಬೇಟ್‌ನಲ್ಲಿ ವಿದೇಶಿಯ ಶಕ್ತಿಗಳು ಕಾಲಿಡಲು ಬಿಡುವುದಿಲ್ಲ ಎಂಬ ಭರವಸೆ ನೀಡಿತ್ತು.

- 1910 ರಲ್ಲಿ ಚೀನಾ ಟಿಬೆಟನ್ನು ಸಂಪೂರ್ಣವಾಗಿ ಆಕ್ರಮಿಸಿಕೊಂಡಿತ್ತು. ಟಿಬೆಟಿನ ಬೌದ್ಧ ಗುರು 'ದಲೈಲಾಮಾ' ಭಾರತಕ್ಕೆ ಓಡಿ ಬಂದನು. 1911 ರಲ್ಲಿ ದಂಗೆ ಎದ್ದು ಚೀನಿಯರನ್ನು ಓಡಿಸಿದರು.
- ಟಿಬೆಟಿನ ಮೇಲೆ ಚೀನಾದ ಸಾರ್ವಭೌಮತ್ವದ ಪ್ರಶ್ನೆ ಇತ್ಯರ್ಥಗೊಳಿಸಲು ಬ್ರಿಟೀಷರು 1913 ರಲ್ಲಿ ತ್ರಿಪಕ್ಷೀಯ ಸಮ್ಮೇಳನ ಏರ್ಪಡಿಸಿ, ಟಿಬೆಟನ್ನು 2 ವಲಯಗಳಾಗಿ ವಿಂಗಡಿಸಿ, & 02 ರ ಮೇಲೂ ಚೀನಾದ ಸಾರ್ವಭೌಮತ್ವ ಅಂಗೀಕರಿಸಲಾಯಿತು.
- 1914 ರ ಶಿಮ್ಲಾ ಸಮ್ಮೇಳನದಲ್ಲಿ ಬ್ರಿಟೀಷ್ & ಟಿಬೇಟರ ನಡುವೆ ಆಗಿನ ಭಾರತ ಸರ್ಕಾರದ ಕಾರ್ಯದರ್ಶಿಯಾಗಿದ್ದ ಮ್ಯಾಕ್‌ಮೊಹನ್‌ರು ಭಾರತ & ಟಿಬೆಟಿನ ನಡುವಿನ ಈಶಾನ್ಯದಲ್ಲಿ ಗಡಿರೇಖೆಯನ್ನು ಗುರುತಿಸಿತು. ಇದೇ ಮ್ಯಾಕ್‌ಮೋಹನ್ ಗಡಿ ರೇಖೆ.

**ಭೂತಾನ್:** 1774 ರಲ್ಲಿ ಭೂತಾನ್ ದೊರೆಯೊಂದಿಗೆ ವಾಣಿಜ್ಯ ಒಪ್ಪಂದ ಮಾಡಿಕೊಂಡ ಬ್ರಿಟೀಷರು ಚೀನಾದೊಡನೆ ಹಾದುಹೋಗಲು ರಹದಾರಿ ಪಡೆದುಕೊಂಡಿದ್ದರು. ಈ ವ್ಯಾಪಾರ ಮಾರ್ಗಗಳ ಒಡೆತನ ಪುನ: ಹೊಂದಲು ಬಯಸಿ 1865 ರಲ್ಲಿ ಯುದ್ಧ ತಿಳಿಯಿತು (ಭೂತಾನ್). ಆದರೆ ಬ್ರಿಟೀಷರಿಂದ ಸೋತು ಒಪ್ಪಂದ ಮಾಡಿಕೊಂಡಿತು. ಭೂತಾನ್ ತನ್ನ ವಿದೇಶಾಂಗ ನೀತಿಯನ್ನು ಬ್ರಿಟೀಷರಿಗೆ ಒಪ್ಪಿಸಿತು. ಬ್ರಿಟೀಷರು ಭೂತಾನ್ ಆಂತರಿಕ ವ್ಯಾಪಾರದಲ್ಲಿ ತಲೆ ಹಾಕುವುದಿಲ್ಲವೆಂದು ಒಪ್ಪಿಕೊಂಡಿತು.

**ಬ್ರಿಟೀಷರ ಆಡಳಿತ ವ್ಯವಸ್ಥೆ – 1857 ವರೆಗೆ**

2 ಹಂತವಾಗಿ ವರ್ಗೀಕರಿಸಲಾಗಿದೆ.

1) ಬ್ರಿಟೀಷ್ ಈಸ್ಟ್ ಇಂಡಿಯಾ ಕಂಪೆನಿಯ ಆಡಳಿತ ಕಾಲ – 1600–1857
2) ಬ್ರಿಟೀಷ್ ಚಕ್ರಾಧಿಪತ್ಯ ಆಡಳಿತ ಕಾಲ – 1857–1947

**ಬ್ರಿಟೀಷ್ ಈಸ್ಟ್ ಇಂಡಿಯಾ ಕಂಪೆನಿಯ ಆಡಳಿತ ಕಾಲ**

INSIA KAS



Note : For reference purpose only, not for commercial purpose

- ಬ್ರಿಟೀಷ್ ಈಸ್ಟ್-ಇಂಡಿಯಾ ಕಂಪೆನಿ 1600 ರ ಡಿಸೆಂಬರ್ 31 ರಂದು ಸ್ಥಾಪನೆಯಾಯಿತು. ಬ್ರಿಟನ್ ರಾಣಿ 1ನೇ ಎಲಿಜೆಬೆತಳು ನೀಡಿದ 15 ವರ್ಷಗಳ ವ್ಯಾಪಾರ ಸನ್ನದು ಪ್ರಕಾರ ಅಸ್ತಿತ್ವಕ್ಕೆ ಬಂದಿತು. ಪ್ರತಿ 15 ವರ್ಷಗಳಿಗೊಮ್ಮೆ ನವೀಕರಿಸಲ್ಪಡುತ್ತಿತ್ತು.
- ಆನಂತರದಲ್ಲಿ ಹಲವು ವ್ಯಾಪಾರ ಕಂಪೆನಿಗಳು ಹುಟ್ಟಿಕೊಂಡವು. ಕಾರ್ಟಿನ್ ಅಸೋಸಿಯೇಶನ್(1637). ದಿ ಇಂಗ್ಲೀಷ್ ಟ್ರೇಡ್ ಕಂಪೆನಿ ಟ್ರೇಡಿಂಗ್ ಟು ಈಸ್ಟ್ ಇಂಡೀಸ್(1698). ಇವುಗಳಿಂದಾಗಿ ಹಳೇ ಕಂಪೆನಿಗೆ ಹಿನ್ನಡೆಯಾಯಿತು.
- 1702 ರಲ್ಲಿ ಇವೆಲ್ಲ ಒಗ್ಗೂಡಿ 'ದಿ ಯುನೈಟೆಡ್ ಕಂಪೆನಿ ಆಫ್ ಮರ್ಚೆಂಟ್ ಆಫ್ ಇಂಗ್ಲೆಂಡ್ ಟ್ರೇಡಿಂಗ್ ಟು ದಿ ಈಸ್ಟ್ ಇಂಡೀಸ್'ನ್ನು ಸ್ಥಾಪಿಸಿಕೊಂಡವು. ಮುಂದೆ ಇದೇ 'ಈಸ್ಟ್ ಇಂಡಿಯಾ ಕಂಪೆನಿ' ಎಂದು ಹೆಸರಾಯಿತು.

**ಕಂಪೆನಿಯ ಆಡಳಿತಾಂಗಗಳು:** ಉಸ್ತುವಾರಿಗೆ 03 ಆಡಳಿತಾಂಗಗಳಿದ್ದವು.

1) **ಕೋರ್ಟ್ ಆಫ್ ಪ್ರೊಪ್ರೆಟರ್ಸ್:** ಕಂಪೆನಿಗೆ ಮೂಲ ಬಂಡವಾಳ ಒದಗಿಸಿದವರಾಗಿದ್ದು, ಕಂಪೆನಿಯ ಷೇರುದಾರರಾಗಿದ್ದರು. ಇವರು ಕಂಪೆನಿಯ ಗೌರ್‍ನರ್ & ಡೈರೆಕ್ಟರ್‌ರನ್ನು ನೇಮಿಸುತ್ತಿದ್ದರು. ಕಂಪೆನಿಗೆ ನಿರ್ದೇಶನ ನೀಡುತ್ತಿದ್ದರು.
2) **ಬೋರ್ಡ್ ಆಫ್ ಡೈರೆಕ್ಟರ್ಸ್:** ಕಂಪೆನಿಯ ಆಡಳಿತವನ್ನು ನಿರ್ದೇಶಿಸುವ & ಕಂಪೆನಿಯ ಮೇಲೆ ಪೂರ್ಣ ಪ್ರಮಾಣದ ಅಧಿಕಾರ ಹೊಂದಿದ ಅಂಗ. ಒಬ್ಬ ಗೌರ್‍ನರ್, ಒಬ್ಬ ಉಪಗೌರ್‍ನರ್ & 24 ಸದಸ್ಯರನ್ನು ಹೊಂದಿತ್ತು. ಇದನ್ನು ಕೋರ್ಟ್ ಆಫ್ ಡೈರೆಕ್ಟರ್ಸ್' ಎನ್ನಲಾಗುತ್ತಿತ್ತು.
   - ಅಂತಿಮವಾಗಿ ಕಂಪೆನಿ ನಿಯಂತ್ರಣಾಧಿಕಾರ ಬ್ರಿಟನ್ ಚಕ್ರವರ್ತಿ ಮತ್ತು ಪ್ರಿವಿ ಕೌನ್ಸಿಲ್(ಸಲಹಾ ಸಮಿತಿ) ಸೇರಿದಿತ್ತು. ಇವೆರಡು ಆಡಳಿತ ಅಂಗಗಳು 1784 ರ ಪಿಟ್ ಅಥವಾ ಇಂಡಿಯಾ ಕಾಯಿದೆವರೆಗೂ ಮುಂದುವರೆದವು.
3) **ಬೋರ್ಡ್ ಆಫ್ ಕಂಟ್ರೋಲ್:** ದ್ವಿ ಸರಕಾರ ವೈಫಲ್ಯ & ರೆಗ್ಯುಲೇಟಿಂಗ್ ಕಾಯಿದೆ ದೋಷದಿಂದಾಗಿ ಕಂಪೆನಿಯ ಮೇಲೆ ಬ್ರಿಟನ್ ಪರಮಾಧಿಕಾರ ಹೆಚ್ಚಿಸಲು ಪಿಟ್ ಇಂಡಿಯಾ ಕಾಯಿದೆ ಜಾರಿಗೆ ತಂದು ಇಂಗ್ಲೆಂಡಿನಲ್ಲಿ 06 ಜನ ಕಮಿಷನರನ್ನೊಳಗೊಂಡ ಬೋರ್ಡ್ ಆಫ್ ಕಂಟ್ರೋಲ್ ಸ್ಥಾಪಿಸಲಾಯಿತು.
   - ಇದು ಬೋರ್ಡ್ ಆಫ್ ಡೈರೆಕ್ಟರ್ ಮಂಡಳಿಯ ಮೇಲೆ ಪರಿಣಾಮಕಾರಿ ಮೇಲ್ವಿಚಾರಣೆ ನಡೆಸುವ ಅಧಿಕಾರ ಹೊಂದಿತ್ತು. ಡೈರೆಕ್ಟರ್ ಮಂಡಳಿಯು ಯಾವುದೇ ನಿರ್ಧಾರಗಳನ್ನು ರದ್ದು ಮಾಡುವ ಅಧಿಕಾರ ಹೊಂದಿತ್ತು.
4) **ಪ್ರೆಸಿಡೆನ್ಸಿ ಆಡಳಿತ:** ಬ್ರಿಟೀಷ್ ಸಾಮ್ರಾಜ್ಯ ವಿಸ್ತರಿಸಿದಂತೆ ಅಕ್ಕಪಕ್ಕದ ಪ್ರೆಸಿಡೆನ್ಸಿಗಳನ್ನು ಕೂಡಿಸಿ 03 ಪ್ರೆಸಿಡೆನ್ಸಿಗಳನ್ನು ಸ್ಥಾಪಿಸಲಾಯಿತು. ಇವು ಕಲ್ಕತ್ತಾ, ಬಾಂಬೆ, ಮದ್ರಾಸ್‌ಗಳು, ಇವು ಕ್ರಮವಾಗಿ 23, 76, & 36 ಜಿಲ್ಲೆಗಳನ್ನು ಹೊಂದಿದ್ದವು. ಇವು ಬ್ರಿಟೀಷ್ ಚೀಫ್ ಪ್ರೆಸಿಡೆನ್ಸಿಗಳಾಗಿದ್ದವು. ಪ್ರತಿಯೊಂದು ಪ್ರೆಸಿಡೆನ್ಸಿ ಒಬ್ಬೊಬ್ಬ ಗೌರ್‍ನರ್ & ಅವನ ಕೌನ್ಸಿಲ್‌ನ ಆಡಳಿತದಲ್ಲಿತ್ತು.
   - ಪ್ರತಿ ಪ್ರೆಸಿಡೆನ್ಸಿಯ ಗೌರ್‍ನರನು, ಕಲ್ಕತ್ತಾ ಗೌರ್‍ನರ್ ಜನರಲ್‌ನ ಆದೇಶದಂತೆ ನಡೆಯಬೇಕಿತ್ತು.
   - 1833 ರಲ್ಲಿ ಬಂಗಾಳಕ್ಕೆ ಒಬ್ಬ ಉಪಗೌರ್‍ನರ್‌ನನ್ನು & 1853 ರಲ್ಲಿ ಲೆಫ್ಟಿನೆಂಟ್ ಗೌರ್‍ನರ್‌ನನ್ನು ನೇಮಿಸಲಾಯಿತು.
   - ಪಂಜಾಬ್, ಕೊಡಗು & ಮೈಸೂರುಗಳು ಬ್ರಿಟೀಷ್ ಚೀಫ್ ಕಮಿಷನರ್ ಆಳ್ವಿಕೆಗೆ ಒಳಗಾಯಿತು.

# ರೈತ ಚಳುವಳಿಗಳು ಮತ್ತು ಬುಡಕಟ್ಟು ದಂಗೆಗಳು

**ರೈತ ಚಳುವಳಿಗಳು**

**ನೀಲಿ ಬೆಳೆಗಾರರ ಚಳುವಳಿ – 1860 (ಬಂಗಾಳ)**

- ಇದು ಆಧುನಿಕ ಭಾರತದ ಅತಿ ದೊಡ್ಡ ರೈತ ಚಳುವಳಿ. ಇದು ಬ್ರಿಟೀಷ್ ನೀಲಿ ಪ್ಲಾಂಟರ್‌ಗಳ ವಿರುದ್ಧ ನಡೆಯಿತು. ನೀಲಿ ಬಟ್ಟೆಗೆ ಬಣ್ಣಹಾಕಲು ಬೇಕಾಗುತ್ತದೆ. ನೀಲಿ ಇಂಗ್ಲೇಂಡಿನ ಬಟ್ಟೆ ಕೈಗಾರಿಕೆಗಳಿಗೆ ಅತ್ಯಗತ್ಯವಾಗಿತ್ತು. ರೈತರಿಂದ ಬಲವಂತವಾಗಿ ನೀಲಿ ಬೆಳೆ ಬೆಳೆಸುತ್ತಿದ್ದರು. ಇಲ್ಲದಿದ್ದರೇ ಅತಿ ಹಿಂಸೆ ನೀಡುತ್ತಿದ್ದರು.
- ಮುಷ್ಕರದ ನಾಯಕರುಗಳಾದ ಬಿಷ್ಣು ಬಿಸ್ವಾ & ದಿಗಂಬರ್ ಬಿಸ್ವಾಸ್‌ರವರುಗಳ 20,000 ರೈತರೊಂದಿಗೆ ಗೋವಿಂದಪುರ, ಢಾಕಾ, ಖುಲ್ನಾ, ಮಾಲ್ಡಾ, ದಿನಜ್‌ಪುರ್‌ಗಳಲ್ಲಿ ಮುಷ್ಕರ ಹೂಡಿದ್ದರು. ಕೊನೆಗೆ ರೈತರ ಒತ್ತಡಕ್ಕೆ ಮಣಿದ ಸರಕಾರ 'ನೀಲಿ ಆಯೋಗ' ಸ್ಥಾಪಿಸಿತು. ಇದು ರೈತರು ತಮಗಿಷ್ಟದ ಬೆಳೆ-ಬೆಳೆಯಬಹುದೆಂದು ತಿಳಿಸಿತು.
- ಹಿಂಸೆ ಇಲ್ಲದೇ ಅಸಹಕಾರ ಚಳುವಳಿಯ ಮೂಲಕ ಜಯಪಡೆಯದೇ ಇಂಡಿಗೋ ಚಳುವಳಿ ಮಹತ್ವ ಪಡೆದುಕೊಂಡಿದೆ.
- ಹರಿಶ್ಚಂದ್ರ ಮುಖರ್ಜಿಯ 'ಹಿಂದೂ ದೇಶಭಕ್ತ' ಹಾಗೂ ದೀನಬಂಧುಮಿತ್ರರ ನಾಟಕವಾದ 'ನೀಲದರ್ಪಣ'ದ ಸಾರ ಇಂಡಿಗೋ ಚಳುವಳಿಯೇ ಆಗಿದೆ.

**ಮಹಾರಾಷ್ಟ್ರದ ರೈತರ ದಂಗೆ (ಪೂನಾ):**

- ರೈತ್ವಾರಿ ಪದ್ಧತಿ ಜಾರಿಗೆ ತಂದು ರೈತರ ಮೇಲೆ ಅಧಿಕ ಕಂದಾಯ ಹೇರಿದರು. ಇದರಿಂದ ರೈತರು ರೋಸಿ ಹೋಗಿ ಒಕ್ಕೂಟ ರಚಿಸಿಕೊಂಡು 1875 ರಲ್ಲಿ ಲೇವದೇವಿಗಾರರು & ಜಮೀನ್ದಾರರ ವಿರುದ್ಧ ದಂಗೆ ಎದ್ದರು. ಇಡೀ 'ಪೂನಾ' ಜಿಲ್ಲೆ ದಂಗೆಯಲ್ಲಿ ಮುಳುಗಿತು.
- ದಂಗೆಯನ್ನು ಹತ್ತಿಕ್ಕಿ 1879 ರಲ್ಲಿ ದಖ್ಖನ್ ಕೃಷಿ ಪರಿಹಾರ ಕಾಯ್ದೆ ಜಾರಿ ಮಾಡಿ ರೈತರು ಭೂಮಿ ಅಡವಿಡದಂತೆ ನಿರ್ಬಂಧಿಸಲಾಯಿತು. ಸರ್ಕಾರಿ & ಲೇವದೇವಿಗಾರರನ್ನು ರಕ್ಷಿಸಲಾಯಿತು.
- ಜಸ್ಟೀಸ್ ರಾನಡೆ & ಬಲವಂತ ಫಡಕರು ಈ ದಂಗೆಯನ್ನು ಮುನ್ನಡೆಸಿದರು. ಫಡೆಯವರನ್ನು 'ಭಾರತದ ಪ್ರಥಮ ರಾಷ್ಟ್ರೀಯ ಕ್ರಾಂತಿಕಾರಿ' ಎಂದು ಕರೆಯಲಾಗಿದೆ. ತಿಲಕರು ಕರನಿರಾಕರಣೆ ಚಳುವಳಿಯನ್ನು ಪೂನಾದಲ್ಲಿ ನಡೆಸಿದರು.
- 1919 ರ ಪ್ರತಾಪ್ ಗಢ್ ತಾಲ್ಲೂಕುದಾರರ ಮೇಲೆ ರೈತರು 'ಬಾಬಾ ರಾಮಚಂದ್ರ' ಎಂಬ ಸಾಧು ನಾಯಕತ್ವದಲ್ಲಿ 'ನೈದೋಬಿ ಬಹಿಷ್ಕಾರ' ಚಳುವಳಿ ನಡೆಯಿತು.

**ಮಾಪಿಳ್ಳೆ ದಂಗೆ(1921) (ಮಲಬಾರ್)**

- ಮಾಪಿಳ್ಳೆ ಎಂದರೆ ಮಲಬಾರಿನ ಮುಸ್ಲೀಂ ರೈತರು ಎಂದರ್ಥ. ಇವರು ಬಡರೈತರಾಗಿದ್ದು, ಟೀ-ಕಾಫೀ ಎಸ್ಟೇಟ್‌ಗಳಲ್ಲಿ ದುಡಿಯುತ್ತಿದ್ದರು.
- ಹಿಂದೂ ನಂಬೂದಿ ಬ್ರಾಹ್ಮಣ & ನಾಯರ್ ಈ ಜಮೀನ್ದಾರರು ಮಾಪಿಳ್ಳೆ ರೈತರಿಗೆ ಅಧಿಕ ಭೂ ಕಂದಾಯ ಹೇರಿ ಹಲವು ರೀತಿಯಲ್ಲಿ ಶೋಷಣೆ ನೀಡಿ ಹಿಂಸೆಗೊಳಿಸುತ್ತಿದ್ದರು. ಕೋರ್ಟ್‌ಗೆ ಹೋದರೂ ತೀರ್ಪುಗಳು ಇವರ ಪರವಾಗೇ ಬರುತ್ತಿದ್ದವು.
- ಹೀಗಾಗಿ ರೋಸಿಹೋದ ಮಾಪಿಳ್ಳೆಗಾರರು ನಂಬೂದ್ರ ಜಮೀನ್ದಾರರ ವಿರುದ್ಧ ದಂಗೆ ಎದ್ದರು. **'ತಿರಂಗಾಡಿ'** ದಂಗೆಯ ಕೇಂದ್ರವಾಗಿತ್ತು. ಸುಮಾರು 28 ದಂಗೆಗಳಾದವು. ಅದೇ ಕಾಲಕ್ಕೆ ಖಿಲಾಫತ್ ಚಳುವಳಿ ನಡೆಯುತ್ತಿದ್ದರಿಂದ ಮಾಪಿಳ್ಳೆಗಳು ತಮ್ಮ ಧರ್ಮದ ಹೆಸರಿನಲ್ಲಿ ಮತೀಯ ಹೋರಾಟಕ್ಕೆ ಇಳಿದಿದ್ದರಿಂದ ದಂಗೆ ತನ್ನ ಮೂಲ ಉದ್ದೇಶ ಕಳೆದುಕೊಂಡು ವಿಫಲವಾಯಿತು.



Note : For reference purpose only, not for commercial purpose

- ಈ ದಂಗೆಯಲ್ಲಿ ಕಲ್ಕತ್ತಾದ ಕಪ್ಪು ಕೋಣೆ ದುರಂತದಲ್ಲಿ ಮಾದರಿಯಲ್ಲಿ 66 ಮಾಪಿಳ್ಳೆಗಳನ್ನು ಒಂದು ಚಿಕ್ಕ ರೈಲು ಡಬ್ಬಿಯಲ್ಲಿ ಕೂಡಿ ಹಾಕಿ ರಾತ್ರಿ ಉಸಿರುಕಟ್ಟಿ ಸಾಯುವಂತೆ ಮಾಡಲಾಗಿತ್ತು.
- ಮುಂದೆ ಬಂದ ಮಲಬಾರ್ ಟೆನೆನ್ಸಿ ಕಾಯಿದೆ ರೈತರ ಗುತ್ತಿಗೆಯನ್ನು ಖಾಯಂಗೊಳಿಸಿತು.

**ಪಾಬ್ನಾ ದಂಗೆ (1873) (ಬಂಗಾಳ)**

- ಪಾಬ್ನಾ ಬಂಗಾಳದ ಶ್ರೀಮಂತ ಜಿಲ್ಲೆ. ಜಮೀನ್ದಾರರು ರೈತರ ಮೇಲೆ ಅಧಿಕ ಕಂದಾಯ ವಿಧಿಸಿದ್ದಲ್ಲದೇ ಭೂಮಿ ಕಿತ್ತುಕೊಳ್ಳುವ ಹೀನಕೃತ್ಯಕ್ಕೆ ಇಳಿದಿದ್ದು, ಅಳತೆ–ತೂಕಗಳಲ್ಲಿ ಮೋಸಮಾಡುತ್ತಿದ್ದರು. 1793–1832 ರ ನಡುವೆ 7 ಪಟ್ಟು ಕಂದಾಯದಲ್ಲಿ ಹೆಚ್ಚಳವಾಗಿತ್ತು.
- ಹೀಗಾಗಿ ರೈತರು ಒಗ್ಗೂಡಿ ಪಾಬ್ನಾ ಆಗ್ರೇರಿಯನ್ ಲೀಗ್‌ನ್ನು ರಚಿಸಿಕೊಂಡು ಗೇಣಿ ಇಳಿಸುವಂತೆ ಹಲವು ಸಭೆಗಳನ್ನು ನಡೆಸಿ ಮನವಿ ಮಾಡಿಕೊಂಡರು. ಆದರೆ ಯಾವ ಫಲವೂ ಸಿಗದೇ ಯುಸೂಫ್ ಶಾಹಿ ಪರಗಣ & ಪಾಬ್ನಾದಲ್ಲಿ ರೈತರು ಜಮೀನ್ದಾರರ ವಿರುದ್ಧ ದಂಗೆ ಎದ್ದರು.
- ಈ ದಂಗೆ ಬ್ರಿಟೀಷರ ವಿರುದ್ಧವಾಗಿಲ್ಲದಿದ್ದರಿಂದ ಸರ್ಕಾರ ಮಧ್ಯಪ್ರವೇಶಿಸಿ ಗೇಣಿ ಇಳಿಸಲು ಒಪ್ಪಿಕೊಂಡಿತು.

**ಅಸ್ಸಾಂ ರೈತರ ದಂಗೆ (1893)**

- ಎಸ್.ಎನ್.ಬ್ಯಾನರ್ಜಿ, ಬಂಕಿಂಚಂದ್ರ, ಆರ್.ಸಿ.ದತ್‌ರು, ಚಳುವಳಿಯನ್ನು ಬೆಂಬಲಿಸಿದರು.
- ಸರಕಾರ ಅಧಿಕ ಕಂದಾಯ ಹೇರಿತು, ರೈತರು ಕೊಡದಿದ್ದಾಗ ಅವರ ಭೂಮಿಯನ್ನು ಮುಟ್ಟುಗೋಲು ಹಾಕಿಕೊಂಡಿತು. ಹೀಗಾಗಿ ರೈತರು ದಂಗೆ ಎದ್ದರು.

**ಚಂಪಾರಣ್ಯ ಸತ್ಯಾಗ್ರಹ(1917):** ಇಂಡಿಗೋ ಚಳುವಳಿಯ ಮುಂದುವರೆದ ಭಾಗ.

**ಬಾರ್ಡೋಲಿ ರೈತರ ಸತ್ಯಾಗ್ರಹ (1929–30) ಗುಜರಾತ್**

- ಗುಜರಾತಿನ ಬಾರ್ಡೋಲಿ ಜಿಲ್ಲೆಯಲ್ಲಿ ಬಾಂಬೆ ಸರಕಾರ ರೈತರ ಮೇಲೆ 22 ಕಂದಾಯ ಹೆಚ್ಚಿಸಿತು. ರೈತರು ಸರ್ದಾರ್ ವಲ್ಲಭಾಯಿ ಪಟೇಲರ ಮೊರೆ ಹೋದರು. ಪಟೇಲರು ಗಾಂಧೀಜಿಯ ಸಲಹೆಯಂತೆ ಫೆ.12, 1929 ರಂದು ಬಾರ್ಡೋಲಿಯಲ್ಲಿ ಸತ್ಯಾಗ್ರಹ ಹೂಡಿದರು.
- ವಿದ್ಯಾರ್ಥಿಗಳ 1,500 ಜನರ ತಂಡ ಪಟೇಲರಿಗೆ ನೆರವಾಗಿ 'ಬಾರ್ಡೋಲಿ ಸತ್ಯಾಗ್ರಹ' ಎಂಬ ಪತ್ರಿಕೆ ಮುದ್ರಿಸಿ ಹಂಚಿದರು. ಆದರೆ ಸರಕಾರ ರೈತರ ಮೇಲೆ ಕ್ರೂರ ದಬ್ಬಾಳಿಕೆ ನಡೆಸಿತು. ಇದನ್ನು ಗುರ್ತಿಸಿ ಬಾಂಬೆ ಸಂವಿಧಾನ ಸಭೆಯ ಗುಜರಾತಿನ ಸದಸ್ಯರು ಸಾಮೂಹಿಕ ರಾಜೀನಾಮೆ ನೀಡಿದರಲ್ಲದೇ,
- ಬಾಂಬೆ ವಿಧಾನಸಭಾಧ್ಯಕ್ಷನಾದ 'ವಿಠ್ಠಲಬಾಯಿ ಪಟೇಲರು' ಸತ್ಯಾಗ್ರಹಿಗಳಿಗೆ ತಿಂಗಳಿಗೆ ಒಂದು ಸಾವಿರ ರೂ. ಧನ ಸಹಾಯ ಕೊಟ್ಟರು.
- ಮಣಿಬೇನ ಪಟೇಲರ ಮಗಳ ನಾಯಕತ್ವದಲ್ಲಿ ಒಂದು ಮಹಿಳಾ ದಂಡು ದುಡಿಯಿತು.
- ಕೊನೆಗೆ ಸರಕಾರ ಕಂದಾಯವನ್ನು 22% ದಿಂದ 5.7% ಕ್ಕೆ ಇಳಿಸಿತು.
- ಈ ಸತ್ಯಾಗ್ರಹವನ್ನು ಪಟೇಲರಿಗೆ 'ಸರ್ದಾರ್' ಎಂಬ ಬಿರುದನ್ನು ತಂದುಕೊಟ್ಟಿತು.

ಗುಜರಾತಿನಲ್ಲಿ ನಡೆದ ಇತರ ರೈತ ಚಳುವಳಿಗಳೆಂದರೆ, 1816 ರ ಸೌರಾಷ್ಟ್ರ ದಂಗೆ, 1820 ರ ವಿಜಯ್ ಸಿಂಗ್ ನಾಯಕತ್ವದ ದಂಗೆ, 1840ರ ನಾಸಿಕ್ ಸತಾರ, ಅಹ್ಮದಾಬಾದ್‌ಗಳಲ್ಲಾದ ಬೆಸ್ತರ ದಂಗೆ, ಬರೈಲಿ & ಫೈಜಾಬಾದ್ ರೈತ ಚಳುವಳಿಗಳು. ಅಲ್ಲದೇ ಆಂಧ್ರದ ಗುಂಟೂರು, ಮಂಡ್ಯದ ಕಾವೇರಿ ನೀರಿಗಾಗಿ ರೈತ ಸತ್ಯಾಗ್ರಹ(1932).

**ಏಕ ಚಳುವಳಿ (1921) ಔಧ್**

ಬಟಾಯಿ ಬದಲು ಕಂದಾಯವನ್ನು ನಗದು ರೂಪದಲ್ಲಿ ಪಡೆಯುವಂತೆ ಒತ್ತಾಯಿಸಿ ಏಕ ಚಳುವಳಿ ನಡೆಯಿತು. ಇದರ ನಾಯಕರು ಬಾಬಾ ರಾಮಚಂದ್ರ & ಮದಾರಿದೇಶಿ.

- ಪಂಜಾಬಿನಲ್ಲಿ ಬಾಬಾ ರಾಮ್ ಸಿಂಗ್ ನೇತೃತ್ವದಲ್ಲಿ 'ಕುಬಾ' ರೈತರ ಬಂಡಾಯ ನಡೆಯಿತು.

**ಪಬ್ನಿಸ್ ಚಳುವಳಿ (1870) ಬಂಗಾಳ**

- ಈಶ್ವರ ಚಂದರರಾಯ್, ಶಂಭು ಪಾಲ್, ಖೋದಿಮೊತಾಬ್ ಇದರ ನಾಯಕರು. ಕಂದಾಯ ಹೆಚ್ಚಳದ ವಿರುದ್ಧ ನಡೆಯಿತು. ಇದನ್ನು 'ಸನ್ಯಾಸಿಗಳ ದಂಗೆ' ಎಂದು ಕರೆಯಲಾಗುತ್ತದೆ.

**ತೆಲಂಗಾಣ ರೈತರ ದಂಗೆಗಳು (1946–51)**

- ದಖ್ಖನ್‌ನಲ್ಲಿ ನಡೆದ ಆಧುನಿಕ ಭಾರತದ ಅತಿ ದೊಡ್ಡ ರೈತ ಚಳುವಳಿ.
- ಜಮೀನ್ದಾರರು ವಿಟ್ಟಿ (ಬಲತ್ಕಾರದ ದುಡಿಮೆ) ಮೋಸದಿಂದ ಭೂಮಿ ಕಬಳಿಕೆ, ಲೇವದೇವಿಗಾರರು, ಕೀಳು ಜಾತಿಯವರಿಂದ ಜೀತಗಾರಿಕೆಯಿಂದ ಕೊಬ್ಬಿದರು. ಇವರನ್ನು 'ಚೀಕಟಿ ದೊರಲು' (ಕತ್ತಲೆ ದೊರೆಗಳು) ಎಂದು ಕರೆಯಲಾಗುತ್ತಿತ್ತು.
- ಹೀಗಾಗಿ ಕಮ್ಯುನಿಸ್ಟ್ ರೈತರು 'ದಳಂ' ಎಂಬ ಗ್ರಾಮಸಂಘಗಳನ್ನು ಕಟ್ಟಿಕೊಂಡು ಜಮೀನ್ದಾರರ ಮೇಲೆ ದಾಳಿ ಮಾಡಿದರು. (ಗೆರಿಲ್ಲಾ ಯುದ್ಧ).
- ಈ ರೈತ ದಂಗೆಗಳಿಗೆ ದೊಡ್ಡಿ ಕುರಮಯ್ಯ, ಸುಂದರಯ್ಯ, ರವಿ ನಾರಾಯಣರೆಡ್ಡಿಯವರು ಮುಂದಾಳತ್ವ ಇತ್ತು. ಈ ಕಾರಣದಿಂದ ರವಿ ನಾರಾಯಣರೆಡ್ಡಿ ದೇಶದಲ್ಲೇ ಮೊದಲ ಲೋಕಸಭೆ ಚುನಾವಣೆಯಲ್ಲಿ ಅತ್ಯಧಿಕ ಮತಗಳಿಸಿ ಗೆದ್ದರು.
- ನೆಲಗೊಂಡ ಜಿಲ್ಲೆಯ ಜಂಗನ್ ತಾಲೂಕಿನಲ್ಲಿ ರೈತರು ದಂಗೆ ಎದ್ದು, ವಿಟ್ಟಿಯಾ ರದ್ದುಪಡಿಸಿದರು. ಮುಂದೆ ಆಚಾರ್ಯ ವಿನೋಬ್ ಭಾವೆರವರು 'ಭೂದಾನ ಚಳುವಳಿಯನ್ನು' ಇಲ್ಲಿಯೇ ಕೈಗೊಂಡರು(ನೆಲಗೊಂಡ).

**ಕೋಯಾ ಬಂಡಾಯ (1879–80) (ಆಂಧ್ರ) & ಒರಿಸ್ಸಾ**

- ಕೊಮ್ಮದೊರೆ ನಾಯಕತ್ವದಲ್ಲಿ ದಂಗೆಯನ್ನು ಅರಣ್ಯ ಸುಂಕಗಳ ರದ್ಧತಿ, ಸಾಲ ಭೂ ವರ್ಗಾವಣೆ ಕಿರುಕುಳದ ವಿರುದ್ಧ ಪಾರಾಗಲು ನಡೆಯಿತು.

**ಪುನ್ನಪ್ರ ವಯಲಾರ್ ದಂಗೆ (1946–47) ಕೇರಳ**

- ಕೇರಳದಲ್ಲಿ ಕಮ್ಯುನಿಸ್ಟ್ ಕೃಷಿ ಕಾರ್ಮಿಕರನ್ನು ತಿರುವಾಂಕೂರನ್ನು ಸ್ವತಂತ್ರ್ಯ ರಾಜ್ಯವಾಗಿ ಉಳಿಸುವ ದೃಷ್ಟಿಯಿಂದ ಅಲ್ಲಿನ ದಿವಾನ ಸಿ.ಪಿ. ರಾಮಸ್ವಾಮಿ ಅಯ್ಯರ್ ಇವರ ವಿರುದ್ಧ ಕ್ರಮಕೈಗೊಂಡರು. ಪೊಲೀಸರು ಕಮ್ಯುನಿಸ್ಟ್‌ರನ್ನು ಕ್ರೂರವಾಗಿ ಸದೆ ಬಡಿದರು. ರೊಚ್ಚಿಗೆದ್ದ ಕಮ್ಯುನಿಸ್ಟ್‌ರು ಪುನ್ನಪ್ರ ಪೊಲೀಸ್ ಠಾಣೆಗೆ & ವಯಲಾರ್‌ನಲ್ಲೂ ದಂಗೆ ನಡೆಸಿದರು. ಈ ದಂಗೆಯಲ್ಲಿ ಕಮ್ಯುನಿಸ್ಟ್ ರೈತಾಪಿ ಭಾಗವಹಿಸಿದ್ದರಿಂದ ಇದು ರೈತ ದಂಗೆ ಎನಿಸಿಕೊಂಡಿತು.

**ತೇಭಾಗ ಚಳುವಳಿ(1930–47) ಬಂಗಾಳ**

- ತೇ ಭಾಗ ಎಂದರೆ ಮೂರನೇ ಎರಡು ಪಾಲು ಎಂದರ್ಥ. ಕೃಷಿ ಮಾಡಿ ಬೆಳೆ ತೆಗೆದವನಿಗೆ ಫಸಲಿನ ಮೂರರಲ್ಲಿ ಎರಡು ಪಾಲು ಸೇರಬೇಕು ಎಂದು ಕೋರಿದ ರೈತರ ಹೋರಾಟ



Note : For reference purpose only, not for commercial purpose

INSTAKAS

ತೇಭಾಗ ಕೋರಿ ಹೋರಾಟ ನಡೆಸಿದ ರೈತರನ್ನು 'ಬರ್ಗದಾರರು' ಎಂದು ಕರೆಯುತ್ತಿದ್ದರು. ಬಹುಸಂಖ್ಯಾತ ವರ್ಗದಾರರು ಮುಸ್ಲೀಂರಾಗಿದ್ದರು.

- 1930 ರ ನಂತರ ಬರ್ಗಾದಾರರು ಉತ್ಪಾದನೆಯ 2/3 ಭಾಗ ಗೇಣಿ ಕೋರಿ ಚಳುವಳಿ ನಡೆಸಿದರು. ಇವರೊಡನೆ ಸಂತಾಲ ಆದಿವಾಸಿ ಜನರು ಸೇರಿಕೊಂಡರು. 'ನಿಜಾಖಮಕಿಧಾನ ತೋಲೋ' (ಸ್ವಂತ ಕಣಕ್ಕೆ ಫಸಲು ಸಾಗಿಸಿ) ಎಂದು ಕೂಗುತ್ತಾ ಪ್ರತಿಭಟನೆಯಲ್ಲಿ ತೊಡಗಿದರು. 1938 ರಲ್ಲಿ ನೇಮಕವಾದ ಭೂಕಂದಾಯ ಆಯೋಗ (ಫ್ಲೌಡ್ ಕಮಿಷನ್) ತೇಭಾಗ ಕೋರಿಕೆಯನ್ನು ಎತ್ತಿ ಹಿಡಿಯಿತು.

## ಬುಡಕಟ್ಟು ದಂಗೆಗಳು

### ಕೋಲರ ದಂಗೆ (1831–32) (ಬುದ್ಧ ಭಗತ್)

- ಕೋಲರ ಚೋಟನಾಗಪುರದ ಬುಡಕಟ್ಟು ಜನಾಂಗಕ್ಕೆ ಸೇರಿದವರು.
- ಕೋಲರನ್ನು ಹೊರಗಿನಿಂದ ಬಂದ ಜಮೀನ್ದಾರರು, ಅಧಿಕಾರಿಗಳು ನಾನಾ ಹಿಂಸೆಗಳಿಗೆ ಗುರಿಪಡಿಸಿದ್ದರು. ಸಾರಾಯಿ ಮೇಲೆ ತೆರಿಗೆ ಹಾಕಿದ್ದರು.
- ಕೋಲರ ಭೂಮಿಯನ್ನು ಹೊರಗಿನಿಂದ ಬಂದ ಮುಸ್ಲಿಂ & ಸಿಖ್ಖರು ಕಸಿದುಕೊಂಡಿದ್ದರು.
- ಕೊನೆಗೆ ಕೋಲರ ನಾಯಕ 'ಬುದ್ಧ ಭಗತ್'ನು 'ಸಂಕಾ' ಗ್ರಾಮದಲ್ಲಿ 1831 ರಲ್ಲಿ ದಂಗೆ ಎದ್ದರು. ದಂಗೆಯು ರಾಂಚಿ, ಸಿಂಗ್ ಬೂಂ, ಹಜಾರಿಬಾಘ್, ಪಲಮಾವುಗಳು ಹರಡಿತು.
- ಕೋಲರು ಅನೇಕ ಜಮೀನ್ದಾರರನ್ನು ಕೊಚ್ಚಿ ಹಾಕಿದರು. ಆದಿವಾಸಿ ದಂಗೆಗಳಲ್ಲೇ ಅತ್ಯಂತ ರಕ್ತಪಾತದ ದಂಗೆ. ಕೋಲರು ಕೊಂದಿದ್ದು ಭಾರತೀಯರನ್ನಾದರೂ ಅವರು ಬಯಸುತ್ತಿರುವುದು ಸ್ವತಂತ್ರ್ಯ ಎಂದರಿತ ಇಂಗ್ಲೀಷರು ಸೈನ್ಯ ಕಳಿಸಿ ದಂಗೆಯನ್ನಡಗಿಸಿದರು.
- ಈ ದಂಗೆ ಅಡುಗುತ್ತಿದ್ದಂತೆ 'ಭೂಮಿಜ್' ಆದಿವಾಸಿಗಳು ದಂಗೆ ಎದ್ದರು.

### ಸಂತಾಲರ ದಂಗೆ(1855) (ಸಿಧು & ಕನ್ಹು)

- ಸಂತಾಲರು ಅರಣ್ಯವಾಸಿಗಳಾಗಿ ಕೃಷಿಯಲ್ಲಿ ತೊಡಗಿದ್ದ ಶಾಂತಿಪ್ರಿಯ ಜನಾಂಗರು.
- ಇವರು ಬಂಗಾಳ & ಒರಿಸ್ಸಾದ ಮಿಡ್ನಾಪುರ, ಹಜಾರಿಬಾಗ್, ಬರಾಬೂಂ ಕರಾವಳಿ ಜಿಲ್ಲೆಗಳಲ್ಲಿ ವಾಸವಾಗಿದ್ದರು.
- 1793 ರಲ್ಲಿ ಜಾರಿಗೆ ಬಂದ ಖಾಯಂ ಜಮೀನ್ದಾರಿ ಪದ್ಧತಿಯಂತೆ ಅವರ ಭೂಮಿಯನ್ನು ಕಿತ್ತುಕೊಂಡು ಜಮೀನ್ದಾರರಿಗೆ ಕೊಟ್ಟಿತು. ಜಮೀನ್ದಾರರನ್ನು ಎದುರಿಸದೇ ಬಿಹಾರಿನ ಭಾಗಲಪುರ & ರಾಜಮಹಲ್ ಬೆಟ್ಟಕ್ಕೆ ವಲಸೆ ಹೋದರು.
- ಇಲ್ಲಿಯೂ ಇವರಿಗೆ ಕಿರುಕುಳ ತಪ್ಪಲಿಲ್ಲ. ಪಾಕೂರಿನ ಠಾಕುರ್ ರಾಜ ಜಮೀನ್ದಾರ ಸಂತಾಲರ ಮೇಲೆ ಇದ್ದ ಆರು ಆಣೆ ಗೇಣಿಯನ್ನು 6 ರೂ.ಗೆ ಹೆಚ್ಚಿಸಿದ. ಜೊತೆಗೆ ಶೇ. 500% ಬಡ್ಡಿ ವಿಧಿಸಿದ. ಅಲ್ಲದೇ ಬೀರಸಿಂಗ್ ಎಂಬ ಸಂತಾಲ ನಾಯಕನಿಗೆ ದಂಡ ವಿಧಿಸಿದ.
- ಮಹೇಶಲಾಲ್ ಎಂಬ ದರೋಗ ಎಂಬ ಜಮೀನ್ದಾರ ಸಂತಾಲರ ನಾಯಕರಾದ ಕಹನ & ಸಿಂಧುರನ್ನು ಕರೆಸಿ ಚಪ್ಪಲಿಯಿಂದ ಹೊಡೆಸಿದ.
- ರಾಜಮಹಲ್ ರೈಲ್ವೇ ಮಾರ್ಗ ಜೋಡಿಸುವ ಕಾರ್ಯದಲ್ಲಿ ತೊಡಗಿದ್ದ ಐರೋಪ್ಯರು ಸಂತಾಲರಿಗೆ ನಾನಾ ವಿಧದ ಚಿತ್ರಹಿಂಸೆ ನೀಡಿದರು. ಈ ಹಿಂಸೆಯಿಂದ ಓಡಿ ಹೋಗಲು ಬೇರೆ ಜಾಗವಿರಲಿಲ್ಲ. ಹೀಗಾಗಿ ಕನ್ಹು & ಸಿಧು ಎಂಬ ಸಹೋದರ ನಾಯಕತ್ವದಲ್ಲಿ 1855 ಜುಲೈ 07 ರಂದು ದಂಗೆ ಎದ್ದರು.
- ಬಾಗಲ್‌ಪುರ್ & ರಾಜಮಹಲ್ ನಡುವೆ ಅಂಚೆ & ರೈಲ್ವೇ ಸಂಪರ್ಕ ಕಡಿದು ಹಾಕಿದರು. ದಂಗೆ ಅಡಗಿಸಲು ಬಂದ ಬ್ರಿಟೀಷ್ ಸೇನಾನಿ 'ಮೇಜರ್ ಬರೋಘನನ್ನು' ಸಂತಾಲರು ಸೋಲಿಸಿದನು. ಕನ್ಹು, ಮಂಜ & ಸಿಧು ಸೆರೆಸಿಕ್ಕರು. ಕನ್ಹು ಗಲ್ಲಿಗೇರಿಸಲ್ಪಟ್ಟನು. ಸಿಧು ಈ ಹೋರಾಟದಲ್ಲೇ ಅಸುನೀಗಿದನು.
- 1876 ರಲ್ಲಿ ಸಂತಾಲರ ಹೋರಾಟವನ್ನು ಮನ್ನಿಸಿ ಅವರಿಗೆ ಪ್ರತ್ಯೇಕ ಸಂತಾಲ ಪರಗಣ ಜಿಲ್ಲೆಯನ್ನು ನೀಡಲಾಯಿತು.
- ಸಂತಾಲಿ ಭಾಷೆಯಲ್ಲಿ ಸಂತಾಲರ ದಂಗೆಯನ್ನು 'ಹೂಲ್' ಎನ್ನಲಾಗುತ್ತದೆ.
- ಸಂತಾಲರ ಮಾದರಿಯಲ್ಲೇ ಒರಿಸ್ಸಾದಲ್ಲಿ ಖೇರವಾರ ಜನಾಂಗ ಬ್ರಿಟೀಷರ ವಿರುದ್ಧ ದಂಗೆ ಎದ್ದರು.

ಭಾರತದ ಪ್ರಥಮ ಆದಿವಾಸಿ ದಂಗೆಯ ನಾಯಕ ತಿಲಕ್ ಮಾಝಿಯು ಸಂತಾಲರ ನಾಯಕನಾಗಿದ್ದು 1784–85 ರಲ್ಲೇ ಬ್ರಿಟೀಷ ವಿರುದ್ಧ ಬಂದೂಕು ಹಿಡಿದಿದ್ದ(ಮಂಗಲ್ ಪಾಂಡೆಗಿಂತಲೂ 100 ವರ್ಷ ಹಿಂದೆ) ಈ ದಂಗೆಯನ್ನು ಬ್ರಿಟೀಷರ ವಿರುದ್ಧದ 'ಪ್ರಥಮ ದಂಗೆ' ಎನ್ನಲಾಗಿದೆ. 'ಸಂತಾಲ ಹೂಲ್' (ದಂಗೆ)

- ಮಾಝಿಯು ದಂಗೆಯನ್ನಡಗಿಸಲು ಬಂದ ಭಾಗಲ್ಪುರದ ಕಲೆಕ್ಟರ್ ಆಗಸ್ಟ್ ಕ್ಲೀವ್ ಲ್ಯಾಂಡ್‌ನನ್ನು ಕೊಂದುಹಾಕಿದರು.
- ಭಗಲ್‌ಪುರ ವಿಶ್ವವಿದ್ಯಾಲಯಕ್ಕೆ 'ತಿಲಕ್ ಮಾಝಿ' ಹೆಸರಿಡಲಾಗಿದೆ.

### ಕೂಕರ ದಂಗೆ(1892)

- ಪಂಜಾಬಿನ ಲೂದಿಯಾನ, ಪಾಟಿಯಾಲಗಳಲ್ಲಿ ನೆಲೆಸಿದ ಒಂದು ಜನಾಂಗ.
- ಭಗತ್ ಜವಾಹರ್ ಮಹಲ್, ಬಲಕ್ ಸಿಂಗ್ & ರಾಮಸಿಂಗ್ ನಾಯಕರಾಗಿದ್ದರು.
- ಇವರು ಜಾತಿಪದ್ಧತಿ, ಮೂರ್ತಿ ಪೂಜೆ, ಗೋಹತ್ಯೆ ವಿರುದ್ಧ ದಂಗೆ ಎದ್ದರು.
- ಇವರು ಸರ್ಕಾರಿ ನೌಕರಿಯನ್ನು ಬಹಿಷ್ಕರಿಸಲು ಕರೆ ನೀಡಿದನು.

### ಮುಂಡರ ದಂಗೆ (1899) –

- ಚೋಟಾ ನಾಗಪುರದಲ್ಲಿ ವಾಸವಾಗಿದ್ದ ಒಂದು ಬುಡಕಟ್ಟು ಜನಾಂಗ.
- ತಮ್ಮ ಕುಲ ಭೂಮಿಯನ್ನು (ಬುಡಕಟ್ಟು) ಸಾಗುವಳಿ ಮಾಡುತ್ತಾ ಬಂದಿದ್ದರು. ಬ್ರಿಟೀಷರು ಇವರ ತುಂಡು ಭೂಮಿಯ ಮೇಲೆ ಅಧಿಕ ಕಂದಾಯ ಹೇರಿದರಲ್ಲದೇ, ಬಿಟ್ಟಿ ಸೇವೆಗೆ (ಬೇಠ್ ಬಗಾರಿ) ಒತ್ತಾಯಿಸುತ್ತಿದ್ದವು. ಅಲ್ಲದೇ ಕ್ರೈಸ್ತ ಧರ್ಮಕ್ಕೆ ಬಲವಂತವಾಗಿ ಮತಾಂತರ ಮಾಡಿದರು. ಹೀಗಾಗಿ ಇವರ ದಬ್ಬಾಳಿಕೆ ವಿರುದ್ಧ 'ಭಗವಾನ್ ಬಿರ್ಸ್ ಅಣ್ಣೈ' ದಂಗೆ ಎದ್ದನು. ಈತ ಮತಾಂತರವಾದವರನ್ನು ಪುನ: ಮುಂಡಗಳಾಗಿ ಪರಿವರ್ತಿಸಿದನು.
- 1899 ಕ್ರಿಸ್‌ಮಸ್ ದಿನದಂದು ದಂಗೆ ಎದ್ದನು. ಆದರೆ ಬ್ರಿಟೀಷರು 'ಶೈಕ್ ರಾಕಾಬ್'ನಲ್ಲಿ ಸೋಲಿಸಿದರು.
- ಬ್ರಿಟೀಷರು ಖುಂಚಕಟ್ಟಿಯನ್ನು ಮರಳಿ ನೀಡಿದರು.

### ಜಯಾಂತಿಯಾ ದಂಗೆ–1862 ಮೇಘಾಲಯ

- ಈಶಾನ್ಯ ಭಾರತದಲ್ಲಿ ಒಟ್ಟು 34 ಆದಿವಾಸಿ ದಂಗೆಗಳಾದವು. ಅವುಗಳಲ್ಲಿ 'ಜಯಂತಿಯಾ & ರಾಣಿ ಗೈಡನ್ಲಿ' ದಂಗೆಗಳು ಮುಖ್ಯವಾದವು.


Note : For reference purpose only, not for commercial purpose
INSTA KAS

- 1854 ರಲ್ಲಿ 'ಜೋವೈ' ಎಂಬ ಸ್ಥಳದಲ್ಲಿ ಬ್ರಿಟೀಷರು ಪೊಲೀಸ್ ಠಾಣೆ ನಿರ್ಮಿಸಿ ಅಲ್ಲಿ ಜನರು ಹೆಣ ಸುಡದಂತೆ ತಡೆದರು. ಬ್ರಿಟೀಷರು ಜಯಂತಿಯಾ ಹೆಂಗಸರೊಂದಿಗೆ ಅನೈತಿಕ ಸಂಬಂಧ ಬೆಳೆಸುವುದು.
- ಜಲೊಂಗ್ ಎಂಬಲ್ಲಿ ಜರುಗುತ್ತಿದ್ದ ಮತೀಯ ಸಮಾರಂಭ ಮತ್ತು ನೃತ್ಯ ಪೂಜೆಗಳ ಮೇಲೆ ಪೊಲೀಸರ ಮೇಲೆ ದಾಳಿ ಮಾಡಿದುದು ದಂಗೆ ಆರಂಭಕ್ಕೆ ಕಾರಣವಾಯಿತು.
- ಜಯಂಂತಿಯಾ ನಾಯಕನಾದ 'ಯು ಕ್ಯಾಂಗ್ ನೊಂಗ್ ಬಾ'ನನ್ನು ತಮ್ಮ ನಾಯಕನಾಗಿ ಆರಿಸಿದರು. ಈತ ಬಿದಿರು ಮರಗಳ ಠಾಣೆಗಳನ್ನು ಕಟ್ಟಿಕೊಂಡು ತಮ್ಮ ಜನಾಂಗವನ್ನು ರಕ್ಷಿಸಿಕೊಂಡರು.
- ಬ್ರಿಟೀಷರು ದಂಗೆಯನ್ನಡಗಿಸಿ 'ನೊಂಗಬಾ'ನನ್ನು ಗಲ್ಲಿಗೇರಿಸಿದರು.

**ಕಚ್ಚಾ ನಾಗಾ ಹೋರಾಟ (1932)**

- ಈ ಜನಾಂಗವು ಮಣಿಪುರ, ಕಾಚಾರ್, ನಾಗಾ ಜಿಲ್ಲೆಗಳಲ್ಲಿ ಕಂಡು ಬರುತ್ತದೆ.
- ಜಮೀನ್ದಾರ ಶೋಷಣೆ ವಿರುದ್ಧ ನಾಯಕ 'ಜೊಡೋನಾಂಗ್'ನು ದಂಗೆ ಎದ್ದನು. ಈತನ ನಾಯಕತ್ವದಲ್ಲಿ ನಾಗಾ ಜನರೆಲ್ಲ ಐಕ್ಯರಾಗಿ ನಾಗಾ ರಾಜ್ಯವನ್ನು ಕಟ್ಟಿಕೊಂಡರು. ಸ್ವಾತಂತ್ರ್ಯ ಘೋಷಿಸಿಕೊಂಡರು. ಎಚ್ಚೆತ್ತ ಬ್ರಿಟೀಷ ಸರಕಾರ ಈತನನ್ನು ಗಲ್ಲಿಗೇರಿಸಿದರು.
- ಈ ಹೋರಾಟವನ್ನು 'ರಾಣಿ ಗೈಡಿನ್ಲಿ' ಎಂಬ ಧಿರೋತ್ತರ ತರುಣಿ ಮುಂದುವರೆಸಿದಳು. 1932 ರಲ್ಲಿ ಬ್ರಿಟೀಷರು ಕದನದಲ್ಲಿ ಗೈಡ್ಲಿನು ಬೆಂಬಲಿಗರು ವಾಸವಾಗಿದ್ದ ಹಳ್ಳಿಗಳಿಗೆ ಬೆಂಕಿ ಇಟ್ಟಿತು. ಗೈಡೆನ್ಲಿ 'ಪೊಲೊಮಿ' ಎಂಬ ಗ್ರಾಮದಲ್ಲಿ ಬಿದಿರಿನ ಮರದ ಕೋಟೆಯ ಗ್ರಾಮವೊಂದನ್ನು ನಿರ್ಮಿಸಿ ಅಲ್ಲಿ ನಿರಾಶ್ರಿತರಾದ 4000 ನಾಗಾ ಜನರಿಗೆ ಆಶ್ರಯ ಕೊಟ್ಟಳು. ತನ್ನ 17ನೇ ವಯಸ್ಸಿಗೆ ಸೆರೆಯಾದ ಗೈಡಿನ್ಲ್‌ಳಿಗೆ 1947 ರವರೆಗೆ ಜೀವಾವಧಿ ಶಿಕ್ಷೆ ಅನುಭವಿಸಿ ಬಿಡುಗಡೆ ಹೊಂದಿದಳು. ಹೀಗಾಗಿ ಇವಳನ್ನು ಗಂಡೆದೆಯ ಧೀರೆ 'ನಾಗರಾಣಿ' ಎಂದೇ ಅವಳು ಹೆಸರಾಗಿದ್ದಾಳೆ.

**ಅಲ್ಲೂರಿ ಸೀತಾರಾಮರಾಜು ದಂಗೆ (1922):** ಆಂಧ್ರದ ಪೂರ್ವಗೋಧಾವರಿ ಜಿಲ್ಲೆಯ 1 ಚೋಡಾವರು 'ತಾಲ್ಲೂಕಿನ ರಂಪ' ಎಂಬ ಗ್ರಾಮದಲ್ಲಿ 'ಕೋಯಂ' & ಕೊಂಡರೆಡ್ಡಿ' ಎಂಬ ಆದಿವಾಸಿ ಜನಾಂಗದವರು ವಾಸವಾಗಿದ್ದರು.

- ಗ್ರಾಮದ ಆದಿವಾಸಿ ಜನರು ಮೇಲ್ಜಾತಿಯವರ ಯಜಮಾನಿಕೆಯಿಂದ ನರಳುತ್ತಿದ್ದರು.
- ಅಲ್ಲೂರಿ ಸೀತಾರಾಮರಾಜುರವರು ರಾಜಮಂಡ್ರಿಯವರಾಗಿದ್ದು, ಧಾರಕೊಂಡ ಎಂಬಲ್ಲಿ 'ಶ್ರೀರಾಮ ವಿಜಯನಗರ' ಎಂಬ ಮಾದರಿ ಹಳ್ಳಿಯನ್ನು ಕಟ್ಟಿ ಆದಿವಾಸಿ ಜನರಿಗೆ ಆಶ್ರಯ ಒದಗಿಸಿದರು. ರಾಜುರವರು ಗಾಂಧೀಜಿಯವರ ಅಸಹಕಾರ ಚಳುವಳಿಯಿಂದ ಪ್ರಭಾವಿತರಾಗಿದ್ದರು. 'ಮಹಾತ್ಮ ಗಾಂಧೀಜಿ ಕಿ ಜೈ' ಎಂಬ ಜನಪ್ರಿಯ ಕೂಗು ಇವರದೇ.

**ಇತರೆ ಸಣ್ಣಪುಟ್ಟ ದಂಗೆಗಳು**

- **ಚೌಹಾರ್ ದಂಗೆ (1766–72):** ಬಂಗಾಳದಲ್ಲಿ, ಕಂದಾಯ ಹೆಚ್ಚಳವೇ ಕಾರಣ.
- **ಹೋಸ್ ದಂಗೆ** (1820–23): ಸಿಂಗಭೂಂನಲ್ಲಿ, ಬ್ರಿಟೀಷರ ಶೋಷಣೆ ವಿರುದ್ಧ.
- **ಆಹೋಂ ದಂಗೆ** (1828–31): ಬ್ರಿಟೀಷರು ಅಸ್ಸಾಮಿನ ಅಹೋ ಪ್ರದೇಶವನ್ನು ಕಂಪೆನಿಗೆ ಸೇರಿಸಿಕೊಂಡಿದ್ದೇ ಕಾರಣ. ಗೋಧ್ವಾರ್ & ಕೊನ್ವರ್ ದಂಗೆಯ ನಾಯಕರು.
- **ಖಾಸಿ ಬಂಡಾಯ (1833):** ಬ್ರಿಟೀಷರು ಜೈಂತಿಯಾ & ಘಾರೋ ಪ್ರದೇಶಗಳನ್ನು ವಶಪಡಿಸಿಕೊಂಡಿದ್ದೇ ಕಾರಣ. ತಿರತ್ ಸಿಂಗ್ & ಬಾರ್ ಮೊನಿಕ್‌ರು ದಂಗೆಯ ನಾಯಕರಾಗಿದ್ದರು. ಇದನ್ನು 'ಸಿಂಗ್ ಪೊ' ಜನರ ದಂಗೆ ಎನ್ನುತ್ತಾರೆ.
- **ಭಿಲ್ಲರ ದಂಗೆ (1825):** ಪಶ್ಚಿಮ ಘಟ್ಟಗಳ 'ಖಾಂದೇಶನ' ಒಂದು ಜನಾಂಗ ದಂಗೆಯ ನಾಯಕ ಸೇವರಾಂ, 1857 ರಲ್ಲಿ ಭಿಲ್ಲರು ಭೀಮಾನಾಯಕನ ನಾಯಕತ್ವದಲ್ಲಿ ದಂಗೆ ಎದ್ದರು.
- **ಓರಾನ್ಸ್ ದಂಗೆ (1914–15):** ಚೋಟಾ ನಾಗಪುರದಲ್ಲಿ 'ತಾನಾಭಗತ್' ನಾಯಕತ್ವದಲ್ಲಿ ದಂಗೆ ಎದ್ದರು.
- **ರಾಮೋಸಿ ದಂಗೆ (1822–29):** ಸತಾರ, ಚಿತ್ತೂರ್ ಸಿಂಗ್ ನಾಯಕತ್ವದಲ್ಲಿ ದಂಗೆ ಎದ್ದರು. ರಾಮೋಸಿಗಳು ಕ್ರಾಂತಿಕಾರಿ ವಾಸುದೇವ ಫಡಕೆಯೊಂದಿಗೆ ಸಂಬಂಧ ಹೊಂದಿದ್ದರು.
- **ಪಣಿಯ ದಂಗೆ (1805):** ಮೈಸೂರು ಜಿಲ್ಲೆಯ ವೈನಾಡಿನ ಪಣಿಯ ಎಂಬಲ್ಲಿ ಆದಿವಾಸಿ ಜನರು ಬ್ರಿಟೀಷರ ಶೋಷಣೆ ವಿರುದ್ಧ 'ಪಲಸಿ ರಾಜನ' ನಾಯಕತ್ವದಲ್ಲಿ ದಂಗೆ ಎದ್ದರು.
- **ವಾರ್ಲಿ ಜನರ ಹೋರಾಟ** (1944–45) ಮಹಾರಾಷ್ಟ್ರ ಠಾಣಾ ಜಿಲ್ಲೆಯ ವಾರ್ಲಿಯಲ್ಲಿ ಬಹುತೇಕರು ಜೀತಗಾರರಾಗಿದ್ದರು. ಇವರು 'ಸವೆ' ಎಂಬುವನ ನಾಯಕತ್ವದಲ್ಲಿ ಹೆಚ್ಚಿನ ಕೂಲಿ ಬೇಡಿ ದಂಗೆ ಎದ್ದರು.
- **ಕೊಂಡ ದಂಗೆ:** ತಮಿಳುನಾಡಿನಿಂದ ಬಂಗಾಳದವರೆಗೂ ಗುಡ್ಡಗಾಡು ಜನರೇ ಕೊಂಡರು. ಚಕ್ರಬಿಸೈ ನಾಯಕ (1837–56).
- **ಕೊಂಡದೂರ ದಂಗೆ:** ವಿಶಾಖಪಟ್ಟಣಂ, ಕೂರ್ರಮಲ್ಯ ನೇತೃತ್ವ.
- **ನೈಕರ ಚಳುವಳಿ:** ಮಧ್ಯಪ್ರದೇಶ ಹಾಗೂ ಗುಜರಾತಿನ ಅರಣ್ಯವಾಸಿಗಳು ಮೇಲ್ಜಾತಿ & ಬ್ರಿಟೀಷರ ವಿರುದ್ಧ ಹಾಗೂ ಧರ್ಮರಾಜ್ಯ ಸ್ಥಾಪನೆಗೆ ಹೋರಾಡಿದರು.
- **ಬಸ್ತರ ದಂಗೆ(1910)** ಜಗದಲ್ಪೂರ ಪ್ರದೇಶದಲ್ಲಿ ಬಿಸ್ತರಾಜನ ದಂಗೆ.
- **ಕೊಯಾ ದಂಗೆ(1876–86)** ಆಂಧ್ರದ ಕೊಯಾ & ಕೊಂಡಸಾರ ಗುಡ್ಡಗಾಡು ಪ್ರದೇಶ
- **ಚೆಂಚು ಬುಡಕಟ್ಟು ಚಳುವಳಿ:** ಆಂಧ್ರದ ಗುಂಟೂರು, ಚೆಂಚೂ ಜನರು ಅರಣ್ಯ ಸತ್ಯಾಗ್ರಹ ಕೈಗೊಂಡು ಅರಣ್ಯ ಕಾಯಿದೆಗಳನ್ನು ಮುರಿದರು. ವೆಂಕಟಪ್ಪಯ್ಯ ನಾಯಕತ್ವ ವಹಿಸಿದ್ದರು. ಗಾಂಧೀಜಿಯವರು ಮಾರ್ಗದರ್ಶನ ದೊರಕಿತ್ತು.

**ಬ್ರಿಟೀಷರ ಶೈಕ್ಷಣಿಕ ನೀತಿ & ಇಂಗ್ಲೀಷ್ ಶಿಕ್ಷಣದ ಬೆಳವಣಿಗೆ**

- ಇಂಗ್ಲೀಷ್ ಶಿಕ್ಷಣವನ್ನು 'ಆಧುನಿಕ ಶಿಕ್ಷಣ' ಎಂದು ಪರಿಗಣಿಸಲಾಗುತ್ತದೆ.

**ಬೆಳವಣಿಗೆ:** ಲಾರ್ಡ್‌ವಾರ್ನ್ ಹೇಸ್ಟಿಂಗ್ಸ್‌ನು 1781 ರಲ್ಲಿ ಕಲ್ಕತ್ತಾದಲ್ಲಿ ಒಂದು 'ಮದರಸಾ'ವನ್ನು ಸ್ಥಾಪಿಸಿದನು. ಜೊತೆಗೆ ಬಂಗಾಳದಲ್ಲಿ ಪೌರ್ವಾಸ್ತ್ಯ ಕಾಲೇಜನ್ನು ತೆರೆದನು.

- ಸರ್. ವಿಲಿಯಂ ಜೋನ್ಸ್‌ನು 1784 ರಲ್ಲಿ ಏಷ್ಯಾಟಿಕ್ ಸೊಸೈಟಿಯನ್ನು ಸ್ಥಾಪಿಸಿ ಭಾರತೀಯ ಸಂಸ್ಕೃತಿ & ಇತಿಹಾಸಗಳ ಪುನರುತ್ಥಾನಕ್ಕೆ ಕಾರಣನಾದನು.
- 1791 ರಲ್ಲಿ ಜೋನಾಥನ ಡಂಕ ಎಂಬ ಬ್ರಿಟೀಷ ರೆಸಿಡೆಂಟ್‌ನು 'ಬನಾರಸ್'ನಲ್ಲಿ ಸಂಸ್ಕೃತ ಕಾಲೇಜು ತೆರೆದನು.
- ಕ್ರೈಸ್ತ ಪಾದ್ರಿ ಬಂಗಾಳದಲ್ಲಿ ಶಾಲೆ ತೆರೆದನಲ್ಲದೆ ಬೈಬಲ್‌ನ್ನು ಬಂಗಾಳಿಗೆ ಅನುವಾದಿಸಿದನು.
- ರಾಜರಾಂ ಮೋಹನರಾಯರು ಸ್ಥಾಪಿಸಿದ ಕಾಲೇಜ್‌ದ (1817) ಕಲ್ಕತ್ತಾ ಹಿಂದೂ ಕಾಲೇಜು, ಮುಂದೆ ಪ್ರೆಸಿಡೆನ್ಸಿ ಕಾಲೇಜಾಗಿ ಪರಿವರ್ತನೆಗೊಂಡಿತ್ತು.


Note : For reference purpose only, not for commercial purpose
INSTA KAS

- ಲಾರ್ಡ್ ವಿಲಿಯಂ ಬೆಂಟಿಂಕ್‌ನಿಂದ ಪ್ರಪ್ರಥಮ ಭಾರತೀಯ ಮೆಡಿಕಲ್ ಕಾಲೇಜು (1835) ಸ್ಥಾಪಿಸಲ್ಪಟ್ಟಿತು.

**ಚಾರ್ಟರ್ ಕಾಯಿದೆ 1813:** ಈ ಕಾಯಿದೆ ಭಾರತೀಯರಿಗೆ ಸಾಹಿತ್ಯ ಮತ್ತು ಜ್ಞಾನವನ್ನು ಬೋಧಿಸಲು ಪ್ರತಿವರ್ಷ 01 ಲಕ್ಷ ರೂ. ದಯಪಾಲಿಸಿತು. ಲಾರ್ಡ್ ಬೆಂಟಿಂಕ್‌ನ ಕಾಲದಲ್ಲಿ ವಿದ್ಯಾಭ್ಯಾಸ ಯಾವವ ಭಾಷೆಯಲ್ಲಿರಬೇಕೆಮಬ ಜಿಜ್ಞಾಸೆಯಿಂದ 02 ಗುಂಪುಗಳು ಹುಟ್ಟಿಕೊಂಡವು.

1) **ಓರಿಯಂಟಲಿಸ್ಟರು:** ಜೆಮ್ಸ್‌ಪ್ರಿನ್ಸ್‌ಪ್, ಹೋರೆಸ್, ಹೆಚ್. ವಿಲ್ಸನ್ ಇವರೇ ಓರಿಯಂಟಲಿಸ್ಟರು. ದೇಶೀಯ ಶಿಕ್ಷಣ ಹಾಗೂ ಭಾರತೀಯ ವಿಷಯಗಳು ಕಲಿಸಬೇಕೆಂದು ವಾದಿಸಿದರು. ಪೌರ್ವಾತ್ಯ ಭಾಷಾ ಸಾಹಿತಿಗಳ ಗುಂಪಿಗೆ ಸೇರಿದವರಾಗಿದ್ದರು.
2) **ಆಂಗ್ಲಿಸಿಸ್ಟರು:** ಗ್ರಾಂಡ್ ಡಫ್, ಟ್ರಾವೆಲ್ಯನ್, ರಾಜಾರಾಂ ಮೋಹನ್‌ರಾಯ್, ಮೆಕಾಲೆ, ಚಾರ್ಲ್‌ಗ್ರಾಂಟ್, ಜೆ.ಎಸ್.ಮಿಲ್ ಇತ್ಯಾದಿ ಇವರು ಇಂಗ್ಲೀಷ್ ಶಿಕ್ಷಣ ಮಾಧ್ಯಮದ ಪರವಾಗಿ ವಾದಿಸಿದರು.

ಈ ಎರಡು ಗುಂಪುಗಳ ನಡುವಿನ ವಿವಾದವನ್ನು 'ಸಾರ್ವಜನಿಕ ಶಿಕ್ಷಣ ಸಮಿತಿಯ ಅಧ್ಯಕ್ಷನಾದ 'ಮೆಕಾಲೆ' ತನ್ನ 'ಮೆಕಾಲೆ ಟಿಪ್ಪಣಿಯ' ಮೂಲಕ ಬಗೆಹರಿಸಿದನು. ಈತನ ಟಿಪ್ಪಣಿಯು ಇಂಗ್ಲೀಷ್ ಶಿಕ್ಷಣಕ್ಕೆ ಬಹುಮುಖ್ಯ ಕೊಡುಗೆ ನೀಡಿದೆ.

**ಥಾಮಸ್ ಮೆಕಾಲೆ(1800–1850) (ಮೆಕಾಲೆ ಟಿಪ್ಪಣಿ)**

- 1834 ರಲ್ಲಿ ಭಾರತದ ಗೌರ್ನರ್ ಜನರಲ್‌ನ ಕೌನ್ಸಿಲ್‌ನಲ್ಲಿ ಕಾನೂನು ಸಲಹೆಗಾರನಾದನು.
- ಓರಿಯಂಟಲಿಸ್ಟ್ & ಆಂಗ್ಲಿಸಿಸ್ಟ್‌ರ ನಡುವಿನ ಶಿಕ್ಷಣ ಮಾಧ್ಯಮ ಕುರಿತು ವಿವಾದ ಉಂಟಾಯಿತು. ಈ ವಿವಾದ ಬಗೆಹರಿಸಲು ಬೆಂಟಿಂಕ್‌ನು ಲಾರ್ಡ್ ಮೆಕಾಲೆಯನ್ನು ವರದಿ ನೀಡುವಂತೆ ತಿಳಿಸಿದನು.
- ಮೆಕಾಲೆ ಟಿಪ್ಪಣಿ 1835ನ್ನು ಸಿದ್ಧಪಡಿಸಿ ಕೌನ್ಸಿಲ್ ಮುಂದೆ ಮಂಡಿಸಿದನು. ಭಾರತದಲ್ಲಿ ಇಂಗ್ಲೀಷ್ ಶಿಕ್ಷಣ ಪದ್ಧತಿಯನ್ನು ಜಾರಿಗೆ ತಂದು, ಇಂಗ್ಲೀಷ್ ಭಾಷೆ ಶಿಕ್ಷಣದ ಮಾಧ್ಯಮವಾಗಬೇಕೆಂದು ತಿಳಿಸಿದನು.
- ಸರ್ಕಾರ ನೀಡುತ್ತಿದ್ದ 1 ಲಕ್ಷ ನಿಧಿಯನ್ನು ಪಾಶ್ಚಾತ್ಯ ಶಿಕ್ಷಣ, ವಿಜ್ಞಾನ & ಇಂಗ್ಲೀಷ್ ಭಾಷಾ ಶಿಕ್ಷಣಕ್ಕೆ ಬಳಸಬೇಕೆಂದು ಹಾಗೂ ಭಾರತೀಯ ಶಿಕ್ಷಣ ಪದ್ಧತಿಯನ್ನು ವಿಸರ್ಜಿಸಬೇಕೆಂದು ಹೇಳಿದನು.
- ಮೆಕಾಲೆಯ ವರದಿಯನ್ನು ಒಪ್ಪಿ ಮಾರ್ಚ್ 07, 1835 ರಂದು ಕಾನೂನು ಮಾಡಲಾಯಿತು. ಇಂಗ್ಲೀಷ್ ಶಿಕ್ಷಣಕ್ಕೆ ತಳಹದಿ ಹಾಕಿದ ಮೆಕಾಲೆಯನ್ನು **'ಭಾರತದ ಇಂಗ್ಲೀಷ್ ಶಿಕ್ಷಣದ ಪಿತಾಮಹ'** ಎನ್ನಲಾಗುತ್ತದೆ.
- ರಾಜಾರಾಂ ಮೋಹನ್‌ರಾಯ್‌ರು ಏಕದೇವತಾ ಸಿದ್ಧಾಂತ ಬೋಧಿಸಲು **'ಸಂಸ್ಕೃತ ವೇದಾಂತ ಕಾಲೇಜು'**ಗಳನ್ನು ಸ್ಥಾಪಿಸಿದರು. ಬಂಗಾಳದಲ್ಲಿ ಓರಿಯೆಂಟಲ್ ಕಾಲೇಜ್‌ನ್ನು ತೆರೆದರು.

**ಚಾರ್ಲ್ಸ್‌ವುಡ್ ವರದಿ (1854) (Woods dispatch)**

ಬೋರ್ಡ್ ಆಫ್ ಕಂಟ್ರೋಲ್‌ನ ಸದಸ್ಯನಾಗಿದ್ದ. 1854ರಲ್ಲಿ ಭಾರತದ ಶಿಕ್ಷಣ ನೀತಿ ಕುರಿತು ವುಡ್ ವರದಿಯನ್ನು ಬ್ರಿಟೀಷ್ ಸರಕಾರದ ಮುಂದಿಟ್ಟನು. ವುಡ್ ವರದಿಯನ್ನು "ಭಾರತದ ಇಂಗ್ಲೀಷ್ ಶಿಕ್ಷಣದ ಮ್ಯಾಗ್ನಕಾರ್ಟ್' ಎಂದು ಕರೆಯಲಾಗಿದೆ. ವರದಿ ಅಂಶಗಳು ಇಂತಿವೆ.

1) ಪ್ರಾಥಮಿಕ ಶಿಕ್ಷಣ ದೇಶಿಯ ಭಾಷೆಯಲ್ಲೂ, ಕಾಲೇಜು ಶಿಕ್ಷಣ ಆಂಗ್ಲ ಭಾಷೆಯಲ್ಲಿರಬೇಕು.
2) ಪ್ರತಿ ಪ್ರಾಂತ್ಯದ ನಿರ್ದೇಶನ ಅಧೀನದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ಸ್ಥಾಪನೆ.
3) ಲಂಡನ್ ವಿಶ್ವವಿದ್ಯಾಲಯ ಮಾದರಿ ಕಲ್ಕತ್ತಾ, ಮದ್ರಾಸ್ & ಬಾಂಬೆ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸುವುದು.

✓ ಪ್ರಾಥಮಿಕ ಶಿಕ್ಷಣ ಹಳ್ಳಿಯಲ್ಲೂ, ಪ್ರೌಢ ಶಿಕ್ಷಣ & ಕಾಲೇಜು ಶಿಕ್ಷಣವನ್ನು ತಾಲೂಕು & ಜಿಲ್ಲಾಮಟ್ಟದಲ್ಲಿ ಸ್ಥಾಪಿಸುವುದು.
✓ ಸರಕಾರವು ಶಾಲಾ ಕಾಲೇಜುಗಳನ್ನು ಸ್ಥಾಪಿಸಲು ಖಾಸಗಿ ವ್ಯಕ್ತಿ & ಸಂಘ ಸಂಸ್ಥೆಗಳಿಗೆ ಪ್ರೋತ್ಸಾಹ ನೀಡುವುದು, ಖಾಸಗಿ ಶಾಲೆಗಳಿಗೆ ಅನುದಾನ ನೀಡುವುದು.
✓ ಪ್ರತಿ ಪ್ರಾಂತ್ಯದಲ್ಲಿ ಶಿಕ್ಷಣದ ತರಬೇತಿಗೆ ಶಾಲೆಗಳನ್ನು ತೆರೆಯುವುದು. ಶಿಕ್ಷಕರಿಗೆ ಶಿಷ್ಯವೇತನ ನೀಡುವುದು.
✓ ವೃತ್ತಿ ಶಿಕ್ಷಣಕ್ಕೆ ಮಹತ್ವ ಕೊಡುವುದು. ವಿದ್ಯಾರ್ಥಿವೇತನ ಕೊಡುವುದು. ಸ್ತ್ರೀ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವುದು. ಶಿಕ್ಷಣವನ್ನು ಸಮೂಹ ಶಿಕ್ಷಣವಾಗಿ ಪರಿವರ್ತಿಸುವುದು.
✓ ಭಾರತದ ಜನಕೋಟಿಗೆ ಸಹಾಯಕವಾಗುವಂತೆ ಜಾತ್ಯಾತೀತ ಶಿಕ್ಷಣ ನೀಡುವುದು. ನಮ್ಮ ಗುರಿಯಾಗಿದೆ ಎಂದು ವುಡ್ ತಿಳಿಸಿದನು. ಹೀಗಾಗಿ ಅವನನ್ನು 'ಭಾರತದ ಆಧುನಿಕ ಶಿಕ್ಷಣ ವ್ಯವಸ್ಥೆಯ ಜನಕ'ನೆಂದು ಕರೆಯಲಾಗಿದೆ.

**ಭಾರತೀಯ ಶಿಕ್ಷಣ ಆಯೋಗ (1882–83) (ಹಂಟರ್ ಆಯೋಗ)**

ವೈಸರಾಯ್ ಲಾರ್ಡ್ ರಿಪ್ಪನನು ಶಿಕ್ಷಣ ಪ್ರಗತಿ ಬಗ್ಗೆ ವರದಿ ಸಲ್ಲಿಸಲು ಫೆಬ್ರವರಿ 03 1883 ರಂದು 'ಹಂಟರ್' ಅಧ್ಯಕ್ಷತೆಯಲ್ಲಿ ಆಯೋಗ ನೇಮಿಸಿದರು. ವರದಿಗಳು ಇಂತಿವೆ.

✓ ಪ್ರಾಥಮಿಕ ಶಿಕ್ಷಣಕ್ಕೆ ಮಹತ್ವ & ಜಿಲ್ಲಾ ಮುನ್ಸಿಫ್ ಬೋರ್ಡ್‌ಗಳಿಂದ ಇದರ ಮೇಲ್ವಿಚಾರಣೆ.
✓ ಇಂಗ್ಲೀಷ್ ಭಾಷೆಗಿಂತ ಪ್ರಾಂತೀಯ ಭಾಷೆಗೆ ಮಹತ್ವ.
✓ ಶಿಕ್ಷಣ ಜಾತ್ಯಾತೀತವಾಗಿರಬೇಕು. ಸರ್ಕಾರಿ ಶಾಲೆಗಳಲ್ಲಿ ಯಾವುದೇ ಮತ, ಧರ್ಮಬೋಧನೆಗೆ ಅವಕಾಶವಿಲ್ಲ.
✓ ಶಿಷ್ಯವೇತನ, ಶುಲ್ಕ ವಿಚಾರದಲ್ಲಿ ಕಾಲೇಜುಗಳಲ್ಲಿ ಏಕತೆಯಿರಬೇಕು.
✓ ಮುಸ್ಲೀಂರ, ಸ್ತ್ರೀಯರ, ನಿಮ್ನ ವರ್ಗಗಳ ಶಿಕ್ಷಣಕ್ಕೆ ಅನುಕೂಲ.

**ಭಾರತೀಯರ ವಿಶ್ವವಿದ್ಯಾನಿಲಯಗಳ ಆಯೋಗ–1902**

- ವೈಸ್ರಾಯ್ ಲಾರ್ಡ್ ಕರ್ಜನ್ ರಾಷ್ಟ್ರೀಯ ಚಳುವಳಿ ಹತ್ತಿಕ್ಕಲು ಶಿಕ್ಷಣ ಸಂಸ್ಥೆಗಳ ಮೇಲೆ ಕಟ್ಟುನಿಟ್ಟಾದ ಸರಕಾರದ ನಿಯಂತ್ರಣ ಹೇರಿದನು. ಈತ 1902 ಸರ್ 'ಥಾಮಸ್ ರ‍್ಯಾಲಿ' ಅಧ್ಯಕ್ಷತೆಯಲ್ಲಿ ಶಿಕ್ಷಣಾ ಸಮಿತಿ ರಚಿಸಿದರು. ವರದಿಯ ಅಂಶಗಳು ಇಂತಿವೆ.
- ಭಾರತ ವಿಶ್ವವಿದ್ಯಾನಿಲಯಗಳ ಕಾಯಿದೆ – 1904.
- ವಿ.ವಿ.ಗಳಲ್ಲಿ ಸೆನೆಟ್ & ಸಿಂಡಿಕೇಟ್ ರಚಿಸಬೇಕೆಂದು ತಿಳಿಸಿತು. ಇವು ವಿ.ವಿ.ಗಳ ಆಡಳಿತ. ಉತ್ತಮ ಕಾರ್ಯನಿರ್ವಹಣೆಗೆ ರಚಿಸಲ್ಪಟ್ಟವು.

**1913 ರ ಸರ್ಕಾರದ ನಿರ್ಣಯ:** ಪ್ರಾಂತ್ಯ ಸರಕಾರಗಳು ಪ್ರಾಥಮಿಕ ಶಿಕ್ಷಣವು ಶುಲ್ಕ ರಹಿತವಾಗಿ ನೀಡಬೇಕೆಂದು ಹೇಳಿತು.

**ಸ್ಯಾಡ್ಲರ್ ವಿಶ್ವವಿದ್ಯಾನಿಲಯ ಆಯೋಗ (1917–19):**

- ಕಲ್ಕತ್ತಾ ವಿಶ್ವವಿದ್ಯಾನಿಲಯದ ಸಮಸ್ಯೆಯನ್ನು ಕುರಿತು ಅಧ್ಯಯನ ಮಾಡಲು ಡಾ॥ ಎಂ.ಸ್ಯಾಡ್ಲರ್ ಅಧ್ಯಕ್ಷತೆಯಲ್ಲಿ ಕಲ್ಕತ್ತಾ ವಿಶ್ವವಿದ್ಯಾನಿಲಯ ಆಯೋಗವನ್ನು ಸ್ಥಾಪಿಸಲಾಯಿತು. ಇದರಲ್ಲಿ ಕಲ್ಕತ್ತಾ ವಿ.ವಿ. ಉಪಕುಲಪತಿ ಆಶಿತೋಷ್ ಮುಖರ್ಜಿ & ಡಾ.ಜಿಯಾವುದ್ದೀನ್ ಅಹ್ಮದ್' ಎಂಬ ಇಬ್ಬರು ಭಾರತೀಯರಿದ್ದರು. ವರದಿಗಳು ಇಂತಿವೆ.

INSTA KAS



Note : For reference purpose only, not for commercial purpose

- ಇಂಟರ್ ಮಿಡಿಯೇಟ್ ಶಿಕ್ಷಣ 12 ವರ್ಷ. ಇಂಟರ್ ಮಿಡಿಯೇಟ್ ಪಾಸಾದ ವಿದ್ಯಾರ್ಥಿಗಳನ್ನು ಮಾತ್ರ ವಿ.ವಿ.ಗೆ ಪ್ರವೇಶ ನೀಡುವುದು. ಇಂಟರ್ ಮಿಡಿಯೇಟ್‌ಗಳನ್ನು ಹೈಸ್ಕೂಲಿನಿಂದ ಪ್ರತ್ಯೇಕಿಸುವುದು. ಹೈಸ್ಕೂಲ್ & ಇಂಟರ್ ಮಿಡಿಯೇಟ್‌ಗೆ ಪ್ರತ್ಯೇಕ ಇಲಾಖೆ ಸ್ಥಾಪಿಸುವುದು.
- ಪದವಿ ಕೋರ್ಸ್‌ಗಳ ಕಾಲಾವಧಿ 03 ವರ್ಷಗಳು.
- ಕಲ್ಕತ್ತಾ ವಿ.ವಿ.ಯನ್ನು ಬಂಗಾಳ ಸರ್ಕಾರ ನಿಯಂತ್ರಣಕ್ಕೆ ವಹಿಸುವುದು.
- ಹೈಸ್ಕೂಲ್‌ವರೆಗೆ ಮಾತ್ರ ಮಾತೃಭಾಷೆ, ನಂತರ ಇಂಗ್ಲೀಷ್ ಭಾಷೆ,
- ಸ್ತ್ರೀ ಶಿಕ್ಷಣ ವಿಸ್ತರಿಸುವುದು, ಇದಕ್ಕಾಗಿ ಪ್ರತ್ಯೇಕ ಮಂಡಲಿ ಸ್ಥಾಪನೆ.
- ವೃತ್ತಿಪರ ಕಾಲೇಜುಗಳನ್ನು ವಿ.ವಿ.ಗಳಿಗೆ ವಹಿಸಿಕೊಡುವುದು.

ಸ್ಯಾಡ್ಲರ್ ವರದಿಯಂತೆ 1916–21 ರ ಅವಧಿಯಲ್ಲಿ ಮೈಸೂರು, ಅಲಹಾಬಾದ್, ಬನಾರಸ್, ಪಾಟ್ನಾ, ಢಾಕಾ, ಅಲಿಘರ್, ಲಖ್ನೋ, ಹೈದರಾಬಾದ್, ದೆಹಲಿ, ರಂಗಪೂರ, ನಾಗ್ಪುರಗಳಲ್ಲಿ ವಿ.ವಿ.ಗಳನ್ನು ಸ್ಥಾಪಿಸಲಾಯಿತು.

- 1927 ರಲ್ಲಿ 'ರವೀಂದ್ರನಾಥ ಟ್ಯಾಗೋರ್' ವಿಶ್ವಭಾರತಿಯನ್ನು ಸ್ಥಾಪಿಸಿದರು.
- ಮಹರ್ಷಿ ಕರ್ವೆ ಮಹಾರಾಷ್ಟ್ರದಲ್ಲಿ ಪ್ರಪ್ರಥಮ ಮಹಿಳಾ ವಿವಿ ಸ್ಥಾಪಿಸಿದರು.

### ಹಾರ್ಟಂಗ್ ಸಮಿತಿ (1929)

- ಸೈಮನ್ ಆಯೋಗವು ಭಾರತದ ಶಿಕ್ಷಣದ ಗುಣಮಟ್ಟವನ್ನು ಪರಿಶೀಲಿಸಿ ವರದಿ ಮಾಡಲು 'ಸರ್ ಫಿಲಿಫ್ ಹಾರ್ಟಾಂಗ್'ರವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿದರು.
- ಪ್ರಾಥಮಿಕ ಶಿಕ್ಷಣಕ್ಕೆ ಮಹತ್ವ. ಆದರೆ ಕಡ್ಡಾಯವಲ್ಲ.
- ಸೆಕೆಂಡರಿ & ಇಂಟರ್ ಮಿಡಿಯೇಟ್ ಶಿಕ್ಷಣವನ್ನು ಅರ್ಹರಾದವರಿಗೆ ಮಾತ್ರ.
- ವಿ.ವಿ.ಗಳಿಗೆ ಪ್ರವೇಶಾವಕಾಶ ಮಿತಿಗೊಳಿಸುವುದು.

### ವಾರ್ಧಾ ಶಿಕ್ಷಣ ಯೋಜನೆ (1937)

- 1937 ರಲ್ಲಿ ಗಾಂಧೀಜಿ ತಮ್ಮ 'ಹರಿಜನ' ಪತ್ರಿಕೆಯಲ್ಲಿ ಮೂಲ ಶಿಕ್ಷಣದ ಬಗ್ಗೆ ಪ್ರಸ್ತಾಪಿಸಿದರು. ಇದನ್ನೇ 'ವಾರ್ಧಾ ಶಿಕ್ಷಣ ಯೋಜನೆ' ಎನ್ನಲಾಗುತ್ತದೆ.
- ಚಟುವಟಿಕೆಯ ಮೂಲಕ ಶಿಕ್ಷಣ ಕಲಿಯಬೇಕೆಂಬುದೇ ಇದರ ಉದ್ದೇಶ.
- ಜಾಕೀರ್ ಹುಸೇನ್ ಸಮಿತಿಯು ಪಠ್ಯಕ್ರಮ, ಬೋಧನೆ, ಶಿಕ್ಷಣ ತರಬೇತಿ, ಶಿಕ್ಷಣ ನಿರ್ವಹಣೆ ಮೊದಲಾದ ಅಂಶಗಳ ಬಗ್ಗೆ ವರದಿ ಮಾಡಿತು. ಆದರೆ ಮಂತ್ರಿಮಂಡಲಗಳಿಗೆ ಕಾಂಗ್ರೆಸ್ ರಾಜೀನಾಮೆ ನೀಡಿದ್ದರಿಂದ ಈ ಯೋಜನೆ ಜಾರಿಗೆ ಬರಲಿಲ್ಲ.

### ಸಾರ್ಜೆಂಟ್ ಯೋಜನೆ (1944): ಸರ್ ಜಾನ್ ಸಾರ್ಜೆಂಟ್ ಅಧ್ಯಕ್ಷತೆ.

- 6–11 ವರ್ಷದ ಎಲ್ಲಾ ಮಕ್ಕಳಿಗೆ ಉಚಿತ & ಕಡ್ಡಾಯ ಶಿಕ್ಷಣ.
- ಪ್ರೌಢ ಶಿಕ್ಷಣ 11–17 ವಯಸ್ಸಿನವರೆಗೆ ನೀಡುವುದು. ಡಿಗ್ರಿ ಅವಧಿ 03 ವರ್ಷ.
- ಕಾಲೇಜು ಅವರ ಪ್ರವೇಶಾವಕಾಶವನ್ನು ಮಿತಿಗೊಳಿಸುವುದು. ಅಂದರೆ ಹೈಸ್ಕೂಲ್‌ನಲ್ಲಿ 10 ಮಂದಿಯಲ್ಲಿ ಒಬ್ಬರಿಗೆ ಪ್ರವೇಶ ನೀಡುವುದು.
- ಇಂಟರ್ ಮಿಡಿಯೇಟ್ ಶಾಲೆ ರದ್ದುಪಡಿಸುವುದು.
- ವಿದ್ಯಾರ್ಥಿ ವೇತನ, ಶಾಲೆಗಳಿಗೆ ಧನಸಹಾಯ ಬಗ್ಗೆ ವರದಿ ನೀಡಿತು.

### ರಾಧಾಕೃಷ್ಣನ್ ಆಯೋಗ (1948–49)

- ಸ್ವತಂತ್ರ ಭಾರತದ ಸರ್ಕಾರ ಡಾ॥ ಎಸ್. ರಾಧಾಕೃಷ್ಣನವರ ಅಧ್ಯಕ್ಷತೆಯ ವಿ.ವಿ. ಆಯೋಗ ನೇಮಿಸಿತು.
- ಜಾಮಿಯಾ ವಿ.ವಿ. & ಶಾಂತಿನಿಕೇತನ ವಿ.ವಿ.ಗಳ ಮಾದರಿಯಲ್ಲಿ ಗ್ರಾಮೀಣ ವಿ.ವಿ.ಯನ್ನು ಸ್ಥಾಪಿಸುವುದು.
- ಪದವಿಪೂರ್ವ ಶಿಕ್ಷಣ 12 ವರ್ಷಗಳು ಇರಬೇಕು.
- ಪರೀಕ್ಷಾ ದಿನಗಳು ಬಿಟ್ಟು ವಿ.ವಿ.ಗಳು 180 ದಿನಗಳು ಕಡ್ಡಾಯ ಕೆಲಸ ಮಾಡುವುದು.
- ವಿ.ವಿ.ಗಳ ಮೇಲ್ವಿಚಾರಣೆ & ಗುಣಮಟ್ಟ ಉತ್ತಮಪಡಿಸಲು UGC 'ವಿಶ್ವವಿದ್ಯಾನಿಲಯಗಳ' ಧನಸಹಾಯ ಆಯೋಗ' ಸ್ಥಾಪಿಸುವುದು.
- ವಿ.ವಿ.ಗಳ ಅಧ್ಯಾಪಕರ ಸಂಬಳ ಹೆಚ್ಚಿಸುವುದು.
- 100 ಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳನ್ನು ಒಂದು ವಿ.ವಿ.ಗೆ ಪ್ರವೇಶ ಕೊಡಬಾರದು.
- ಸರ್ಕಾರ ಈ ಶಿಫಾರಸ್ಸುಗಳನ್ನು 1953 ರಲ್ಲಿ ಒಪ್ಪಿ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗವನ್ನು ಸ್ಥಾಪಿಸಿತು.
- 1952 ರಲ್ಲಿ ನೇಮಕವಾದ ಡಾ॥ ಎ.ಲಕ್ಷ್ಮಣಸ್ವಾಮಿ ಮೊದಲಿಯಾರ್ ನೇತೃತ್ವದ ಆಯೋಗವು ಪ್ರೌಢಶಿಕ್ಷಣವನ್ನು ಉತ್ತಮಪಡಿಸಲು ವರದಿ ನೀಡಿತು.

### ಕೋಠಾರಿ ಶಿಕ್ಷಣ ಆಯೋಗ (1964–66)

1964 ಜುಲೈನಲ್ಲಿ ಕೋಠಾರಿ ಅಧ್ಯಕ್ಷತೆಯಲ್ಲಿ **'ರಾಷ್ಟ್ರೀಯ ಮಾದರಿ ಶಿಕ್ಷಣ ಕುರಿತು ವರದಿ'** ಮಾಡಲು ಆಯೋಗವನ್ನು ನೇಮಿಸಲಾಯಿತು.

- ನೈತಿಕತೆ ಮತ್ತು ಸಾಮಾಜಿಕ ಜವಾಬ್ದಾರಿ ಬೆಳೆಸುವಂತಹ ಶಿಕ್ಷಣಕ್ಕೆ ಆದ್ಯತೆ.
- ಮಾಧ್ಯಮಿಕ ಶಿಕ್ಷಣವನ್ನು ವೃತ್ತಿ ಶಿಕ್ಷಣವನ್ನಾಗಿ ಮಾಡುವುದು.
- ವಿ.ವಿ.ಗಳು ಅಂತರಾಷ್ಟ್ರೀಯ ಗುಣಮಟ್ಟವನ್ನು ಕಾಯ್ದುಕೊಳ್ಳಬೇಕು.
- ಶಾಲಾ ಶಿಕ್ಷಕರ ತರಬೇತಿ & ಗುಣಮಟ್ಟಕ್ಕೆ ವಿಶೇಷ ಗಮನ ನೀಡುವುದು.

ಭಾರತ ಸರ್ಕಾರ ಕೋಠಾರಿ ಆಯೋಗದ ಶಿಫಾರಸ್ಸುಗಳನ್ನು ಒಪ್ಪಿ ಅಂಗೀಕರಿಸಿತು. ಇದನ್ನು ರಾಷ್ಟ್ರೀಯ ಶಿಕ್ಷಣ ನೀತಿ ಎಂದು ಕರೆಯಲಾಗಿದೆ. ಪ್ರಮುಖ ಅಂಶಗಳು ಈ ಕೆಳಗಿನಂತಿವೆ.

- 14 ವರ್ಷದವರೆಗೆ ಉಚಿತ & ಕಡ್ಡಾಯ ಶಿಕ್ಷಣ.
- ತ್ರಿಭಾಷಾ ಸೂತ್ರ ಅಳವಡಿಸಿಕೊಳ್ಳುವುದು & ಪ್ರಾದೇಶಿಕ ಭಾಷೆಗಳ ಅಭಿವೃದ್ಧಿಗೆ ಗಮನ ನೀಡುವುದು.
- ಕೃಷಿ & ಕೈಗಾರಿಕಾ ಶಿಕ್ಷಣದ ಕಡೆ ಗಮನ ತರುವುದು.
- ಅಲ್ಪ ಬೆಲೆಯಲ್ಲಿ ಪಠ್ಯಪುಸ್ತಕಗಳ ಮುದ್ರಣಕ್ಕೆ ಗಮನ ನೀಡುವುದು.
- ರಾಷ್ಟ್ರೀಯ ಆದಾಯದ 6% ರಷ್ಟು ಹಣವನ್ನು ಶಿಕ್ಷಣಕ್ಕೆ ವಿನಿಯೋಗಿಸುವನು.

### ಭಾರತೀಯ ರಾಜ್ಯಗಳೊಂದಿಗೆ ಬ್ರಿಟೀಷರ ಸಂಬಂಧಗಳು

- ದೇಶಿಯ ರಾಜ್ಯಗಳೊಡನೆ ಬ್ರಿಟೀಷರು ಹೊಂದಿದ ಸಂಬಂಧಗಳು ಅಥವಾ ನೀತಿಯನ್ನು 'ಸರ್ ವಿಲಿಯಂ ವಾರ್ನರ್'ವರು 'ದಿ ನೆಟಿವ್ ಸ್ಟೆಟ್ಸ್ ಆಫ್ ಇಂಡಿಯಾ' ಎಂಬ


Note : For reference purpose only, not for commercial purpose
INSTA KAS

ಕೃತಿಯಲ್ಲಿ 3 ಭಾಗಗಳಾಗಿ ವಿಂಗಡಿಸಿದ್ದಾರೆ. ಆದರೆ ಪ್ರಸ್ತುತ ವಾದಗಳಿಂದ 05 ಭಾಗಗಳಲ್ಲಿ ಕಾಣಬಹುದು.

1) ಸಮಾನತೆಗಾಗಿ ಕಂಪೆನಿ ಹೋರಾಟ (1740–1765)

2) ಸುತ್ತು ಬೇಲಿನ ನೀತಿ (1765–1813)
ರಿಂಗ್ ಫೆನ್ಸ್ ಪಾಲಿಸಿ ಅಥವಾ ಸುತ್ತು ಬೇಲಿನ ನೀತಿಯು 'ತನ್ನ ಸ್ವಂತ ಪ್ರದೇಶಗಳ ಕ್ಷೇಮಕ್ಕಾಗಿ ನೆರೆಹೊರೆಯ ರಾಜ್ಯಗಳನ್ನು ಗಡಿಗಳನ್ನು ರಕ್ಷಿಸುವುದು ಎಂದು ದೇಶಿಯ ಸಂಸ್ಥಾನಗಳಲ್ಲಿ 'ಹಸ್ತಕ್ಷೇಪರಹಿತ' ನೀತಿಯಿದು.

3) ಅಧೀನ ಪ್ರತ್ಯೇಕತೆಯ ನೀತಿ (1813–1857): ದೇಶೀಯ ರಾಜ್ಯಗಳನ್ನು ಕಂಪನಿಯ ಅಧೀನಕ್ಕೆ ಒಳಪಡಿಸುವ ನೀತಿಯು ಅವನ್ನು ಕಂಪೆನಿಯ ಪರಮಾಧಿಕಾರಕ್ಕೆ ತರುವ ನೀತಿಯಿದು. ಕಂಪೆನಿಯ ಪ್ರಭಾವವನ್ನು ವಿಸ್ತರಿಸುವುದೇ ಈ ನೀತಿಯ ಉದ್ದೇಶವಾಗಿತ್ತು. ಗೌರ್ನರ್ ಲಾರ್ಡ್ ಹೇಸ್ಟಿಂಗ್ಸ್‌ನು ಈ ನೀತಿಯ ಆಸ್ತಿಭಾರಕ.

- ಬೆಂಟಿಕ್ ಡಾಲ್‌ಹೌಸಿಯವರ ಕಾಲದಲ್ಲಿ ಈ ನೀತಿ ಶಿಖರ ಮುಟ್ಟಿತು. ಈ ನೀತಿ ಅನುಸರಿಸಿ ಆಕ್ರಮಿಸಿದ ರಾಜ್ಯಗಳು ಈ ಕೆಳಗಿನಂತಿವೆ.

1. 1831 ರಲ್ಲಿ ದುರಾಡಳಿತದ ನೆಪವೊಡ್ಡಿ ಮೈಸೂರು ಸಂಸ್ಥಾನವನ್ನು ಬೆಂಟಿಕ್‌ನು ವಶಪಡಿಸಿಕೊಂಡನು.
2. 1834 ರಲ್ಲಿ ಅವಿಧೇಯತೆ ನೆಪವೊಡ್ಡಿ ಚಿಕ್ಕವೀರ ರಾಜೇಂದ್ರನಿಂದ ಕೊಡಗು & ಕಿತ್ತೂರನ್ನು 1824 ರಲ್ಲಿ ವಶಪಡಿಸಿಕೊಳ್ಳಲಾಯಿತು.
3. ಎಲ್ಲೆನ್ ಬರೋ ಗ್ವಾಲಿಯರನ್ನು, ಹೈದ್ರಾಬಾದಿನ ನಿಜಾಂನಿಂದ ಬಿರಾರ್‌ನ್ನು, ಮಾಂಡವಿ, ಕೊಲಬಾ, ಸೂರತ್‌ಗಳು ವಶವಾದವು.
4. ಲಾರ್ಡ್ ಡಾಲ್‌ಹೌಸಿಯಿಂದ ದತ್ತು ಮಕ್ಕಳಿಗೆ ಉತ್ತರಾಧಿಕಾರದ ಹಕ್ಕಿಲ್ಲ ನೀತಿಯಿಂದ ಹಲವು ರಾಜ್ಯಗಳನ್ನು ವಶಪಡಿಸಿಕೊಳ್ಳಲಾಯಿತು.

4) ಅಧೀನ ಒಕ್ಕೂಟ ನೀತಿ (1857–1935): ದೇಶೀಯ ರಾಜ್ಯಗಳ ಬ್ರಿಟನ್ ಸಾಮ್ರಾಜ್ಯದ ಅಂಗವಾಗಿ ಭಾರತದ ಒಕ್ಕೂಟದಲ್ಲಿರುವ ನೀತಿಯಿದು. ಮುಖ್ಯಾಂಶಗಳು ಇಂತಿವೆ.

1. ವಿಕ್ಟೋರಿಯಾ ರಾಣಿ ಘೋಷಣೆ – 1858
2. ಲಾರ್ಡ್ ಕ್ಯಾನಿಂಗ್ ನೀತಿ: 1860 ರಲ್ಲಿ 141 ಸನ್ನದುಗಳನ್ನು ನೀಡಿ ಮಕ್ಕಳಿಲ್ಲದ ಹಿಂದೂ & ಮುಸ್ಲಿಂ ರಾಜರಿಗೆ ದತ್ತು ಸ್ವೀಕಾರಕ್ಕೆ ಅವಕಾಶ ನೀಡಿದನು. ಈತ 1862 ರಲ್ಲಿ ಬ್ರಿಟೀಷ ಚಕ್ರವರ್ತಿಯೇ ಭಾರತದಲ್ಲಿ ಸರ್ವೋನ್ನತ ಶಕ್ತಿ ಎಂದು ಹೇಳಿದ್ದಾನೆ.
3. ಗಾಯಕವಾಡನ ವಿಚಾರಣೆ: ಬರೋಡದಲ್ಲಿ ಬ್ರಿಟೀಷ ರೆಸಿಡೆಂಟ್ ಕರ್ನಲ್ ಪೈ ಮಹಾರಾಜ ಗಾಯಕವಾಡ ಮೇಲೆ ತೀವ್ರ ಆಡಳಿತ ದೋಷಾರೋಪ ಹೊರಿಸಿದ. ಹೀಗಾಗಿ ಗಾಯಕವಾಡ ರೆಸಿಡೆಂಟ್ ಕೊಲೆಗೆ ಯತ್ನಿಸಿ ಸಿಕ್ಕಿಬಿದ್ದ ವೈಸ್ರಾಯ್ ನಾರ್ತ್‌ಬ್ರೂಕ್‌ನು ಬಂಧಿಸಿ ವಿಚಾರಣೆಗೊಳಪಡಿಸಿದರು.
4. ರಾಯಲ್ ಟೈಟಲ್ ಆ್ಯಕ್ಟ್–1876: ಈ ಆ್ಯಕ್ಟ್‌ನಂತೆ ಮಹಾರಾಣಿ ವಿಕ್ಟೋರಿಯಾ 'ಭಾರತದ ಸಾಮ್ರಾಜ್ಞಿ' (ಕೈಸರ್–ಇ–ಹಿಂದ್) ಎಂಬ ಬಿರುದು ಪಡೆದಳು. ಇಲ್ಲಿಗೆ ದೇಶೀಯ ರಾಜರು ಬ್ರಿಟನ್ ಚಕ್ರವರ್ತಿ ಸಮ ಎಂಬ ನೀತಿ ಕೊನೆಗೊಂಡು ರಾಜರು ಬ್ರಿಟೀಷರ ಅಧೀನರಾದರು. ಲಾರ್ಡ್ ಲಿಟ್ಟನ್ ಅದ್ದೂರಿ ಸಮಾರಂಭ ಏರ್ಪಡಿಸಿದ (ದೆಹಲಿಯಲ್ಲಿ).
5. ಮೈಸೂರಿನ ಪುನರ್ದಾನ: 1881 ರಲ್ಲಿ
6. ಮಣಿಪುರ ರಾಜ್ಯ ಪ್ರಕರಣ : 1891
7. ಕರ್ಜನ್ ನೀತಿ: ವಿಭಜನೆ ನೀತಿ (ಬಂಗಾಳ)
8. ಛೇಂಬರ್ ಆಫ್ ಪ್ರಿನ್ಸಸ್: ಮೊದಲ ಮಹಾಯುದ್ಧದಲ್ಲಿ ಬ್ರಿಟನ್ ಪರವಾಗಿ ಸೇವೆ ಸಲ್ಲಿಸಿದ ದೇಶಿಯ ರಾಜರುಗಳ ಸೇವೆ ಪರಿಗಣಿಸಿ ಮಾಂಟೆಗೋ ಜೆಮ್ಸ್‌ಫರ್ಡ್‌ರ ವರದಿಯಂತೆ 1921 ಫೆಬ್ರವರಿ 08 ರಂದು ಇದನ್ನು ಸ್ಥಾಪಿಸಲಾಯಿತು.
   - 120 ದೇಶೀಯ ರಾಜರ ಸಂಸ್ಥಾನಗಳ ಪ್ರತಿನಿಧಿಗಳು ವರ್ಷಕ್ಕೆ 02 ಬಾರಿ ವೈಸ್ರಾಯ್ ಅಧ್ಯಕ್ಷತೆಯಲ್ಲಿ ಸಭೆ ಸೇರುತ್ತಿತ್ತು. ಇದು ದೇಶೀಯ ರಾಜರ ಸಮಸ್ಯೆಗಳನ್ನು ಕುರಿತು ಚರ್ಚಿಸುತ್ತಿತ್ತು.
   - ವೈಸ್ರಾಯ್ ಗೈರು ಹಾಜರಿಯಲ್ಲಿ ಛಾನ್ಸಲರ್‌ನನ್ನು ಆಯ್ಕೆಮಾಡುತ್ತಿತ್ತು. ಇದು ಕೇವಲ ಸಲಹಾ ಸಂಸ್ಥೆಯಾಗಿತ್ತು.
9. ಬಟ್ಲರ್ ಸಮಿತಿ
   ಬ್ರಿಟೀಷ್ & ರಾಜ್ಯಗಳ ನಡುವಿನ ಸಂಬಂಧಗಳನ್ನು ಕುರಿತು ವರದಿ ಮಾಡಲು ಡಿಸೆಂಬರ್ 16, 1927 ರಂದು ಸರ್. ಹರ್‌ಕೋರ್ಟ್ ಬಟ್ಲರ್ ಅಧ್ಯಕ್ಷತೆಯಲ್ಲಿ 'ಬಟ್ಲರ್ ಸಮಿತಿ' ನೇಮಿಸಲಾತು. 1929 ರಲ್ಲಿ ವರದಿ ನೀಡಿತು. ಇದು ಭಾರತೀಯ ರಾಜ್ಯಗಳು ಬ್ರಿಟನ್ ಸಂಸತ್‌ಗೆ ಅಧೀನವಾಗಿಯೇ ಹೊರತು ಭಾರತ ಸರ್ಕಾರಕ್ಕಲ್ಲ. ಆದ್ದರಿಂದ ಅವುಗಳಿಗೆ ಸುಂಕದಲ್ಲಿ ಪಾಲು ಕೊಡಬೇಕಿಲ್ಲ ಎಂದು ಹೇಳಿತು. (ಬ್ರಿಟೀಷರು ದೇಶೀಯ ಸಂಸ್ಥಾನಗಳ ಆಂತರಿಕ ವ್ಯವಹಾರಗಳಲ್ಲಿ ತಲೆ ಹಾಕುತ್ತಿದ್ದದ್ದಕ್ಕೆ ಪ್ರತಿಯಾಗಿ ರಾಜರು ಭಾರತ ಸರ್ಕಾರದ ಸುಂಕದಲ್ಲಿ ಪಾಲು ಕೇಳತೊಡಗಿದ. ಇವರಿಬ್ಬರ ಸಂಬಂಧಗಳ ಬಗ್ಗೆ ಸಮಿತಿ ರಚಿಸಲಾಗಿತ್ತು.

5) ಸಮಾನತೆಯ ಒಕ್ಕೂಟ (1935–47): 1935 ರ ಕಾಯಿದೆ ಪಾಸು.

INSTA KAS



Note : For reference purpose only, not for commercial purpose

# ಪತ್ರಿಕೋದ್ಯಮ ಮತ್ತು ಸರ್ಕಾರದ ನೀತಿ

**ಉಗಮ:** ಪೋರ್ಚುಗೀಸರು 1557 ರಲ್ಲಿ ಗೋವಾದಲ್ಲಿ ಪ್ರಥಮ ಬಾರಿಗೆ ಪ್ರಥಮ ಮುದ್ರಣಾಲಯವನ್ನು ಸ್ಥಾಪಿಸಿದರು. ಬ್ರಿಟೀಷರು ಬಾಂಬೆಯಲ್ಲಿ 1684 ರಲ್ಲಿ ಪ್ರೆಸ್ ತೆರೆದರು.

- ಜೇಮ್ಸ್ ಆಗಸ್ಟಸ್ ಹಿಕಿ: ಭಾರತದ ಪ್ರಪ್ರಥಮ ವಾರಪತ್ರಿಕೆ & ಬೆಂಗಾಲ್ ಗೆಜೆಟ್‌ನ್ನು(1780) ಹೊರಡಿಸಿದನು. ಹಿಕಿ ಪತ್ರಿಕಾ ಸ್ವಾತಂತ್ರ್ಯದ ಮೊದಲ ಪ್ರತಿಪಾದಕನಾದ್ದರಿಂದ "ಭಾರತದ ಪತ್ರಿಕೋದ್ಯಮದ ಪಿತಾಮಹ" ಎಂದು ಕರೆಯಲಾಗುತ್ತದೆ.
- ಲಾರ್ಡ್ ವೆಲ್ಲೆಸ್ಲಿಯು ಪತ್ರಿಕೆಯ ಮೇಲೆ ನಿರ್ಬಂಧ ಹೇರಿದನು. 1807 ರಲ್ಲಿ ಸೆನ್ಸಾರ್ ಶಿಪ್ ಕಾಯಿದೆ (ದೋಷ ವಿಮರ್ಶಾಧಿಕಾರ) ಜಾರಿಗೆ ಬಂದು ಪತ್ರಿಕೆಗಳು ಕರಾರುಪತ್ರದ ಆಧಾರದ ಮೇಲೆ ಕಡ್ಡಾಯವಾಗಿ ಬರೆದು ಕೊಡಬೇಕಾಯಿತು.
- ಲಾರ್ಡ್ ಹೇಸ್ಟಿಂಗ್ಸ್‌ನು ಉದಾರವಾದಿಯಾಗಿದ್ದು, ಪತ್ರಿಕೆಗಳ ಮೇಲಿನ ನಿರ್ಬಂಧ ರದ್ದು ಮಾಡಿದನು. ಇವನ ಕಾಲದಲ್ಲಿ ದೇಶಿಯ ಪತ್ರಿಕೆಗಳು ಬೆಳಕಿಗೆ ಬಂದವು (1818 ರ ನಂತರ)
- 1823 ರ ಪತ್ರಿಕಾ ನಿರ್ಬಂಧ ಕಾಯಿದೆ: ಗೌರ್ನರ್ ಜನರಲ್ ಜಾನ್ ಆಡಂನು ಮನ್ರೋ' ವರದಿ ಆಧರಿಸಿ ಕಾಯ್ದೆ ಮಾಡಿ ಪತ್ರಿಕೆಗಳ ಮೇಲೆ ನಿರ್ಬಂಧ ಹೇರಿದನು. ಕಾಯಿದೆ ಪ್ರಕಾರ ಪ್ರಕಾಶಕರು & ಮುದ್ರಕರು ಸರ್ಕಾರದಿಂದ ಲೈಸೆನ್ಸ್ ಪಡೆಯಬೇಕಿತ್ತು. ಕಾಯ್ದೆ ಪ್ರಕಾರ ಸರ್ಕಾರಕ್ಕೆ ಪತ್ರಿಕಾ ಲೈಸೆನ್ಸ್ ರದ್ದುಪಡಿಸುವ ಅಧಿಕಾರವಿತ್ತು.
- ಚಾರ್ಲ್ಸ್ ಮೆಟ್‌ಕಾಫ್‌ನ ನೀತಿ: 1823 ರ ಕಾಯಿದೆ ರದ್ದುಪಡಿಸಿದನು. ಹೊಸ ಪತ್ರಿಕಾ ಕಾಯಿದೆ ಪ್ರಕಾಶಕರು & ಮುದ್ರಕರು ಡಿಕ್ಲೆರೇಷನ್ ಕೊಡುವಂತೆ ಮಾಡಿದ. ಹೀಗಾಗಿ ಮೆಟ್‌ಕಾಫ್‌ನನ್ನು 'ಪತ್ರಿಕೋದ್ಯಮ ವಿಮೋಚಕ' ಎನ್ನಲಾಗುತ್ತದೆ.
- ಪರವಾನಗಿ ಕಾಯ್ದೆ – 1857: ಸಿಪಾಯಿದಂಗೆಯ ಪ್ರಕ್ಷುಬ್ದ ವಾತಾವರಣದಿಂದ ಲೈಸೆನ್ಸ್ ಕಾಯಿದೆ ಜಾರಿಗೆ ತಂದರು. ಲೈಸೆನ್ಸ್ ಇಲ್ಲದ ಪತ್ರಿಕೆ ಹಾಗೂ ಪ್ರೆಸ್‌ಗಳನ್ನು ನಿಷೇಧಿಸಿದರು.
- ನೋಂದಣಿ ಕಾಯ್ದೆ(1867): ಪತ್ರಿಕೆಗಳ ಮುದ್ರಕರ ವಿವರ ಸರ್ಕಾರಕ್ಕೆ ನೀಡಬೇಕಿತ್ತು. ಪ್ರಕಟಣೆಯ ನಂತರ ಪತ್ರಿಕೆ ಪ್ರತಿಯನ್ನು ಸರ್ಕಾರಕ್ಕೆ ಕಳಿಸಿಕೊಡಬೇಕಾಗಿತ್ತು. 1870 ರ ಮೇಲೆ ಮತ್ತೆ ಪತ್ರಿಕೋದ್ಯಮದ ಮೇಲೆ ನಿರ್ಬಂಧ ಹೇರಲಾಯಿತು.

### ದೇಶೀಯ ಭಾಷಾ ಪತ್ರಿಕಾ ಕಾಯ್ದೆ – 1878

ಲಾರ್ಡ್ ಲಿಟ್ಟನ್ ತನ್ನ ವಿರುದ್ಧದ ಪ್ರಕಟಣೆಯಿಂದ ಕೋಪಗೊಂಡು ಈ ಕಾಯ್ದೆ ಜಾರಿಗೆ ತಂದನು. ಸರ್ಕಾರದ ವಿರುದ್ಧ ಪ್ರಕಟಣೆ ಮಾಡಿದಲ್ಲಿ ವ್ಯಕ್ತಿ, ಪ್ರೆಸ್, ಪತ್ರಿಕೆಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತಿತ್ತು. ಪತ್ರಿಕೆಗಳು ಸರ್ಕಾರಕ್ಕೆ ನಿಗದಿತ ಭದ್ರತಾ ಠೇವಣಿಯನ್ನು ನೀಡಬೇಕಾಗಿತ್ತು. ಸರ್ಕಾರದ ವಿರುದ್ಧ ಪ್ರಕಟಿಸಿದ್ದಲ್ಲಿ ಠೇವಣಿ ಕಳೆದುಕೊಳ್ಳುತ್ತಿದ್ದವು. ಇದು ಆಂಗ್ಲರ ಪತ್ರಿಕೆಗಳಿಗೆ ಅನ್ವಯಿಸುತ್ತಿರಲಿಲ್ಲ. ಈ ಕಾಯಿದೆಯನ್ನು 'ಸಂಪಾದಕ ಸೊಕ್ಕು ಅಡಗಿಸುವ ಕಾಯಿದೆ' ಎನ್ನಲಾಗಿದೆ.

### ವೃತ್ತ ಪತ್ರಿಕಾ ಕಾಯಿದೆ – 1908

- ಲಾರ್ಡ್ ಕರ್ಜನ್‌ನ ಬಂಗಾಳ ವಿಭಜನೆ ನೀತಿಯನ್ನು ಪತ್ರಿಕೆಗಳು ಕಟುವಾಗಿ ಟೀಕಿಸಿದವು. ಹೀಗಾಗಿ ಈ ಕಾಯ್ದೆ ಜಾರಿಗೆ ತಂದ ಸರ್ಕಾರದ ವಿರುದ್ಧದ ಲೇಖನಗಳು ಪ್ರಕಟಣೆಗೊಂಡರೆ ಮುಟ್ಟುಗೋಲು ಹಾಕಿಕೊಳ್ಳುವ ಅಧಿಕಾರ ನೀಡಲಾಯಿತು.
- ಭಾರತೀಯ ವೃತ್ತ ಪತ್ರಿಕಾ ಕಾಯ್ದೆ – 1910: ಈ ಕಾಯಿದೆಯು ಸರ್ಕಾರದ ಪತ್ರಿಕೆ ಮೇಲೆ ಸರ್ಕಾರದ ಹಿಡಿತವನ್ನು ಹೆಚ್ಚಿಸಿತು.

### ಭಾರತೀಯ ವೃತ್ತ ಪತ್ರಿಕಾ ಕಾಯಿದೆ – 1931

- ಸ್ವಾತಂತ್ರ್ಯ ಚಳುವಳಿಗಳ ತೀವ್ರತೆಯಿಂದ ಪತ್ರಿಕೆಗಳ ಹಿಡಿತ ಬಿಗಿಗೊಳಿಸಲು ಈ ಕಾಯ್ದೆ ಜಾರಿಗೆ ತರಲಾಯಿತು.
  ಹಿಂಸೆ, ಕೊಲೆ, ಪಿತೂರಿಗೆ ಪ್ರಚೋದನೆ ನೀಡುವ ಪತ್ರಿಕೆಗಳನ್ನು ನಿಷೇಧಿಸುವ ಮ್ಯಾಜಿಸ್ಟ್ರೇಟರ ಆದೇಶದಂತೆ ಸುದ್ದಿ ಪ್ರಕಟಿಸುವ ಅಂಶಗಳನ್ನು ಒಳಗೊಂಡಿತು.
  1932 ರಲ್ಲಿ ವಿದೇಶಿ ವ್ಯವಹಾರಗಳ ಕಾಯಿದೆ ಪಾಸಾಗಿ ಸರ್ಕಾರ & ಅದರ ಆಶ್ರಿತ ರಾಜ್ಯಗಳನ್ನು ಕೆಡಿಸುವ ಯಾವುದೇ ಲೇಖನಗಳ ಪ್ರಕಟಣೆಯನ್ನು ತಡೆಹಿಡಿಯಲಾಯಿತು.

ಭಾರತವು ಸ್ವಾತಂತ್ರ್ಯ ಪಡೆದ ನಂತರ 'ಪ್ರೆಸ್ ವಿಚಾರಣಾ ಸಮಿತಿ ಸ್ಥಾಪಿಸಿ, ಬ್ರಿಟೀಷರು ಹೇರಿದ್ದ ಎಲ್ಲಾ ನಿರ್ಬಂಧಗಳನ್ನು ರದ್ದು ಮಾಡಿದರು. 1948 ಪ್ರೆಸ್ ಕೌನ್ಸಿಲ್‌ನ್ನು ಇದೇ ವರ್ಷ ಪ್ರೆಸ್ ಟ್ರಸ್ಟ್ ಆಫ್ ಇಂಡಿಯಾವನ್ನು ಸ್ಥಾಪಿಸಲಾಯಿತು. 1959 ರಲ್ಲಿ United News of India ಸ್ಥಾಪಿಸಲಾಯಿತು.

### ಸ್ಥಳೀಯ ಸರ್ಕಾರಗಳ ಬೆಳವಣಿಗೆ

- 1687 ರಲ್ಲಿ ಮೊದಲ ಬಾರಿಗೆ ಮದ್ರಾಸಿನಲ್ಲಿ ಮುನ್ಸಿಪಾಲ್ ಕಾರ್ಪೊರೇಷನ್ ಅನ್ನು ಸ್ಥಾಪಿಸಿದರು. ನಂತರ ಬಾಂಬೆ ಕಲ್ಕತ್ತಾಗಳಲ್ಲಾದವು. ಆದರೆ ಸ್ಥಳೀಯರು ತೆರಿಗೆ ಕೊಡದೇ ಸಹಕರಿಸದಿದ್ದರಿಂದ ವಿಫಲವಾಯಿತು.
- 1773 ರ ರೆಗ್ಯುಲೇಟಿಂಗ್ ಕಾಯ್ದೆ ಗೌರ್ನರ್ ಜನರಲ್ ಪ್ರಾಂತ್ಯ ರಾಜಧಾನಿಗೂ 'ಜಸ್ಟ್ ಆಫ್ ಪೀಸ್' ನೇಮಿಸುವ ಅಧಿಕಾರ ಕೊಟ್ಟಿತು.
- 1842, 1854, 1856 ರ ಕಾಯಿದೆಗಳು ನಗರಗಳಲ್ಲಿ ಮುನ್ಸಿಪಲ್‌ಗಳ ಸ್ಥಾಪನೆಗೆ ಆದೇಶಿಸಿದವು. ರಾಯಲ್ ಆರ್ಮಿ ಸ್ಯಾನಿಟರಿ ಕಮಿಷನ್ ಸಾರ್ವಜನಿಕ ಆರೋಗ್ಯದ ಬಗ್ಗೆ ಗಮನ ಹರಿಸಿತು.
- 1861 ರ ಕಾಯಿದೆ ಸ್ಥಳೀಯ ಸರ್ಕಾರಗಳ ಸ್ಥಾಪನೆಗೆ ಪ್ರೋತ್ಸಾಹಿಸಿತು. 1869 ರಲ್ಲಿ ಬಾಂಬೆ ಸರ್ಕಾರ ಪ್ರತಿ ಜಿಲ್ಲೆಯಲ್ಲಿ ಲೋಕಲ್ ಫಂಡ್ ಕಮಿಟಿ ಸ್ಥಾಪನೆಗೆ ಅವಕಾಶ ನೀಡಿತು.
- 1870 ರಲ್ಲಿ ಮೇಯೋ ನಿರ್ಣಯದಂತೆ, ಸ್ಥಳೀಯ ಸರ್ಕಾರಗಳಿಗೆ ಶಿಕ್ಷಣ, ಆರೋಗ್ಯ, ಹಣಕಾಸು ಸಂಗ್ರಹಣೆ ಇತ್ಯಾದಿ ಕಾರ್ಯಗಳನ್ನು ವಹಿಸಲಾಯಿತು. ಪ್ರಾಂತೀಯ ಮಟ್ಟದಲ್ಲಿ ಮುನ್ಸಿಪಾಲಿಟಿಗಳ ಸ್ಥಾಪನೆ ಉತ್ತೇಜಿಸಲು ಮುನ್ಸಿಪಾಲಿಟಿ ಕಾಯಿದೆ ಜಾರಿಯಾಯಿತು.

### ರಿಪ್ಪನ್ ನಿರ್ಣಯ – 1882

ಈತನನ್ನು 'ಭಾರತದ ಸ್ಥಳೀಯ ಸರ್ಕಾರಗಳ ಪಿತಾಮಹ' ಎನ್ನಲಾಗುತ್ತದೆ.

- ತಾಲ್ಲೂಕು & ಜಿಲ್ಲಾ ಬೋರ್ಡ್‌ಗಳನ್ನು ಸ್ಥಾಪಿಸಿದನು. ಇಲ್ಲಿ ಚುನಾಯಿತ ಪ್ರತಿನಿಧಿಗಳು ಬಹುಸಂಖ್ಯಾತರಾಗಿರಬೇಕೆಂದು ಆದೇಶಿಸಿದನು.
  ಪ್ರಾಂತ್ಯ ಸರಕಾರಗಳು ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚಿನ ಹಣಕಾಸು ನೆರವು ಕೊಡುವಂತೆ ಆದೇಶಿಸಿದನು & ಮೇಲ್ವಿಚಾರಣೆಗೆ ಸೂಚಿಸಿದನು.
- 1908 ರ ವಿಕೇಂದ್ರೀಕರಣ ಆಯೋಗವು ಸಂಪನ್ಮೂಲದ ವಿಕೇಂದ್ರೀಕರಣದ ಆದೇಶಿಸಿ ಸ್ಥಳೀಯ ಸರ್ಕಾರಗಳ ಮೇಲೆ ಸರ್ಕಾರದ ನಿಯಂತ್ರಣ ಸಲ್ಲದು ಎಂದು ಹೇಳಿದನು.
- 1917 ರ ಸರ್ಕಾರದ ಘೋಷಣೆ
  1) ಸ್ಥಳೀಯ ಸರ್ಕಾರಗಳನ್ನು ಸರಕಾರದ ಅಧಿಕಾರ ವ್ಯಾಪ್ತಿಯಿಂದ ಹೊರಗಿಡಲಾಯಿತು.

INSTA KAS

2) ಚುನಾಯಿತರು ಬಹುಸಂಖ್ಯಾತರಾಗಿರಬೇಕು. ಮುನ್ಸಿಪಲ್ ಸಮಿತಿಗಳಲ್ಲಿ ಅಧಿಕಾರೇತರ ಅಧ್ಯಕ್ಷನಿರುವುದು. ಅವುಗಳಲ್ಲಿ ಅಲ್ಪಸಂಖ್ಯಾತರ ನಾಮಕರಣಕ್ಕೆ ಮಹತ್ವ ನೀಡುವುದು.

3) ಸ್ಥಳೀಯ ಸಂಸ್ಥೆಗಳಿಗೆ ಕಂದಾಯ ವಿಧಿಸಿ, ಸಂಗ್ರಹಿಸುವ ಸಂಪೂರ್ಣ ಸ್ವಾತಂತ್ರ್ಯ.

4) ಶಾಶ್ವತ ಅಧಿಕಾರಿಗಳಾದ ಇಂಜಿನಿಯರ್, ಕಾರ್ಯದರ್ಶಿ, ಕಾರ್ಯ ನಿರ್ಧರಿಸುವುದು.

- 1919 ರಲ್ಲಿ ಸ್ಥಾಪಿತ ದ್ವಿ ಸರ್ಕಾರದಲ್ಲಿ ಸ್ಥಳೀಯ ಸರ್ಕಾರಗಳು, ವರ್ಗಾಯಿಸಿದ ವಿಷಯಗಳಲ್ಲಿ ಬಂದು ಮಂತ್ರಿಗಳ ಹತೋಟಿಗೆ ಬಂದವು. ಆದರೆ ಹಣಕಾಸು ಮೀಸಲು ವಿಷಯಗಳಲ್ಲಿ ಬಂದದ್ದರಿಂದ ಪ್ರಗತಿ ಸಾಧಿಸಲಾಗಲಿಲ್ಲ.
- 1935 ರ ಕಾಯಿದೆ ಪ್ರಾಂತೀಯ ಸ್ವಾಯತ್ತೆ ನೀಡಿ ಸ್ಥಳೀಯ ಸರ್ಕಾರಗಳು ಪ್ರೋತ್ಸಾಹ ನೀಡಿತು. ಹೊಸ ಮುನ್ಸಿಪಾಲಿಟಿ, ಹೊಸ ಗ್ರಾಮ ಪಂಚಾಯ್ತಿಗಳು ಆರಂಭವಾದವು.
- 1950 ರಲ್ಲಿ ಮದ್ರಾಸ್ ಗ್ರಾಮಪಂಚಾಯ್ತಿ ಕಾಯ್ದೆ ಪಾಸಾಗಿ 500 ಜನಸಂಖ್ಯೆ ಗ್ರಾಮಕ್ಕೆ ಪಂಚಾಯ್ತಿ ಬೋರ್ಡ್‌ನ್ನು ದಯಪಾಲಿಸಲಾಯಿತು.
- ಭಾರತದಲ್ಲಿ ಕ್ಷಾಮ ಪರಿಹಾರಕ್ಕೆ 03 ಮುಖ್ಯ ಆಯೋಗಗಳನ್ನು ನೇಮಿಸಲಾಯಿತು.

  1) ಸರ್ ರಿಚರ್ಡ್ ಸ್ಟ್ರಾಚ್ ಆಯೋಗ – 1880 (ವೈಸ್ರಾಯ್ ಲಾರ್ಡ್ ಲಿಟ್ಟನ್)

  2) ಸರ್. ಜೇಮ್ಸ್ ಲ್ಯಾಲೆ ಆಯೋಗ – 1897

  3) ಸರ್. ಮ್ಯಾಕ್ ಡೋನಾಲ್ಡ್ ಆಯೋಗ – 1901 (ಲಾರ್ಡ್ ಕಾರ್ಜನ್)

**ಗಾಂಧೀ–ಜಿನ್ನಾ ಮಾತುಕತೆ:** ಸೆಪ್ಟೆಂಬರ್ 09, 1944 ರಲ್ಲಿ ಗಾಂಧೀಜಿಯು ದ್ವಿರಾಷ್ಟ್ರ ಸಿದ್ಧಾಂತದ ಗುರಿ ಬಿಟ್ಟು ಸ್ವಾತಂತ್ರ್ಯ ಸಾಧನೆಗೆ ಮುಸ್ಲೀಂರ ಸಹಕಾರ ಅಗತ್ಯ ಎಂದು ಸಲಹೆ ನೀಡಿದರು. ಆದರೆ ಜಿನ್ನಾ ದ್ವಿರಾಷ್ಟ್ರ ಸಿದ್ಧಾಂತಕ್ಕೆ ಅಂಟಿಕೊಂಡಿದ್ದರಿಂದ ವಿಫಲವಾಯಿತು.

**ದೇಸಾಯಿ–ಲಿಯಾಖತ್ ಒಪ್ಪಂದ:** ಹಿಂದೂ–ಮುಸ್ಲೀಂರು ಒಟ್ಟಾಗಿ ಮಧ್ಯಂತರ ಸರ್ಕಾರ ರಚನೆ ಬಗ್ಗೆ ಒಪ್ಪಂದವಾಯಿತು. ಆದರೆ ಕಾಂಗ್ರೆಸ್ & ಲೀಗ್ ಈ ಒಪ್ಪಂದ ತೃಪ್ತಿಯಾಗಲಿಲ್ಲ.

**ವೆವೆಲ್ ಯೋಜನೆ** – ಜನವರಿ 14, 1945: ದ್ವಿತೀಯ ಮಹಾಯುದ್ಧದಲ್ಲಿ ಭಾರತೀಯರ ಸಹಾಯ ಯಾಚಿಸಿ ವೈಸ್ರಾಯ್ ವೆವೆಲ್‌ನು ರೇಡಿಯೋ ಮೂಲಕ ಸುದ್ದಿ ಬಿತ್ತರಿಸಿದನು. ಇದೇ ವೆವೆಲ್ ಯೋಜನೆ.

1) ಕೇಂದ್ರದಲ್ಲಿ ವೈಸ್ರಾಯ್ ಕಾರ್ಯಕಾರಿ ಸಮಿತಿ ರಚನೆ, ಅದರಲ್ಲಿ ಹಿಂದೂ–ಮುಸ್ಲೀಂರಿಗೆ ಸಮಾನ ಪ್ರಾತಿನಿಧ್ಯ. ಯುದ್ಧ ಮುಗಿದ ಬಳಿಕ ಭಾರತೀಯರು ಸಂವಿಧಾನವನ್ನು ರಚಿಸಿಕೊಳ್ಳಲು ಅವಕಾಶ.

2) ವೈಸ್ರಾಯ್‌ಗೆ ವಿಟೋ ಅಧಿಕಾರ. ಯುದ್ಧ ಖಾತೆ ಸರಕಾರದ ಕೈಯಲ್ಲಿರುತ್ತದೆ. ಆದರೆ ವಿದೇಶಾಂಗ ಖಾತೆ ಭಾರತೀಯರ ಕೈಯಲ್ಲಿರುತ್ತದೆ. ವೈಸ್ರಾಯ್ ಕಾರ್ಯಕಾರಿ ಸಮಿತಿಯನ್ನು ವೈಸ್ರಾಯ್ & ಪ್ರಧಾನ ದಂಡಾಧಿಕಾರಿ ಬಿಟ್ಟು ಉಳಿದವರೆಲ್ಲರೂ ಭಾರತೀಯರೇ ಆಗಿರುತ್ತಾರೆ.

3) ಬ್ರಿಟೀಷರ ವಾಣಿಜ್ಯ ಹಿತಾಸಕ್ತಿಯನ್ನು ನೋಡಿಕೊಳ್ಳಲು ಒಬ್ಬ ಬ್ರಿಟೀಷ್ ಹೈ ಕಮಿಷನರ್‌ನನ್ನು ನೇಮಿಸುವುದು. ಭಾರತದ ವಿದೇಶಾಂಗ ಕಾರ್ಯದರ್ಶಿ ಬ್ರಿಟನ್ ಹೊರತಾಗಿ ಭಾರತದ ಹಿತಾಸಕ್ತಿಯಲ್ಲಿ ಮಾತ್ರ ಹಸ್ತಕ್ಷೇಪ ಮಾಡಬೇಕು.

4) ಪ್ರಾಂತ್ಯಗಳಲ್ಲಿ ಗೌರ್ನರ್ ಮತ್ತು ಮಂತ್ರಿಗಳ ಹತೋಟಿವುಳ್ಳ ಸಮ್ಮಿಶ್ರ ಸರಕಾರ ರಚಿಸುವುದು.

**ಸಿಮ್ಲಾ ಸಮ್ಮೇಳನ (1945)**

ವೆವೆಲ್ ಯೋಜನೆ ಅಂಶಗಳನ್ನು ಚರ್ಚಿಸಲು ಜೂನ್ 25, 1945 ರಂದು ಸರ್ವಪಕ್ಷಗಳ ಸಭೆ ಸಿಮ್ಲಾದಲ್ಲಿ ನಡೆಯಿತು. ಗಾಂಧೀಜಿಯವರು ವೈಸ್ರಾಯ್ ಕಾರ್ಯಕಾರಿ ಸಮಿತಿಯಲ್ಲಿ ಹಿಂದೂ–ಮುಸ್ಲೀಂ ಸಮಸಂಖ್ಯೆಯಲ್ಲಿರಬೇಕೆಂಬ ಜಿನ್ನಾರ ವಾದವನ್ನು ತಿರಸ್ಕರಿಸಿ 5 ಮಂದಿ ಕಾಂಗ್ರೆಸ್ಸಿಗರು & 2 ಮುಸ್ಲೀಂ ಲೀಗ್ ಸದಸ್ಯರಿರಬೇಕು ಎಂದು ಹೇಳಿದರು. ಇದನ್ನು ಜಿನ್ನಾ ಒಪ್ಪಲಿಲ್ಲ. ಅಲ್ಲದೇ ಸಮಿತಿಯಲ್ಲಿ ಲೀಗ್ ಸದಸ್ಯರು ವಿರೋಧಿಸಿದ ಯಾವುದೇ ನಿರ್ಣಯವನ್ನು ವೈಸ್ರಾಯ್ ವಿಟೋ ಅಧಿಕಾರ ಚಲಾಯಿಸಿ ವರ್ಜಿಸಬೇಕೆಂದು ಜಿನ್ನಾ ಹಠ ಹಿಡಿದರು. ಜಿನ್ನಾರ ಈ ಉದ್ಧಟತನದಿಂದ ಈ ಸಮ್ಮೇಳನ ವಿಫಲವಾಯಿತು.

**ದೇಶೀಯ ಸಂಸ್ಥಾನಗಳ ವಿಲೀನಿಕರಣ**

- ಜುಲೈ 5, 1947 ರಂದು ಪಟೇಲರು 'ಇಂಡಿಯನ್ ಸ್ಟೇಟ್ಸ್ ಡಿಪಾರ್ಟ್‌ಮೆಂಟಿನ' ಅಧಿಕಾರವನ್ನು ವಹಿಸಿಕೊಂಡರು. ಪಟೇಲರು 1947 ಸೆಪ್ಟೆಂಬರ್ 13 ರಂದು ಎಲ್ಲಾ ದೇಶೀಯ ಸಂಸ್ಥಾನಗಳಿಗೆ ಸುತ್ತೋಲೆ ಕಳಿಸಿ ಅವು 'ಭಾರತ ಒಕ್ಕೂಟ ವಿಲೀನ ಪತ್ರ' ಕ್ಕೆ ಸಹಿ ಹಾಕಿ ಭಾರತ ಒಕ್ಕೂಟಕ್ಕೆ ಅಧೀನರಾಗುವಂತೆ ತಿಳಿಸಿದರು. ಒಕ್ಕೂಟಕ್ಕೆ ಸೇರುವ ರಾಜರಿಗೆ 'ರಾಜಧನ' ನೀಡಲಾಗುವುದೆಂದು ತಿಳಿಸಿದರು. ಪಟೇಲರು ಹೈದ್ರಾಬಾದ್, ಜುನಾಗಢ, ಕಾಶ್ಮೀರ್‌ಗಳು ಒಕ್ಕೂಟಗಳಿಂದ ಹೊರಗುಳಿಯಲು ಬಯಸಿದವರಾದ್ದರಿಂದ ಅವುಗಳ ವಿಲೀನಕ್ಕೆ ರಕ್ತ & ಉಕ್ಕು ನೀತಿಯನ್ನು ಅನುಸರಿಸಿದರು.

**ಹೈದ್ರಾಬಾದ್ ಸೇರ್ಪಡೆ:**

- ಮೀರ್ ಓಸ್ಮಾನ್ ಆಲಿಖಾನ್ ನವಾಬನಾಗಿದ್ದ. ಸೆಪ್ಟೆಂಬರ್ 13, 1948 ರಲ್ಲಿ ಮೇಜರ್ ಜನರಲ್ ಚೌಧರಿ ನೇತೃತ್ವದಲ್ಲಿ 'ಆಪರೇಷನ್ ಪೋಲೋ' ಎಂದು ಕರೆಯುವ 108 ಗಂಟೆಗಳ ಕಾಲದ ಪೊಲೀಸ್ ಕ್ರಮಕೈಗೊಂಡು ಹೈದರಾಬಾದನ್ನು ವಶಪಡಿಸಿಕೊಂಡರು.

**ಕಾಶ್ಮೀರ್ ಸೇರ್ಪಡೆ:**

- ಪಾಲ್ ಸೇನಾನಿ ಅಕ್ಬರ್ ಖಾನ್‌ನಿಂದ ಪ್ರಚೋದಿತ ಮುಸ್ಲೀಂರು ಶ್ರೀನಗರದಲ್ಲಿ ಹಿಂಸಾತ್ಮಕ ಕೃತ್ಯದಲ್ಲಿ ತೊಡಗಿದರು. ಅಲ್ಲದೇ ಇವರಿಗೆ ಶಸ್ತ್ರಾಸ್ತ್ರಗಳನ್ನು ನೀಡಿತು. ಇದರಿಂದ ಭಯಗೊಂಡ ರಾಜಾಹರಿಸಿಂಗ್‌ನು ಭಾರತ ನೆರವು ಕೋರಿ, ಸೇರ್ಪಡೆ ಒಪ್ಪಂದಕ್ಕೆ ಸಹಿ ಹಾಕಿದನು. (26–10–1947). ಭಾರತ ಸೈನ್ಯದ ನಾಯಕತ್ವವನ್ನು ಜನರಲ್ 'ಕೆ.ಎಸ್. ತಿಮ್ಮಯ್ಯ' ವಹಿಸಿದ್ದರು. ಪ್ರಧಾನಿ ನೆಹರು ಡಿಸೆಂಬರ್ 31, 1947 ರಂದು ಕಾಶ್ಮೀರ ಸಮಸ್ಯೆಯನ್ನು ವಿಶ್ವಸಂಸ್ಥೆ ಮುಂದಿಟ್ಟರು. 1949 ರಲ್ಲಿ ವಿಶ್ವಸಂಸ್ಥೆ ಭದ್ರತಾ ಸಮಿತಿ ನೇಮಿಸಿದ 'ಸರ್ ಓವನ್ ಡಿಕ್ಸನ್ & ಡಾ॥ ಫ್ರಾಂಕ್, ಟಿ ಗ್ರಹಾಂ' ನೇತೃತ್ವದ ಆಯೋಗವು ಕಾಶ್ಮೀರದಲ್ಲಿ ಕದನ ವಿರಾಮ ಘೋಷಿಸಿತು. 1956 ರಲ್ಲಿ ಕಾಶ್ಮೀರವನ್ನು ಭಾರತದ ಅವಿಭಾಜ್ಯ ಅಂಗವೆಂದು ಸಾರಲಾಯಿತು.

**ಜುನಾಗಢ್ ಸೇರ್ಪಡೆ**

- ಜುನಾಗಢ್ ಗುಜರಾತ್‌ನ ಸೌರಾಷ್ಟ್ರದ ಒಂದು ಪುಟ್ಟ ಸಂಸ್ಥಾನ. ಮಹಬತ್ ಖಾನ್ ನವಾಬನಾಗಿದ್ದನು. ಈತ ಪಾಕ್ ಒಕ್ಕೂಟಕ್ಕೆ ಸೇರಲು ಇಚ್ಛಿಸಿ ಹಿಂದೂಗಳನ್ನು ಹಿಂಸಿಸತೊಡಗಿದ. ಹೀಗಾಗಿ ಹಿಂದೂಗಳ ದಂಗೆ ಎದ್ದಿದ್ದರಿಂದ ಪಾಕ್‌ಗೆ ಓಡಿಹೋದ. 'ಸಮಲ್ ಗಾಂಧಿ' ನೇತೃತ್ವದಲ್ಲಿ ತಾತ್ಕಾಲಿಕ ಸರ್ಕಾರ ಏರ್ಪಟ್ಟಿತು. 1948 ಫೆಬ್ರವರಿ 28 ಜನಮತಗಣನೆ ನಡೆದು ಶೇ. 90 ರಷ್ಟು ಜನ ಭಾರತ ಒಕ್ಕೂಟ ವಿಲೀನ ಪರ ಮತ ಹಾಕಿದರು.

**ಭೂಪಾಲ್ ಯೋಜನೆ**

- ಭೂಪಾಲ್ ನವಾಬನು ಛೇಂಬರ್ ಆಫ್ ಪ್ರಿನ್ಸಸ್ ಕಮಿಟಿಯ ಮುಖ್ಯಸ್ಥನಾಗಿ ಸ್ವತಂತ್ರ ಸಂಸ್ಥಾನಗಳ ಒಕ್ಕೂಟ ಸ್ಥಾಪಿಸಲು

INSTA KAS



Note : For reference purpose only, not for commercial purpose

'ಭೂಪಾಲ್ ಯೋಜನೆ' ರೂಪಿಸಿತು. ಆದರೆ ಉದಯಪುರದ ರಾಜ 'ಭೂಪಾಲಸಿಂಗ್‌ನು' ನವಾಬನ ಯೋಜನೆಯನ್ನು ವಿಫಲಗೊಳಿಸಿ ಭಾರತದ ಒಕ್ಕೂಟಕ್ಕೆ ಸೇರಲು ಕಾರಣನಾದನು.

- ಜೋಧ್‌ಪುರದ ಮಹಾರಾಜ ಪಾಕಿಸ್ತಾನಕ್ಕೆ ಸೇರುವ ಆಸೆ ಹೊಂದಿದ್ದಾಗ ವಿ.ಪಿ.ಮೆನನ್ ಅವರ ಮನವೊಲಿಸಿ ಭಾರತದ ಒಕ್ಕೂಟಕ್ಕೆ ಸೇರಿಸಿದನು.

**ತಿರುವಾಂಕೂರ:** ದಿವಾನ ಸಿ.ಪಿ. ರಾಮಸ್ವಾಮಿ ಅಯ್ಯರ್ ಅಲ್ಲಿನ ರಾಜನಿಗೆ ತಿರುವಾಂಕೂರನು ಸ್ವತಂತ್ರವಾಗಿ ಉಳಿಸಿಕೊಳ್ಳುವಂತೆ ಸಲಹೆ ನೀಡಿದನು. ಆದರೆ ಈ ಕ್ರಮವನ್ನು ವಿರೋಧಿಸಿ ಭಾರತದ ರಾಷ್ಟ್ರೀಯ ಕಾಂಗ್ರೆಸ್ಸಿನ ಹೋರಾಟಗಾರರು ಚಳುವಳಿ ಆರಂಭಿಸಿದನು. ಇದನ್ನು 'ಪುನಪ್ರವಯಲಾರ್ ಹೋರಾಟ' ಎಂದು ಕರೆಯಲಾಗಿದೆ. ನಂತರ ಒಕ್ಕೂಟಕ್ಕೆ ಸೇರಿಸಲಾಯಿತು.

- ಸರ್ ಸೈಯದ್ ಅಹ್ಮದ್‌ಖಾನ್‌ನನ್ನು 'ಭಾರತದ ಕೋಮುವಾದದ ಪಿತಾಮಹ ಕೋಮುವಾದದ ಉಕ್ಕಿನ ಮನುಷ್ಯ' ಎನ್ನಲಾಗುತ್ತದೆ.
- 1871 ರಲ್ಲಿ ಹಂಟರ್‌ನ The Indian Muslaman's ಎಂಬ ಕೃತಿಯು ಕೋಮುವಾದವನ್ನು ಪ್ರಚೋದಿಸುತ್ತದೆ.
- ಮೊದಲು ಹಿಂದೂ–ಮುಸ್ಲೀಂ ಐಕ್ಯತೆ ಪರವಾಗಿದ್ದ ಅಲಿಘರ್ ಚಳುವಳಿಗೆ ಕೋಮು ಸ್ವರೂಪ ಕೊಟ್ಟವರು 'ಥಿಯೋಡಾರ್ ಬೇಕ್'.
- 1925 ಅಕ್ಟೋಬರ್ 25 ರಂದು ಡಾ॥ ಹೆಡ್ಗೆವಾರರ ನೇತೃತ್ವದಲ್ಲಿ RSS ಅಸ್ತಿತ್ವಕ್ಕೆ ಬಂದಿತು.

INSTA KAS



Note : For reference purpose only, not for commercial purpose